ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಸಂಪುಟ 5 ಸಂಚಿಕೆ 7

ಫೆಬ್ರವರಿ 13, 2011

ಕನ್ನಡ ವಾರಪತ್ರಿಕೆ

ರೂ. 5/-

ಪುಟ 16

Blog :janashakthi.wordpress.com
e-mail : js_weekly@yahoo.com




ಈಜಿಪ್ಟ್, ಯಮನ್....
ಮಧ್ಯಪ್ರಾಚ್ಯದಲ್ಲಿ ಪ್ರಚಂಡ ಬಂಡಾಯ

ಚರ್ಚ್ ಮೇಲಿನ ದಾಳಿ - ಕೇಸರಿ ಪಡೆ ಖುಲಾಸೆ!
ಓತಿಕ್ಯಾತನಿಗೆ ಬೇಲಿ ನುಡಿದ ಸಾಕ್ಷಿ

ಮಹಿಳಾ ಕೂಲಿಕಾರರ ಪ್ರಥಮ ಸಮಾವೇಶ :
ಸಮಾನತೆಗೆ ಆಗ್ರಹ



ಜೀವ ಬೆದರಿಕೆ ಯಾರಿಂದ ?



ಬೆಲೆ ಏರಿಕೆ ನಿಯಂತ್ರಣ ಸಾಧ್ಯವಿಲ್ಲವೇಕೆ?

ವರ್ಗ ಮತ್ತು ಜಾತಿಗಳ ತಳುಕು

ಪಿ. ಸಂಪತ್ ತಮಿಳುನಾಡಿನ ಅಸ್ಪೃಶ್ಯತಾ ನಿವಾರಣಾ ರಂಗದ ಅಧ್ಯಕ್ಷರು ಮತ್ತು ಸಿಪಿಐ(ಎಂ)ನ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರು. ಅವರು ಇ.ಎಂ.ಎಸ್. ಭವನದಲ್ಲಿ ಜನವರಿ 3 ರಂದು ನಡೆದ ದಲಿತ ಹಕ್ಕು ಕಾರ್ಯಾಗಾರದಲ್ಲಿ ಮಂಡಿಸಿದ ವಿಚಾರಗಳು - ಮಾತುಗಳು ಇಲ್ಲಿವೆ. ಅಸ್ಪೃಶ್ಯತೆಯ ವಿರುದ್ಧದ ಹೋರಾಟದ ಹೃದಯಸ್ಪರ್ಶಿ ವಿವರಗಳು ಇಲ್ಲಿ ತೆರದುಕೊಂಡಿವೆ.

ವರದಿ : ಗೋಪಾಲಕೃಷ್ಣ ಅರಳಹಳ್ಳಿ


ದಲಿತರು ಎಂದರೆ ದುಡಿಯುವ ಜನ. ಈ ಜನ ವಿಭಾಗವನ್ನು ಸಿ.ಪಿ.ಐ(ಎಂ) ಜಾತಿ ತಾರತಮ್ಯದ ವಿರುದ್ಧ ಹೋರಾಟ ನಡೆಸುತ್ತಾ ಸಂಘಟಿಸುತ್ತಿದೆ. ದಲಿತ ಜಾತಿಗಳ ನಡುವೆಯೂ ತಾರತಮ್ಯವಿದೆ ಎಂಬುದನ್ನು ನಾವು ಗಮನಿಸಬೇಕಾಗಿದೆ. ಎಡ ಬಲ ಈ ಸಮುದಾಯಗಳ ನಡುವೆ ಇರುವ ಸಂಘರ್ಷವನ್ನು ತೊಲಗಿಸಿ, ಅಸ್ಪೃಶ್ಯತೆ ನಾಶಗೊಳಿಸುವ ತುರ್ತು ಅವಶ್ಯಕತೆಯಿದೆ.

ಈ ಹಿಂದೆ ಬ್ರಾಹ್ಮಣ, ಬ್ರಾಹ್ಮಣೇತರರ ನಡುವೆ ಸಂಘರ್ಷವಿತ್ತು. ಆದರೆ ಇತ್ತೀಚಿನ ದಶಕಗಳಲ್ಲಿ ಹಿಂದುಳಿದ ಸಮುದಾಯಗಳ ಹಲವು ವಿಭಾಗಗಳು ಭೂಮಾಲಿಕರಾಗಿ ಬದಲಾಗಿದ್ದಾರೆ. ಅಲ್ಲದೆ ಭೂಮಾಲಕರು ಹಿಂದುಳಿದ ಜಾತಿಯ ಜನರನ್ನು ಸಂಘಟಿಸುತ್ತಿದ್ದಾರೆ. ಹೀಗಾಗಿ ಹಿಂದುಳಿದವರು ಮತ್ತು ದಲಿತರ ನಡುವೆ ಸಂಘರ್ಷ ಏರ್ಪಡುತ್ತಿರುವುದನ್ನು ನಾವು ಗಮನಿಸಬೇಕಾಗಿದೆ. ಇದು ಅತ್ಯಂತ ಅಪಾಯಕಾರಿ ಬೆಳವಣಿಗೆಯಾಗಿದೆ. ಹಿಂದುಳಿದವರ ಮತ್ತು ದಲಿತರ ನಡುವಿನ ವೈರುಧ್ಯದಿಂದ ದುಡಿಯುವ ವರ್ಗದ ಐಕ್ಯತೆಗೆ ಧಕ್ಕೆ ಬಂದಿದೆ. ಅಸ್ಪೃಶ್ಯತೆ ಜಾತಿ ವ್ಯವಸ್ಥೆಯ ಭಾಗವಾಗಿದೆ. ಅಸ್ಪೃಶ್ಯತೆಯನ್ನು ತೊಲಗಿಸುವ ಪ್ರಯತ್ನ ತೀವ್ರವಾಗಬೇಕು. ಈ ಮೂಲಕ ಜಾತಿ ವ್ಯವಸ್ಥೆ ನಾಶಪಡಿಸಬೇಕು.

ದಲಿತರು ಆರ್ಥಿಕವಾಗಿ, ಸಾಮಾಜಿಕವಾಗಿ ಹಿಂದುಳಿದಿದ್ದಾರೆ. ಗ್ರಾಮೀಣ ಪ್ರದೇಶ ಶೇ.80 ರಷ್ಟುದಲಿತರು ಕೃಷಿ ಕಾರ್ಮಿಕರಾಗಿದ್ದಾರೆ. ನಗರ ಪ್ರದೇಶದಲ್ಲಿರುವ ದಲಿತರು ಶೇ.70 ಹೆಚ್ಚಾಗಿ ಕೊಳಚಿ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ. ಇವರ ಈ ಸಮಸ್ಯೆ ಗಂಭೀರವಾಗಿದ್ದು ಅವುಗಳ ಪರಿಹಾರಕ್ಕೆ ಹೋರಾಡುವುದು ಮುಖ್ಯ ವಿಷಯವಾಗಿದೆ.

ಸಮೀಕ್ಷೆ ವಿಧಾನ

ತಮಿಳುನಾಡಿನಲ್ಲಿ ಅಸ್ಪೃಶ್ಯತೆ ನಿವಾರಣಾ ರಂಗ ಸಮೀಕ್ಷೆ ನಡೆಸಿದೆ. ಈ ಸಮೀಕ್ಷೆಯಿಂದ 85 ವಿಧದ



ಜಾತಿ ತಾರತಮ್ಯಗಳು ಆಚರಣೆಯಲ್ಲಿರುವ ಅಂಶ ಇದರಲ್ಲಿ ತಿಳಿಯಿತು. ಟೀ ಅಂಗಡಿಗಳಲ್ಲಿ ಪ್ರತ್ಯೇಕ ಲೋಟ, ಟೀ ಕುಡಿಯುವ ಅಂಗಡಿಗಳಲ್ಲಿ 4 ವಿಧಗಳಿವೆ. 1. ಮೇಲ್ವರ್ಗದ ಜನರಿಗೆ ಪ್ರತ್ಯೇಕ ಲೋಟ, ಹಿಂದುಳಿದವರಿಗೆ ಬೇರೆಯ ಲೋಟ, ಅತ್ಯಂತ ಹಿಂದುಳಿದವರಿಗೆ ಪ್ರತ್ಯೇಕ ಲೋಟ, ದಲಿತರಿಗೆ ಪ್ರತ್ಯೇಕ ಲೋಟ. ದಲಿತರಿಗೆ ಬೆಂಚಿನ ಮೇಲೆ ಕುಳಿತುಕೊಳ್ಳುವ ಅವಕಾಶವಿಲ್ಲ. ಕೆಲವು ಕಡೆಗಳಲ್ಲಿ ತೆಂಗಿನ ಚಿಪ್ಪಿನಿಂದ ಟೀ ಕುಡಿಯಬೇಕು.

ದೇವಸ್ಥಾನಗಳಿಗೆ ಪ್ರವೇಶವಿಲ್ಲ

ಮೇಲ್ಜಾತಿ ಜನರಿಗೆ ಮಾತ್ರ ದೇವಸ್ಥಾನಗಳಿಗೆ ಪ್ರವೇಶ ದಲಿತರಿಗೆ ಇಂದಿಗೂ ದೇವಸ್ಥಾನಕ್ಕೆ ಪ್ರವೇಶವಿಲ್ಲ. ದೇವರ ಉತ್ಸವಗಳಲ್ಲಿ ದಲಿತರು ಪಲ್ಲಕ್ಕಿ ತೇರು ಎಳೆಯುವಂತಿಲ್ಲ. ದೇವರ ಮೆರವಣಿಗೆ ದಲಿತರ ಕೇರಿಗೆ ಬರುವುದಿಲ್ಲ. ಹಲವು ಕಡೆ ಪ್ರಸಾದ ಸ್ವೀಕರಿಸುವಂತಿಲ್ಲ. ಅನೇಕ ಕಡೆಗಳಲ್ಲಿ ಕುಡಿಯುವ ನೀರು ಹಿಡಿದುಕೊಳ್ಳಲು ಸಮಯ ನಿಗದಿಯಾಗಿರುವ ಅಂಶವು ತಿಳಿಯಿತು. ಮೇಲ್ಜಾತಿ ಜನರಿಗೆ ಒಂದು ಸಮಯ, ದಲಿತರಿಗೆ ಪ್ರತ್ಯೇಕ ಸಮಯ ನಿಗದಿಯಾಗಿದೆ.

ತಮಿಳುನಾಡು ಅಸ್ಪೃಶ್ಯತಾ ನಿರ್ಮೂಲನ ರಂಗದ ಹೋರಾಟ

ತಮಿಳುನಾಡಿನಲ್ಲಿ 23 ವಿಧದ ಜಾತಿ ದೌರ್ಜನ್ಯಗಳನ್ನು ರಂಗವು ಗುರುತಿಸಿ ಹೋರಾಟ ನಡೆಸಿದೆ. ದಲಿತರಲ್ಲಿ ಜಾಗೃತಿ ಮೂಡಿದಾಗ ದೌರ್ಜನ್ಯಗಳು ನಡೆಸಿ ಮಲ ತಿನ್ನಿಸುವ, ಮೂತ್ರ ಕುಡಿಸುವ ನೀಚ ಪ್ರಕರಣಗಳು ನಡೆದಿವೆ.

ಇಂತಹ ಸಂದರ್ಭದಲ್ಲಿ ನಾವು ಹೋರಾಟ ನಡೆಸಿದ್ದೇವೆ. ಸೋಲು, ಗೆಲುವುಗಳನ್ನು ಅನುಭವಿಸಿದ್ದೇವೆ. ಹೋರಾಟ ರೂಪಿಸುವ ಮೊದಲು ನಾವು ಸಮೀಕ್ಷೆ ನಡೆಸುತ್ತೇವೆ. ಸಮೀಕ್ಷೆ ಬಗ್ಗೆ ಮಾಧ್ಯಮದವರನ್ನು ಕರೆದು ವಿವರಿಸುತ್ತೇವೆ. ನಂತರ ಜಿಲ್ಲಾಧಿಕಾರಿಗಳಿಗೆ ತಹಶೀಲ್ದಾರರಿಗೆ ಮನವಿ ನೀಡಿ ಈ ಬಗ್ಗೆ ಕಾನೂನು ಕ್ರಮ ಜರುಗಿಸಲು ಒತ್ತಾಯಿಸುತ್ತೇವೆ. ಪರಿಹಾರ ಮಾರ್ಗಗಳನ್ನು ಕುರಿತು ಕಾನೂನು ಚೌಕಟ್ಟಿನಲ್ಲಿ ಸಲಹೆ ನೀಡುತ್ತೇವೆ. ನಂತರ ಕೆಲವು ದಿನಗಳ ಗಡುವು ನೀಡುತ್ತೇವೆ. ಯಾವುದೇ ಕ್ರಮ ಜರುಗಿಸದಿದ್ದರೆ ನಾವೇ ರಂಗದ ಮೂಲಕ ಸೇರಿ ನೇರ ಕಾರ್ಯಾಚರಣೆಗೆ ಇಳಿಯುತ್ತೇವೆ,

ಊತ್ತಪುರಂ ಹೋರಾಟ

ತಮಿಳುನಾಡಿನ ಈ ಹೋರಾಟ ರಾಷ್ಟ್ರಾದ್ಯಂತ ದೊಡ್ಡ ಸುದ್ದಿಯಾಯಿತು. ಮದುರೈ ಜಿಲ್ಲೆಯಲ್ಲಿರುವ ಊತ್ತಪುರಂನಲ್ಲಿ ಒಂದು ಕಿ.ಮೀ ಉದ್ದದ 10 ಅಡಿಯ ಗೋಡೆಯನ್ನು 20 ವರ್ಷಗಳ ಹಿಂದೆ ಸರ್ಕಾರದ ನೆರವಿನಿಂದಲೇ ನಿರ್ಮಿಸಲಾಗಿತ್ತು. ಇದು ಅಸ್ಪೃಶ್ಯತಾ ಗೋಡೆ. ಹಿಂದೆ ಊತ್ತಪುರಂ ಗ್ರಾಮದ ದೇವಾಲಯ ಪ್ರವೇಶಿಸುವ ಸಂಬಂಧ ದಲಿತರು ಹಕ್ಕು ಪ್ರತಿಪಾದಿಸಿದ್ದೇ ಕಾರಣವಾಗಿ ಜಾತಿ ತಿಕ್ಕಾಟ ಏರ್ಪಟ್ಟಿತ್ತು. ಈ ಹಿನ್ನೆಲೆಯಲ್ಲಿ ದಲಿತರು ಮೇಲ್ಜಾತಿ ಜನರಿರುವ ಕಡೆ ಓಡಾಡುವುದನ್ನು ತಡೆಯಲು ಈ ಗೋಡೆ ನಿರ್ಮಿಸಲಾಗಿತ್ತು. ಅಸ್ಪೃಶ್ಯತೆ ಆಚರಣೆಯ ಕುರಿತ ರಂಗದ ಸಮೀಕ್ಷೆಯ ಸಂದರ್ಭದಲ್ಲಿ ಈ ಅಂಶವು ಗಮನಕ್ಕೆ ಬಂದಿತು.

ಈ ಗೋಡೆ ನಿರ್ಮಾಣದ ಬಗ್ಗೆ ಸವರ್ಣೀಯರು ಹೇಳುವುದು - ದಲಿತರಲ್ಲಿ ಕೊಲೆಗಡುಕರು, ಕಳ್ಳರು, ದರೋಡೆಕೋರರು, ಸಮಾಜಘಾತುಕರಿದ್ದಾರೆ. ಅವರಿಂದ ರಕ್ಷಣೆ ಪಡೆಯುವುದಕ್ಕಾಗಿ ಈ ಗೋಡೆ ನಿರ್ಮಿಸಿದ್ದೇವೆಂದು.

ಈ ಗೋಡೆಯು ಅಸ್ಪೃಶ್ಯತೆಯ ದ್ಯೋತಕವಾಗಿತ್ತು. ಇದನ್ನು ತೆಗೆಯಬೇಕೆಂದು ಹೋರಾಟ ರೂಪಿಸಿದ್ದೆವು. ದಲಿತರಲ್ಲಿ ಜಾಗೃತಿ ಮೂಡಿಸಿದೆವು. ತಾಲ್ಲೂಕು ಕಛೇರಿ ಎದುರು 2000 ಮಂದಿ ಪ್ರತಿಭಟನೆ ನಡೆಸಿ ಜಿಲ್ಲಾಧಿಕಾರಿಗಳಿಗೂ ಮನವಿ ನೀಡಿದೆವು. ಪರಿಹಾರ ಸಿಗದಿದ್ದಾಗ ನಾವು, ಗೋಡೆ ಒಡೆಯುವುದಾಗಿ ತಿಳಿಸಿದೆವು. ಈ ಹೋರಾಟದಲ್ಲಿ ಸಿಪಿಐ(ಎಂ) ಪಕ್ಷದ ಪ್ರಧಾನ ಕಾರ್ಯದರ್ಶಿ ಪ್ರಕಾಶ್ ಕಾರಟ್ ತಾನು ಬರುತ್ತೇನೆಂದು ತಿಳಿಸಿದರು. ಇದು ರಾಜ್ಯಾದ್ಯಂತ ದೊಡ್ಡ ಸುದ್ದಿಯಾಯಿತು. ತಕ್ಷಣ ತಮಿಳುನಾಡು ಸರ್ಕಾರ ಎಚ್ಚೆತ್ತುಕೊಂಡು ರಾತ್ರೋರಾತ್ರಿ 2000 ಪೊಲೀಸ್ ಸಿಬ್ಬಂದಿ ಮೂಲಕ 25 ಅಡಿಗಳಷ್ಟು ಗೋಡೆಯನ್ನು ಕೆಡವಿಹಾಕಿತು. ಈ ಹೋರಾಟ ಅಲ್ಲಿ ದಲಿತರಿಗೆ ಸಂತಸ ತಂದಿತು. "ಪೊಲೀಸರು ನಮ್ಮ ಪರವಾಗಿ, ನಮಗೆ ರಕ್ಷಣೆ ನೀಡಲು ನಮ್ಮ ಗ್ರಾಮಕ್ಕೆ ಬಂದಿದ್ದು ಇದೇ ಮೊದಲು. ಈ ಹಿಂದೆ ಪೊಲೀಸರು ಗ್ರಾಮಕ್ಕೆ ಬಂದರೆಂದರೆ ಅದರ ಅರ್ಥ ಅವರು ಬಲಾಢ್ಯ ಜಾತಿ ಜನಗಳ ಪರವಾಗಿ ನಮ್ಮ ಮೇಲೆ ದೌರ್ಜನ್ಯ ನಡೆಸಲು ಬಂದಿದ್ದಾರೆಂದೇ ಆಗುತ್ತಿತ್ತು" ಎಂದು ಊತ್ತಪುರಂ ಯುವಕನೊಬ್ಬ ಹೋರಾಟದ ಪರಿಣಾಮದ ಬಗ್ಗೆ ಬಾರಿ ಸಂತಸ, ಅಭಿಮಾನದಿಂದ ನಡುರಾತ್ರಿ ಫೋನ್ ಮಾಡಿ ತಿಳಿಸಿದ್ದು ಒಂದು ಮರೆಯಲಾಗದ ಅನುಭವ. ಊತ್ತಪುರಂನಲ್ಲಿ ಅಸ್ಪೃಶ್ಯತೆಯ ಗೋಡೆ ಒಡೆದು ಹಾಕಿದ ಮೇಲೆ ಊರಿನ ಸವರ್ಣೀಯರೆಲ್ಲಾ ಮಹಿಳೆಯರು, ಮಕ್ಕಳು, ವಯಸ್ಸಾದವರು ಎಲ್ಲರೂ ಸೇರಿ ಊರನ್ನು ಬಿಟ್ಟು ಪಕ್ಕದ ಬೆಟ್ಟದ ಮೇಲೆ ನೆಲೆಸಿದ್ದರು. ಮಳೆ ಗಾಳಿಯನ್ನು ಲೆಕ್ಕಿಸದೇ ಒಂದು ವಾರ ಅವರು ಅಲ್ಲೇ ಕಾಲ ಕಳೆದರು. ಹೆದರಿದ ಆಡಳಿತ ಅವರನ್ನು ಮರಳಿ ಊರಿಗೆ ಬಂದು ನೆಲೆಸಲು ಮನವಿ ಮಾಡಿತು. ಆಗ ಸವರ್ಣೀಯರು ತಮ್ಮ ಊರೊಳಗಿನ ಮುತ್ತಾಲಮ್ಮನ್ ದೇವಸ್ಥಾನವಿರುವ ಜಾಗಕ್ಕೆ ಮೇಲ್ಜಾತಿಯ ಖಾಸಗಿ ವ್ಯಕ್ತಿಗೆ ಪಟ್ಟಾ ನೀಡಬೇಕೆಂದು ವಿನಂತಿಸಿತು. ರಾಜಿ ಯತ್ನದ ಭಾಗವಾಗಿ ಜಿಲ್ಲಾಡಳಿತ ಅದನ್ನು ಒಪ್ಪುವುದರಲ್ಲಿತ್ತು. ಆದರೆ ರಂಗವು ಈ ವಿಷಯದಲ್ಲಿ ದೃಢವಾದ ನಿಲುವು ತಳೆದು ಸಾರ್ವಜನಿಕ ದೇವಾಲಯದ ಜಾಗಕ್ಕೆ ಖಾಸಗಿ ವ್ಯಕ್ತಿಗೆ ಪಟ್ಟಾ ನೀಡುವುದನ್ನು ವಿರೋಧಿಸಿತು.

ಕೊನೆಗೆ ಸವರ್ಣೀಯರು ಬೇರೆ ದಾರಿ ಕಾಣದೆ ತಮ್ಮ ಊರಿಗೆ ಬಂದು ನೆಲೆಸಿದರು. ಈಗಲೂ ಆ ದೇವಾಲಯದಲ್ಲಿ ದಲಿತರಿಗೆ ಪ್ರವೇಶವಿಲ್ಲ. ದಲಿತರಿಗೆ ದೇವಸ್ಥಾನ ಪ್ರವೇಶಕ್ಕಾಗಿ ಮುಂದೆ ಹೋರಾಟದ ಯೋಜನೆ ರೂಪಿಸಲಾಗಿದೆ.

ಪುಟ 10ಕ್ಕೆ

ಮುತ್ತಾಲಮ್ಮನ್ ದೇವಾಲಯ ಪ್ರವೇಶ ಚಳುವಳಿ

ಈ ಹಿಂದೆ ಘೋಷಿಸಿದಂತೆ ಊತ್ತಪುರಂ ಗ್ರಾಮದಲ್ಲಿನ ಮುತ್ತಾಲಮ್ಮನ್ ದೇವಾಲಯವನ್ನು ಗ್ರಾಮದ ದಲಿತರು, ಇತರರು ಒಟ್ಟು ಸೇರಿ ಪ್ರವೇಶಿಸುವ ಚಳುವಳಿ ಜನವರಿ 31 ರಂದು ನಡೆದಿದೆ. ಆದರೆ ಸರ್ಕಾರ ದೇವಾಲಯ ಪ್ರವೇಶಕ್ಕೆ ಅವಕಾಶ ಮಾಡಿಕೊಡುವ ಬದಲು ಸುಮಾರು 3000 ಚಳುವಳಿಕಾರರನ್ನು ದೇವಾಲಯದಿಂದ ಬಹುದೂರದಲ್ಲೇ ಬಂಧಿಸಿದೆ.

ಅಸ್ಪೃಶ್ಯತಾ ನಿವಾರಣಾ ರಂಗ ಇಷ್ಟರಿಂದಲೇ ವಿಚಲಿತವಾಗದೇ ಚಳುವಳಿಯನ್ನು ಮುಂದುವರಿಸುವುದಾಗಿ ಘೋಷಿಸಿದೆ.

ಹೇಗೆ ಮರೆಮಾಚಿರುತ್ತದೆ ಅಸ್ಪೃಶ್ಯತೆ

ಈ ಚಿತ್ರದಲ್ಲಿ ಕಾಣುತ್ತಿರುವ ಅಂಚೆ ಕಛೇರಿಯನ್ನು ನೋಡಿ. ಇದು ಮೆಲಂತಬೆಟ್ಟು ಎಂಬ ಬೆಳ್ತಂಗಡಿಯ ಗ್ರಾಮದಲ್ಲಿದೆ. ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ಸಮೀಪದ ಕೇವಲ 6 ಕಿ.ಮೀ ದೂರದಲ್ಲಿರುವ ಗ್ರಾಮ.

ಈ ಅಂಚೆ ಕಛೇರಿಯು ಪ್ರತ್ಯೇಕವಾಗಿಲ್ಲ, ಪೋಸ್ಟ್‌ಮಾಸ್ಟರರ ಮನೆಯ ಒಂದು ಕೋಣೆ ಅಂಚೆ ಕಛೇರಿಯಾಗಿ ಕಾರ್ಯ ನಿರ್ವಹಿಸುತ್ತದೆ. ಈ ಅಂಚೆ ಕಛೇರಿಯ ಒಳಗೆ ಸಾರ್ವಜನಿಕರಿಗೆ ಪ್ರವೇಶವಿದೆ. ಆದರೆ ಈ 'ಸಾರ್ವಜನಿಕ'ರ ಪಟ್ಟಿಯಲ್ಲಿ ದಲಿತರು ಇಲ್ಲ ಎನ್ನುತ್ತದೆ. 'ದ ಹಿಂದೂ' ಪತ್ರಿಕೆಯ ವರದಿ ಅಂದರೆ ದಲಿತರು ಇಲ್ಲಿ 'ಸಾರ್ವಜನಿಕ'ರಲ್ಲ. ದಲಿತ ವೃದ್ಧರು ಇಲ್ಲಿ ವೃದ್ಧಾಪ್ಯ ವೇತನ ಪಡೆಯಲು ಹೊರಗೆ ಬಿಸಿಲಿನಲ್ಲಿ ಕಾದು ನಿಲ್ಲಬೇಕಾದ ಪರಿಸ್ಥಿತಿ ಹೊರಗೆ ಕಾದಿರುವ ದಲಿತರಿಗೆ ಹೊರಬರುವ ಸಿಬ್ಬಂದಿ ವೇತನ ವಿತರಿಸುವರಂತೆ.

ವಯೋವೃದ್ಧರೇನು ಅಂಚೆ ಪತ್ರ ಕೊಳ್ಳಲು ಬಂದ ಇಬ್ಬರು ಶಿಕ್ಷಿತ ಯುವತಿಯರಿಗೂ ಅದೇ ಗತಿ. ಹೊರಗೆ ಕಾಯುವುದೇ ಬಂತು. ಉಡುಪಿಯ ಕನಕ ಕಿಂಡಿಯ ಕತೆ ನೆನಪಿಗೆ ಬಂತೇ.

ನೋಡಿ ಕರ್ನಾಟಕದ 'ಮುಂದುವರಿದ' ಜಿಲ್ಲೆಯೊಂದರ ಹಳ್ಳಿಯ ದಲಿತರ ಸ್ಥಿತಿ.



ಸಂಪಾದಕೀಯ

ಓತಿಕ್ಯಾತನಿಗೆ ಬೇಲಿ ಸಾಕ್ಷಿ : ನ್ಯಾ. ಸೋಮಶೇಖರ ಆಯೋಗದ ವರದಿ ತಿರಸ್ಕರಿಸಲಷ್ಟೇ ಯೋಗ್ಯ

ಆಯೋಗದ ವರದಿ ಸಂಘ ಪರಿವಾರದ ಅಜೆಂಡಾವನ್ನು ಸಮರ್ಥಿಸುವಂತಿದೆ. ಎಲ್ಲಾ ಆಯೋಗಗಳಲ್ಲಿಯೂ ತೀವ್ರ ಹಸ್ತಕ್ಷೇಪ ಮಾಡಿ ತನ್ನ ಪರವಿರುವಂತೆ ಒತ್ತಡ ಸೃಷ್ಟಿಸುತ್ತಿರುವ ಬಿಜೆಪಿ ಸರ್ಕಾರವು ನ್ಯಾಯಾಂಗ ವಿಚಾರಣೆಯ ಘನತೆಯನ್ನೇ ಮಣ್ಣುಪಾಲು ಮಾಡಿದೆ.

ರಾಜ್ಯದ ವಿವಿಧ ಕಡೆ 2008 ರಲ್ಲಿ ಸರಣಿಯೋಪಾಧಿಯಲ್ಲಿ ಸಂಭವಿಸಿದ ಚರ್ಚ್‌ಗಳು ಹಾಗೂ ಕ್ರಿಶ್ಚಿಯನ್ನರ ಮೇಲಿನ ಧಾಳಿಗಳ ವಿಚಾರಣೆ ಬಗ್ಗೆ ನೇಮಕಗೊಂಡಿದ್ದ ನ್ಯಾ. ಸೋಮಶೇಖರ ಆಯೋಗದ ಅಂತಿಮ ವರದಿಯು ಅದಕ್ಕೆ ವಹಿಸಲಾಗಿದ್ದ ಜವಾಬ್ದಾರಿಯನ್ನು ಪ್ರಾಮಾಣಿಕವಾಗಿ ನಿರ್ವಹಿಸುವಲ್ಲಿ ಸಂಪೂರ್ಣ ವಿಫಲವಾಗಿದೆ. ಇಂತಹ ಧಾಳಿಗಳನ್ನು ಯಾಕೆ, ಯಾರಿಂದ? ಹೇಗೆ ನಡೆಯಿತು, ಸಂಘಟನೆಗಳು, ಸರಕಾರದ ಪಾತ್ರವೇನು? ಯಾರು ತಪ್ಪಿತಸ್ಥರು, ಇಂತಹ ಘಟನೆಗಳು ಸಂಭವಿಸದಂತೆ ಏನು ಕ್ರಮ ವಹಿಸಬೇಕು ಎಂಬಿತ್ಯಾದಿ ಪ್ರಮುಖ ಪ್ರಶ್ನೆಗಳ ಬಗ್ಗೆ ಆಯೋಗ ನಿಖರವಾದ ಉತ್ತರವನ್ನು ಕಂಡುಕೊಟ್ಟಿಲ್ಲ, ಮಾತ್ರವಲ್ಲ ಧಾರುಣ ಸತ್ಯಗಳನ್ನು ಮರೆಮಾಚಿ ಆರೋಪಿಗಳನ್ನು ರಕ್ಷಿಸುವುದನ್ನೇ ಗುರಿಯಾಗಿಸಿಕೊಂಡಿದೆ. ಹೀಗಾಗಿಯೇ ಧಾಳಿಗಳನ್ನು ನಡೆಸಿದ ಸಂಘ ಪರಿವಾರ, ಬಿಜೆಪಿ ಸರ್ಕಾರವನ್ನು ಆಯೋಗ ರಕ್ಷಿಸಿದೆಯಲ್ಲದೇ ಧಾರ್ಮಿಕ ಅಲ್ಪಸಂಖ್ಯಾತರ ಮೇಲಿನ ಸಂಘ ಪರಿವಾರದ ದ್ವೇಷ ಇಲ್ಲಿಯೂ ಜಗಜ್ಜಾಹೀರಾಗಿದೆ.

ಕ್ರಿಶ್ಚಿಯನ್ ಅಲ್ಪಸಂಖ್ಯಾತರ ಬಗ್ಗೆ ಆಯೋಗದ ವಿಚಾರಣಾ ವೈಖರಿ, ನೀಡಿದ ಸತ್ಯ ಸಾಕ್ಷ್ಯಗಳ ಬಗ್ಗೆ ಆಯೋಗದ ಅಸಹನೆ ತೀವ್ರ ಆಕ್ಷೇಪಣೆಗೆ ಒಳಗಾಗಿದ್ದವು. ಆದರೆ ಸತ್ಯವನ್ನು ಮುಚ್ಚಿಡಲಾಗದ ಅಂಶಗಳು ಇದೇ ಆಯೋಗದ ಮಧ್ಯಂತರ ವರದಿಯನ್ನು ಬಹಿರಂಗಗೊಳಿಸಿದಾಗ ಹೊರಬಂದಿದ್ದವು. ಆಗ ಈ ಧಾಳಿ ಘಟನೆಗಳಿಗೆ ಬಜರಂಗದಳ, ಶ್ರೀರಾಮಸೇನೆಯಂತಹ ಸಂಘಟನೆಗಳು ಕಾರಣವಾಗಿರುವಂತೆ ಇದನ್ನು ತಡೆಯುವಲ್ಲಿ ಸರ್ಕಾರದ ವೈಫಲ್ಯ ಹಾಗೂ ಆಡಳಿತದ ಶಾಮೀಲುತನದ ಬಗ್ಗೆ ಗುರುತಿಸಿದ್ದ ಆಯೋಗ ಅವರನ್ನು ಹೊಣೆಯನ್ನಾಗಿಸಿತ್ತು. ಆದರೆ ಈಗಿನ ಅಂತಿಮ ವರದಿಯಲ್ಲಿ ಇವುಗಳ ಉಲ್ಲೇಖವೇ ಇಲ್ಲದಿರುವುದು ಆಘಾತಕಾರಿಯಾಗಿದೆ. ಪ್ರಜ್ಞಾಪೂರ್ವಕವಾಗಿ ಆಯೋಗವು ಸಾರ್ವಜನಿಕರನ್ನು ಹಾದಿ ತಪ್ಪಿಸುತ್ತಿರುವುದನ್ನು ಸಾರುತ್ತದೆ. ಮಧ್ಯಂತರ ವರದಿ ಪ್ರಕಟವಾಗುತ್ತಿದ್ದಂತೆ ಆಯೋಗದ ವಿರುದ್ಧ ಬಿಜೆಪಿ ಸಂಘಪರಿವಾರ ತೀವ್ರ ಟೀಕೆಗಳ ಧಾಳಿ ನಡೆಸಿದ್ದಲ್ಲದೇ ಸರ್ಕಾರ ವಿಪರೀತ ಒತ್ತಡ ಸೃಷ್ಟಿಸಿದ್ದು ಇಂತಹ ಫಲಿತಾಂಶ ತಂದಿರುವುದರಲ್ಲಿ ಅನುಮಾನವೇ ಇಲ್ಲ. ಯಾಕೆಂದರೆ ಈ ಎಲ್ಲಾ ಧಾಳಿಗಳನ್ನು ಸಂಘ ಪರಿವಾರ ಹಾಗೂ ಸರ್ಕಾರಗಳು ಬಹಿರಂಗವಾಗಿಯೇ ಸಮರ್ಥಿಸಿಕೊಂಡಿದ್ದವು. ಮತ್ತು ಯೋಜಿತ ಧಾಳಿಗೆ ಮುನ್ನ ಕೋಮುದ್ವೇಷದ ಪ್ರಚೋದನಾತ್ಮಕ ವಾತಾವರಣವನ್ನು ಉಂಟುಮಾಡುವಲ್ಲಿ ಇವುಗಳ ಪಾತ್ರವಿತ್ತು. ಧಾಳಿ ನಡೆಸಿದವರು ಯಾರೆಂದು ತಿಳಿಯದೇ ಹೋಗಿದ್ದರೆ ಇವು ಆಕಸ್ಮಿಕವಲ್ಲ, ಉದ್ದೇಶಪೂರ್ವಕ ಎಂದು ಆಯೋಗ ಹೇಳಿದ್ದಾದರೂ ಹೇಗೆ? 'ಆಡಳಿತ ಪಕ್ಷದ ಬೆಂಬಲ ಸಿಗುತ್ತದೆ ಎಂದು ಭಾವಿಸಿದ ಕೆಲವು ಸಂಘಟನೆಗಳು' ಧಾಳಿ ನಡೆಸಿವೆ ಎನ್ನುವಾಗಲೂ ಅವುಗಳು ಯಾರೆಂದು ಆಯೋಗಕ್ಕೆ ತಿಳಿದಿಲ್ಲವೆಂದರೆ ನಂಬುವುದಾದರೂ ಹೇಗೆ?


ಮಂಗಳೂರು ಫೆರ್ಮಾನೂರು ಚರ್ಚ್ ಒಳಗೆ ಪೊಲೀಸರೇ ನುಗ್ಗಿ ಪ್ರಾರ್ಥನೆಗೆ ಬಂದವರನ್ನು ಬಡಿದಿದ್ದಾರೆ. ಬಜರಂಗದಳ, ಶ್ರೀರಾಮಸೇನೆಯ ಗೂಂಡಾಗಳು ಧಾಳಿ ನಡೆಸುವಾಗ ಪಕ್ಕದಲ್ಲಿದ್ದರೂ ಪೊಲೀಸರು ತಡೆಯದೇ ನಿಷ್ಕ್ರಿಯವಾಗಿ ಬೆಂಬಲಿಸಿದ್ದಾರೆ. ಇಷ್ಟು ಉದ್ವಿಗ್ನತೆ ಇರುವಾಗ ಗೃಹ ಸಚಿವರಾಗಿದ್ದ ಆಚಾರ್ಯರವರು ಧಾಳಿಗಳನ್ನು ಸಮರ್ಥಿಸುವ, ಅಲ್ಪಸಂಖ್ಯಾತ ಕ್ರಿಶ್ಚಿಯನ್ನರನ್ನು ದೂಷಿಸುವಂತಹ, ಮತಾಂತರದ ಬಗ್ಗೆ ಚರ್ಚೆ ಎತ್ತಿಕೊಳ್ಳುವಂತಹ ಪ್ರಚೋದನಾತ್ಮಕ ಮಾತುಗಳನ್ನಾಡಿದ್ದು ಆಯೋಗ ಗಮನಿಸಲಿಲ್ಲವೇ? ಇದು ಅಂದಿನ ಗೃಹಸಚಿವರದ್ದು. ಗಲಭೆಕೋರರಿಗೆ ಪ್ರೋತ್ಸಾಹ ನೀಡುವಂತಹ ನಡವಳಿಕೆ. ಒಂದೆಡೆ ದಾವಣಗೆರೆ, ಬಳ್ಳಾರಿಗಳಲ್ಲಿ ಚರ್ಚ್ ಮತ್ತು ಪಾದ್ರಿಯವರ ಮೇಲಿನ ಹಲ್ಲೆಗಳು ರಾಜ್ಯದ ಇತಿಹಾಸದಲ್ಲಿ ಮೊದಲು ಎಂದು ಹೇಳುವ ಆಯೋಗವು ಇದಕ್ಕೆ ಸಾಥ್ ನೀಡಿದ ಆಡಳಿತವನ್ನು ಹೊಗಳಿ ಸಮರ್ಥಿಸಿರುವುದು ಆಳದಲ್ಲಿರುವ ಅಲ್ಪಸಂಖ್ಯಾತರ ವಿರೋಧಿ ಮನೋಭಾವದ ದ್ಯೋತಕ. ದಕ್ಷಿಣಕನ್ನಡದಲ್ಲಿ ಪೊಲೀಸರು ಕಾನೂನು, ಸಂವಿಧಾನ, ಮಾನವ ಹಕ್ಕುಗಳ ಉಲ್ಲಂಘನೆ ಮಾಡಿದ್ದಾರೆಂದೂ, ಆದರೆ ಈ ಘಟನೆಗಳು ಹೊರಗಿನ ಶಕ್ತಿಗಳ ಪ್ರೇರಿತವಲ್ಲ ಎಂದಿರುವ ಆಯೋಗವು, ಕ್ರಿಶ್ಚಿಯನ್ನರನ್ನು ವಿರೋಧಿಸುವ ಅವರ ಶಿಕ್ಷಣ, ಆರೋಗ್ಯ ಮುಂತಾದ ಸೇವೆಗಳನ್ನು ಸಹಿಸದ ಗುಂಪುಗಳು ಕಾರಣ ಎಂದಿರುವುದು ಸುಳ್ಳುಗಳ ಕಂತೆ ಹಾಗೂ ಅಂತರ್ ವೈರುಧ್ಯಗಳಿಂದ ಕೂಡಿದೆ. ಪೊಲೀಸರ, ಆಡಳಿತದ ನಿಷ್ಕ್ರಿಯತೆಯ ಬೆಂಬಲವನ್ನು ಆಯೋಗವು ಗುರುತಿಸಿದ್ದರೂ ಸರ್ಕಾರದ ನೀತಿ, ನಿರ್ದೇಶನಕ್ಕೂ, ಆಡಳಿತಕ್ಕೂ ಸಂಬಂಧವೇ ಇಲ್ಲವೆಂಬಂತೆ ವ್ಯಾಖ್ಯಾನಿಸಿರುವುದು, ಅದರ 'ಜಾಣತನಕ್ಕೆ' ಸಾಕ್ಷಿ.

ಪುಟ 14 ಕ್ಕೆ

ಮುಖ್ಯಮಂತ್ರಿ ಈ ಜೀವಕ್ಕೆ ಬೆದರಿಕೆ ಯಾರಿಂದ?

"ನನ್ನನ್ನು ಜೀವಂತವಾಗಿ ಮುಗಿಸಲು ಷಡ್ಯಂತ್ರ ನಡೆದಿದೆ. ಮಾಟ, ಮಂತ್ರಗಳ ಪ್ರಯೋಗ ನಡೆದಿದೆ. ನಾನು ಮನೆಯಿಂದ ವಿಧಾನಸೌಧಕ್ಕೂ, ಅಲ್ಲಿಂದ ಮನೆಗೂ ಸುರಕ್ಷಿತವಾಗಿ ಸೇರುತ್ತೇನೆ ಎನ್ನುವ ಬಗ್ಗೆ ಅನುಮಾನ ಪ್ರತಿಕ್ಷಣವೂ ಕಾಡುತ್ತಿದೆ."

ಇಂತಹದ್ದೊಂದು ಮಾತನ್ನು ಯಾರೋ ಹೇಳಿದ್ದರೆ ಅದನ್ನು ಗಂಭೀರವಾಗಿ ಪರಿಗಣಿಸಬಹುದಿತ್ತು, ಇಲ್ಲವೇ ಉಪೇಕ್ಷಿಸಬಹುದಿತ್ತು. ಆದರೆ ಹೀಗೆ ಹೇಳಿದವರು ಸಾಮಾನ್ಯರಲ್ಲ, ಇಡೀ ಕರ್ನಾಟಕದ ಆರು ಕೋಟಿ ಜನರ ಆಸ್ತಿ, ಜೀವ, ಮಾನ ಕಾಪಾಡುವ ಅತ್ಯಂತ ಹೆಚ್ಚಿನ ಸಂವಿಧಾನಿಕ ಹೊಣೆ ಹೊತ್ತಿರುವ ಮುಖ್ಯಮಂತ್ರಿಯೇ ಹೀಗೆ ಸಾರ್ವಜನಿಕವಾಗಿ ಹೇಳಿಕೊಂಡು ಅವಲತ್ತುಕೊಂಡಿದ್ದು ಒಂದೆಡೆ ಆಶ್ಚರ್ಯವನ್ನು, ಇನ್ನೊಂದೆಡೆ ನಗೆಯನ್ನು ತಂದಿದೆ. ಅರ್ಥಾತ್ ನಗೆಪಾಟಲಿಗೆ ಈಡಾಗಿದೆ! ಯಡಿಯೂರಪ್ಪನವರ ಪುರಾಣ ಎಲ್ಲಿಗೆ ಬಂದು ನಿಂತಿದೆಯಲ್ಲಾ ಅಂತಾ!



ಮೌಢ್ಯದ ಹೆಚ್ಚಳ

ರಾಜ್ಯದ ಮುಖ್ಯಮಂತ್ರಿಗೆ ಬೆದರಿಕೆ ಒಡ್ಡಿರುವ ಯಾರ ಮೇಲೆ ಕೇಸ್ ಹಾಕುವುದು ಅಂತಾ ತಿಳಿಯದೇ ಗೊಂದಲದಲ್ಲಿ ಬಿದ್ದಿದ್ದಾರೆ ಪೊಲೀಸರು!

ಹೀಗೊಂದು ವೇಳೆ ಮಾಟ, ಮಂತ್ರಗಳಿಂದ ಯಾರನ್ನಾದರೂ ಅಂಗ ಊನಗೊಳಿಸುವಂತಿದ್ದರೆ ಅಥವಾ ಕೊಂದುಬಿಡುವಂತಿದ್ದರೆ ಇಷ್ಟೊಂದು ತರಹದ ಕೊಲ್ಲುವ ಅಸ್ತ್ರಗಳ ಅಗತ್ಯವೇ ಇರಲಿಲ್ಲ. ಸಾಮೂಹಿಕ ವಿನಾಶದ ಅಸ್ತ್ರಗಳನ್ನು, ಸ್ಟಾರ್‌ವಾರ್ ಅಸ್ತ್ರಗಳನ್ನು, ಜೈವಿಕ ಶಸ್ತ್ರಗಳನ್ನು ಅಮೇರಿಕಾದಂತಹ ದೇಶಗಳು ಕೋಟಿ, ಕೋಟಿ ಡಾಲರ್‌ಗಳನ್ನು ವೆಚ್ಚ ಮಾಡಬೇಕಿರಲಿಲ್ಲ. ಭಾರತದ ಮಿಲಿಟರಿ ಬಜೆಟ್ ಶೇ.35 ರಷ್ಟು ಅತಿಕ್ರಮಿಸುತ್ತಿರಲಿಲ್ಲ. ಎಲ್ಲರೂ ಇಂತಹುದೇ ಮಾಟ, ಮಂತ್ರಕ್ಕೆ ಜೋತುಬೀಳುತ್ತಿದ್ದರು (ಮಾಂತ್ರಿಕನ ಗಡ್ಡಕ್ಕೆ...). ಹೀಗಾಗುವುದಿಲ್ಲ ಎಂಬುದು ಅವರಿಗೆಲ್ಲಾ ಗೊತ್ತಿದೆ. ಇಂತಹ ಮಾಟ, ಮಂತ್ರಗಳು ಜೀವ ಹೋಗಿಸುವುದಿರಲಿ, ಒಂದು ಹುಲ್ಲು ಕಡ್ಡಿಯನ್ನು ಅಲುಗಾಡಿಸುವ ಶಕ್ತಿಯನ್ನು ಪಡೆದಿಲ್ಲ. ಆದರೆ ಜನತೆಯಲ್ಲಿ ವಿಪರೀತ ಮೌಢ್ಯ ಬೆಳೆಸಿ ಅದರ ಲಾಭವನ್ನು ಹುಲುಸಾಗಿ ಗಿಟ್ಟಿಸುವವರಿಗೆ ಇವೆಲ್ಲಾ ಬೇಕು. ಹಾಗೆಂದೇ ಟಿ.ವಿ. ಛಾನೆಲ್‌ಗಳು ಆಧುನಿಕ ತಂತ್ರಜ್ಞಾನವನ್ನೇ ವಿಜ್ಞಾನ ಪಸರಿಸಲು ಬಳಸದೇ ಮನಸೋ ಇಚ್ಛೆ ಮೌಢ್ಯ ನಂಬಿಕೆ ಪ್ರತಿಪಾದಿಸಲು ಬಳಸುತ್ತಿದ್ದಾರೆ. ಇದಕ್ಕೆಂದೇ ಪುಂಖಾನುಪುಂಖವಾಗಿ ಗುರುಗಳು, ಮಾಂತ್ರಿಕರು ರೇಷ್ಮೆ ಪಿತಾಂಬರಗಳುಟ್ಟು ನಿತ್ಯವೂ ಪುಂಗಿ ಊದುತ್ತಿದ್ದಾರೆ. ಸಮಸ್ಯೆಗಳ ಮೂಟೆ ಬಳಲಿದವರ ಹೆಗಲು ಹತ್ತಿ ಕುಳಿತಿರುವಾಗ, ಸಾಮಾನ್ಯರು ಚಮತ್ಕಾರ, ವಿಸ್ಮಯಗಳನ್ನೇ ನಂಬಿಕೊಂಡಿದ್ದಾರೆ. ಇದು ಹೀಗೂ ಉಂಟೇ?, ವಿಸ್ಮಯ ಲೋಕಗಳು, ಪುನರ್ಜನ್ಮದ ಕಥೆಗಳು, ಮಾಟಮಂತ್ರದ ಸೀರಿಯಲ್‌ಗಳಿಗೆ ಎಲ್ಲಿಲ್ಲದ ಕಲೆಕ್ಷನ್.



ರೋಗವಿದೆಯಾ? ನೋಡಿ !

'ಯಾರೋ ನನ್ನನ್ನು ಹಿಂಬಾಲಿಸುತ್ತಿದ್ದಾರೆ, ಬೆನ್ನು ಬಿದ್ದುಬಿಟ್ಟಿದ್ದಾರೆ. ಅವರು ನನ್ನನ್ನು ಕೊಲ್ಲಲು ಹೊಂಚುಹಾಕಿದ್ದಾರೆ. ಇನ್ನೇನು ಏನೂ ಸಂಭವಿಸಬಹುದು' ಎಂದೆಲ್ಲಾ ಹಪಾಹಪಿಸುವುದಕ್ಕೆ ಮನಶಾಸ್ತ್ರದಲ್ಲಿ 'ಫೋಬಿಯಾ' ಖಾಯಿಲೆ ಎನ್ನುತ್ತಾರೆ. ಇಂತಹ ಖಾಯಿಲೆ ಖ್ಯಾತ ನಾಟಕಕಾರ 'ಸಂಸ' ರಿಗೆ ಇತ್ತು ಎಂಬುದು ಜನಜನಿತ. ಅವರು ಮುಂದೊಮ್ಮೆ ಆತ್ಮಹತ್ಯೆ ಮಾಡಿಕೊಂಡು ದುರಂತದ ಅಂತ್ಯ ಕಂಡರು. ಇಂತಹದ್ದೊಂದು ಫೋಬಿಯಾ ಯಡಿಯೂರಪ್ಪನಿಗೆ ಕಾಡುತ್ತಿರುವಂತಿದೆ. ಮಾನಸಿಕ ಅಸ್ವಸ್ಥತೆ, ಅತಂತ್ರದಲ್ಲಿರುವಾತ ರಾಜ್ಯದ ಅಧಿಕಾರದ ಚುಕ್ಕಾಣಿ ಹಿಡಿದು ಆಡಳಿತ ನಡೆಸುವುದಾದರೂ ಹೇಗೆ ಸಾಧ್ಯ? ಮೂಢ ನಂಬಿಕೆಗಳನ್ನು ಪ್ರಚಾರ ಮಾಡುತ್ತಿರುವ ಯಡಿಯೂರಪ್ಪನವರು ವೈಜ್ಞಾನಿಕ ಮನೋಭಾವ ಬೆಳೆಸುವ ಎಂಬ ಸಂವಿಧಾನ ಆಶಯಗಳ ವಿರುದ್ಧ ವರ್ತಿಸುತ್ತಿರುವುದು ಅಪರಾಧವೇ ಆಗಿದೆ. ಇಂತಹವರು ನಮ್ಮ ನಾಯಕರು!

ಹೊಣೆಗೇಡಿತನ

ಇಂತಹದ್ದೊಂದು ಜೀವ ಬೆದರಿಕೆಯ ಮಾಟದ ಷಡ್ಯಂತ್ರವನ್ನು ವಿರೋಧಪಕ್ಷದ ನಾಯಕ ಸಿದ್ಧರಾಮಯ್ಯ, ಮಾಜಿ ಪ್ರಧಾನಿ ದೇವೇಗೌಡರವರ ಮೇಲೆ ಹೊರಿಸುವ ಅವರಿಗೆ ಕೊಂಚವಾದರೂ ಜವಾಬ್ದಾರಿ ಇದೆ ಎನಿಸುವುದಿಲ್ಲ. ಇಂತಹ ಗಾಳಿ ಮಾತುಗಳ ಊಹಾಪೋಹಗಳಿಂದ ಕಳೆದುಹೋಗಿರುವ ಅವರ

ಪುಟ 15ಕ್ಕೆ

ಬೆಳ್ತಂಗಡಿ

ಆದಿವಾಸಿಗಳನ್ನು ಬೀದಿಗೆ ತಳ್ಳಿದ ಬಿ.ಜೆ.ಪಿ. ಸರ್ಕಾರ

ದ.ಕ. ಜಿಲ್ಲೆಯ ನಕ್ಸಲ್ ಪೀಡಿತ ತಾಲೂಕು ಬೆಳ್ತಂಗಡಿ ಇಲ್ಲಿನ ನಾರಾವಿ, ಕುತ್ಲೂರು, ಸುಲ್ಕೇರಿ, ಶಿರ್ಲಾಲು, ಸವಣಾಲು, ಲ್ಯಾಲ, ನಡ, ನಾವೂರು, ಇಂದಬೆಟ್ಟು, ಮಲವಂತಿಗೆಗಳು ಈ ವ್ಯಾಪ್ತಿಗೆ ಒಳಪಡುವ ಗ್ರಾಮಗಳು. ಗ್ರಾಮಗಳ ಬಹುತೇಕ ಪ್ರದೇಶ ಕುದುರೆಮುಖ ರಾಷ್ಟ್ರೀಯ ಉದ್ಯಾನವನಕ್ಕೆ ಒಳಪಡುತ್ತದೆ. ಇಲ್ಲಿ ಆದಿವಾಸಿ ಬುಡಕಟ್ಟು ಜನಾಂಗಕ್ಕೆ ಸೇರಿದ ಮಲೆಕುಡಿಯ ಕುಟುಂಬಗಳು ನೂರಾರು ವರ್ಷಗಳಿಂದ ವಾಸವಾಗಿದ್ದಾರೆ. ಪ್ರತಿ ಕುಟುಂಬಗಳ ಕೈಯಲ್ಲಿ ಫಲವತ್ತಾದ ಬೆಲೆಬಾಳುವ ಕೃಷಿ ಭೂಮಿ ಇದೆ. ಕಾಡುತ್ಪತ್ತಿ ಇವರ ಉಪ ಕಸುಬು. ತಾಲ್ಲೂಕಿನ ರಾಷ್ಟ್ರೀಯ ಉದ್ಯಾನವನಕ್ಕೆ ಸೇರಿದ ಪ್ರದೇಶದಲ್ಲಿ ಕುಟುಂಬಗಳು ವಾಸವಾಗಿವೆ. ಮೂಲಭೂತ ಸೌಲಭ್ಯಗಳೂ ಸೇರಿದಂತೆ ಶಿಕ್ಷಣ ಉದ್ಯೋಗ ಬರೀ ಕನಸಿನ ಮಾತು. ಪದವಿ ಮುಗಿಸಿರುವವರಂತೂ ಕೇವಲ ಒಂದಿಬ್ಬರು ಮಾತ್ರ!

ಒಕ್ಕಲೆಬ್ಬಿಸುವಿಕೆ

ಎನ್‌ಡಿಎ ಸರ್ಕಾರ ಈ ಪ್ರದೇಶವನ್ನು ರಾಷ್ಟ್ರೀಯ ಉದ್ಯಾನವನವೆಂದು ಘೋಷಿಸಿದ ಬಳಿಕ ಒಕ್ಕಲೆಬ್ಬಿಸುವಿಕೆ ಎಂಬ ಭೂತ ಇವರನ್ನು ಆವರಿಸಿತು. ಇಲ್ಲಿಂದ ಪ್ರಾರಂಭ ವಾಯಿತು ಆದಿವಾಸಿಗಳ ಸಾವು ಬದುಕಿನ ಹೋರಾಟ. ಅರಣ್ಯ ಇಲಾಖೆಯ ವನ್ಯ ಜೀವಿ ವಿಭಾಗದಿಂದ ಒಕ್ಕಲೆಬ್ಬಿಸುವ ನೋಟೀಸು, ಕಿರುಕುಳ, ಬೆದರಿಕೆ ಕೇಸು, ಇದರೊಂದಿಗೆ ಪೊಲೀಸ್ ಠಾಣೆ, ನ್ಯಾಯಾಲಯಗಳ ಅಲೆದಾಟ. ಈ ಸನ್ನಿವೇಶವನ್ನು ದುರುಪಯೋಗ ಪಡಿಸಿಕೊಂಡು ಎಂಟ್ರಿ ಕೊಟ್ಟಿದ್ದೆ ನಕ್ಸಲ್ ಚಳುವಳಿ. ನಿರಂತರ ಕಿರುಕುಳ, ದೌರ್ಜನ್ಯದಿಂದ ಬೇಸತ್ತ ಯುವ ಜನರಲ್ಲಿ ಕೆಲವರು ನಕ್ಸಲ್ ಚಳವಳಿಗೆ ಸೇರಿ ಜೀವ ತ್ಯಾಗ ಮಾಡಿರುವುದು ಇತಿಹಾಸ. ಆದರೆ ಇದರಿಂದ ಯಾವುದೇ ಪ್ರಯೋಜನವಿಲ್ಲವೆಂದು ಇದೀಗ ಇಲ್ಲಿನ ಜನರಿಗೆ ಮನವರಿಕೆ ಆಗುವ ಮೊದಲು ಇಲ್ಲಿನ ಯುವ ಜನರಿಗೆ ಪೊಲೀಸರ ಕಿರುಕುಳ ಜಾಸ್ತಿಯಾಯಿತು. ನಕ್ಸಲ್ ಚಳುವಳಿಯನ್ನು ಮಟ್ಟಹಾಕಲು ರಾಜ್ಯಸರ್ಕಾರ ನೇಮಿಸಿದ ಎ.ಎನ್.ಎಫ್.ನವರು ಇಲ್ಲಿನ ಪ್ರತಿ ಮನೆಗೆ ನುಗ್ಗಿ ಮಕ್ಕಳು, ಮಹಿಳೆಯರು, ವೃದ್ಧರು ಎನ್ನದೇ ದೌರ್ಜನ್ಯ ನಡೆಸಿದರು. ಇತ್ತ ಅರಣ್ಯ ಇಲಾಖೆ ನೋಟೀಸು ನೀಡಿ ಒಕ್ಕಲೆಬ್ಬಿಸುವ ಬಗ್ಗೆ ಬೆದರಿಸಿತು. ಜಗ್ಗದಾಗ ಕಿರುಕುಳ ನೀಡಿದರು. ಕಾಡುತ್ಪತ್ತಿ ತೆಗೆಯುವವರ ಮೇಲೆ ಕ್ರಿಮಿನಲ್ ಕೇಸು ಜಡಿದು ಪೊಲೀಸ್ ಠಾಣೆ ನ್ಯಾಯಾಲಯಕ್ಕೆ ಹತ್ತಿಸಿ ಹಿಂಸಿಸಿದರು. ಕೊನೆಗೂ ಯಾವುದೇ ಕಾರಣಕ್ಕೂ ಜಗ್ಗದಾಗ ಬಲಾತ್ಕಾರವಾಗಿ ಒಕ್ಕಲೆಬ್ಬಿಸಲು ಸರ್ಕಾರ ಮುಂದಾಯಿತು. ಕೋಟ್ಯಾಂತರ ರೂಪಾಯಿ ಬೆಲೆಬಾಳುವ ಕೃಷಿ ಜಮೀನಿಗೆ ಜುಜುಬಿ 10 ಲಕ್ಷ ನೀಡಿ ಒಕ್ಕಲೆಬ್ಬಿಸುವ ಕಾರ್ಯಕ್ಕೆ ಮುಂದಾಗಿ, ಕಳೆದ ವರ್ಷ 12 ಕುಟುಂಬಗಳನ್ನು ತಮ್ಮ ಏಜೆಂಟರ ಮೂಲಕ ಬೆದರಿಸಿ ಒಕ್ಕಲೆಬ್ಬಿಸಲಾಯಿತು. ಅವರೀಗ ದಿಕ್ಕು ದೆಸೆಯಿಲ್ಲದೆ ಜೀವನ ಸಾಗಿಸುತ್ತಿದ್ದಾರೆ. ಈ ಒಕ್ಕಲೆಬ್ಬಿಸುವ ಕಾರ್ಯದ ಮುಂದುವರಿದ ಭಾಗವೇ ಸುಲ್ಕೇರಿ ಘಟನೆ.

ಆದಿವಾಸಿಗಳನ್ನು ಬೀದಿಗೆಸೆದ ಸರ್ಕಾರ :

ಇತ್ತೀಚಿಗೆ ನಡೆದ ತಾಲ್ಲೂಕು ಪಂಚಾಯಿತಿ/ ಜಿಲ್ಲಾ ಪಂಚಾಯಿತಿ ಚುನಾವಣೆಯ ಫಲಿತಾಂಶ ಬಂದು ಇನ್ನು 1 ವಾರವಾಗುವಾಗಲೇ ಬಿ.ಜೆ.ಪಿ ನೇತೃತ್ವದ ರಾಜ್ಯ ಸರ್ಕಾರ ಪಕ್ಷದ ವಿಜಯೋತ್ಸವವನ್ನು ಬಡ ಆದಿವಾಸಿ ಬುಡಕಟ್ಟು ಸಮುದಾಯದ ಕುಟುಂಬಗಳನ್ನು ಒಕ್ಕಲೆಬ್ಬಿಸುವ ಮೂಲಕ ಬೆಳ್ತಂಗಡಿಯಲ್ಲಿ ಆಚರಿಸಿದೆ. 6 ತಿಂಗಳ ಹಿಂದೆ ಸ್ವ ಸಹಾಯ ಸಂಘಗಳಿಂದ ಸಾಲ ಮಾಡಿ ಕಟ್ಟಿದ ಮನೆಗಳನ್ನು ಯಾವುದೇ ನೋಟೀಸು ನೀಡದೆ, ಪೊಲೀಸರ ಸಹಾಯದಿಂದ ಕೆಡವಲಾಗಿದೆ. ತೆರವು ಕಾರ್ಯ ವಿರೋಧಿಸಿದ ಮಕ್ಕಳೂ, ಮಹಿಳೆಯರು, ವೃದ್ಧರ ಮೇಲೆ ಅನಾಗರಿಕವಾಗಿ ವರ್ತಿಸಿ ದೌರ್ಜನ್ಯವೆಸಗಲಾಗಿದೆ. ಇದರಿಂದಾಗಿ ವಸಂತಿ, ರೇವತಿ, ಪುಟಾಣಿ 3 ವರ್ಷ ಪ್ರಾಯದ ಮಗು ಗಾಯಗೊಂಡು ಬೆಳ್ತಂಗಡಿ ಸರ್ಕಾರಿ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿ ವಾರಗಳ ಕಾಲ ಚಿಕಿತ್ಸೆ ಪಡೆಯುವಂತಾಗಿದೆ.

ಅಲ್ಲೇ ಠಿಕಾಣಿ ಹೂಡಲು ತೀರ್ಮಾನ

ತೆರವುಗೊಳಿಸಿ ಅಧಿಕಾರಿಗಳ ಕೇಂದ್ರ ಸ್ಥಾನಕ್ಕೆ ಮರಳುತ್ತಿದ್ದಾರೆ. ತೆರವುಗೊಂಡ ಸ್ಥಳದಲ್ಲೇ ಪ್ಲಾಸ್ಟಿಕ್ ಟೆಂಟ್ ಹಾಕಿ ಅಲ್ಲೇ ವಾಸಕ್ಕೆ ತೀರ್ಮಾನಿಸಿದ ಆದಿವಾಸಿಗಳು ಸತ್ತರೂ ಇಲ್ಲೇ, ಬದುಕಿದರೂ ಇಲ್ಲೇ ಇನ್ನೊಮ್ಮೆ ತೆರವುಗೊಳಿಸಿದರೆ ಪರಿಸ್ಥಿತಿ ನೆಟ್ಟಗಿರಲ್ಲ. ನಾವೆಲ್ಲ ಆತ್ಮಹತ್ಯೆ ದಾರಿ ಹಿಡಿಯಬೇಕಾಗುತ್ತದೆ ಎಂದು ಸರ್ಕಾರಕ್ಕೆ ಸವಾಲು ಹಾಕಿದ್ದಾರೆ. ಈ ಮಧ್ಯೆ 3 ದಿನಗಳ ಬಳಿಕ ಪತ್ರಿಕಾ ವರದಿಯನ್ನಾಧರಿಸಿ ಸ್ಥಳಕ್ಕೆ ಭೇಟಿ ನೀಡಿದ ಪುತ್ತೂರು ಸಹಾಯಕ ಕಮಿಷನರ್ ಡಾ.ಹರಿಶ್‌ಕುಮಾರ್‌ರನ್ನು ಘೇರಾವ್ ಹಾಕಿದ ಆದಿವಾಸಿಗಳು ಕಂದಾಯ ಅಧಿಕಾರಿಗಳನ್ನು ತಕ್ಷಣ ಅಮಾನತ್ತಿಗೆ ಒತ್ತಾಯಿಸಿದರು. ಈ ಸಂದರ್ಭ ಕರ್ನಾಟಕ ಪ್ರಾಂತ ರೈತ ಸಂಘದ ತಾಲ್ಲೂಕು ಕಾರ್ಯದರ್ಶಿ, ಸಿಪಿಐ(ಎಂ) ನಾಯಕ ಹರಿದಾಸ್ ಉಪಸ್ಥಿತರಿದ್ದು, ಆದಿವಾಸಿಗಳ ಪರವಾಗಿ ಮಾತನಾಡಿ ಯಾವುದೇ ನೋಟಿಸ್ ನೀಡದೇ ತೆರವುಗೊಳಿಸಿ ಮೃಗೀಯವಾಗಿ ವರ್ತಿಸಿದ ಕ್ರಮವನ್ನು ಖಂಡಿಸಿ, ಅಧಿಕಾರಿಗಳ ಅಮಾನತಿಗೆ ಒತ್ತಾಯಿಸಿದರು. ಇದೇ ಭೂಮಿಯನ್ನು ಆದಿವಾಸಿಗಳಿಗೆ ನೀಡಿ ಹಕ್ಕುಪತ್ರ ನೀಡಬೇಕು, ಇಲ್ಲೇ ನೂತನ ಮನೆ ನಿರ್ಮಿಸಿಕೊಡಬೇಕೆಂದು ಆಗ್ರಹಿಸಿದ ಅವರು ತಪ್ಪಿದಲ್ಲಿ ಉಗ್ರ ಹೋರಾಟ ಮಾಡಲಾಗುವುದೆಂದು ಎಚ್ಚರಿಸಿದರು.

ಬಿ.ಜೆ.ಪಿ.ಯ ರಾಜಕೀಯ

ರಾಜ್ಯದ ಬಿ.ಜೆ.ಪಿ. ಸರ್ಕಾರ ಒಕ್ಕಲೆಬ್ಬಿಸುವುದಿಲ್ಲವೆಂದು ಹೇಳಿ ತನ್ನ ಕೈ ಕೆಳಗಿನ ಅಧಿಕಾರಿಗಳಿಂದ ಬಲಾತ್ಕಾರವಾಗಿ ಒಕ್ಕಲೆಬ್ಬಿಸುತ್ತಿರುವುದು ಸಾಮಾನ್ಯ. ಇಲ್ಲಿ ಕೂಡ ಆದದ್ದು ಇದೇ. ಆದರೆ ಇಲ್ಲಿ ಮನೆ ತೆರವುಗೊಳಿಸಿ ಅಧಿಕಾರಿಗಳು ವಾಪಸ್ಸು ಆಗುತ್ತಿರುವಾಗಲೇ ಇಲ್ಲಿಗೆ ಬಿ.ಜೆ.ಪಿಯ. ಜಿಲ್ಲಾ ಪಂಚಾಯತ್/ ತಾಲ್ಲೂಕು ಪಂಚಾಯತ್ ಸದಸ್ಯರುಗಳು, ಮುಖಂಡರುಗಳು ಹಾಜರಾಗಿ ಇದು ರಾಜಕೀಯ ಪ್ರೇರಿತ ಘಟನೆ. ಇದರ ಹಿಂದೆ ಕಾಂಗ್ರೆಸ್ಸಿಗರ ಕೈವಾಡವಿದೆಯೆಂದು ಹೇಳಿ ಆದಿವಾಸಿಗಳನ್ನು ದಾರಿ ತಪ್ಪಿಸಲು ಪ್ರಯತ್ನಿಸಿದರು. ಆದಿವಾಸಿಗಳನ್ನು ಒಪ್ಪಿಸಿದರೂ ಕೂಡ ಬಳಿಕ ಪ್ರತಿದಿನ

ಪುಟ 14 ಕ್ಕೆ

ಶಿವಪ್ಪ ಕಾಯೋ ತಂದೆ

ಈ. ಬಸವರಾಜು
ಮಲ್ಲೇನಹಳ್ಳಿ

ಯಣ್ಣ, ಅದ್ಯಾರೋ ಶಿವಪ್ಪ ಕಾಯೋ ತಂದೆ.. ಅಂತ ಹಾಡೇಳ್ತ ಅವ್ರೆ, ಓಗಿ ಒಂದ್ ರುಪಾಯಿ ಆಕಿ ಬಾ ಓಗಣ್ಣ

ಏ.. ಅವ್ನು ಬಿಕ್ಷುದನಲ್ಲಕಣೊ, ಯಡ್ಯೂರಪ್ಪ!!!

ಅವುಂಗೇನ್ ಬಂದದೆ ಬಿಕ್ಷ ಬೇಡಕೆ? ಸಿವಮೊಗ್ಗದ್ ಸುತ್ತ ಎಲ್ಲಿ ನೋಡಿದ್ರೂ ಅವುಂದೇ ಜಮೀನಾಗ್ಯದಂತೆ, ಅರಮನೆ ತರ ಓಟ್ಳು ಕಟ್ಟಿಸ್ಯವ್ನಂತೆ, ಒಂದ್ ಕಿಲೋಮೀಟ್ರು ಬಿಲ್ಡಿಂಗ್ ಕಟ್ಸಿ ಇಸ್ಕೂಲ್ ನಡುಸ್ತಾ ಅವ್ನಂತೆ, ಎಲ್ಲೆಲ್ಲಿ ಏನೇನದೆ ಅಂತ ಅವ್ನಿಗೇ ಗೊತ್ತಿಲ್ವಂತೆ ಇನ್ನೇನ್ ಬೇಕಂತೆ?

ಅದ್ಕಲ್ಲ ಕಣೋ, ಯಾರೋ ಮಾಟ ಮಾಡ್ಸವ್ರಂತೆ, ಅದ್ಕೆ ಯದ್ರಿಕಂಡು ಸಿವುನ್ ಬಜ್ನೆ ಮಾಡ್ತಾ ಅವ್ನಂತೆ

ಯಾರು ಮಾಟ ಮಾಡ್ಸವ್ರಂತೆ?

ಯಾರೂ ಅಂತವ ಗೊತ್ತಿಲ್ವಂತೆ, ಆದ್ರೂ ದ್ಯಾವೇಗೌಡ್ರೇ ಮಾಡ್ಸವ್ರೆ ಅಂತ ಅಲ್ಲಿ ಇಲ್ಲಿ ಏಳ್ತಾ ಅವ್ನೆ, ಆದ್ರೆ ಕ್ಯಲುವು ಈಸ್ವುರಪ್ಪ ಮಾಡ್ಸವ್ನೆ ಅಂತರೆ, ಕ್ಯಲುವು ಕರೆಂಟ್ ಮಿನಿಸ್ಟ್ರೇ ಮಾಡ್ಸವ್ರೆ ಅಂತರೆ, ಒಟ್ನಲ್ಲಿ ಯಡ್ಯೂರಪ್ಪ ಯದ್ರಿಕಂಡು ಎಲ್ಲೂ ಓಯ್ತಾ ಇಲ್ವಂತೆ!

ಮಾಟ ಮಾಡ್ಸಿದ್ರೆ ಇವ್ನಿಗೇನಾಯ್ತುದಂತೆ?

ವಿದಾನಸೌದದ ಕುರ್ಚಿ ಮ್ಯಾಲೆ ಕೂತಿದ್ರೆ ಯಾರೋ ಕ್ಯಳಿಕೆ ತಳ್ದಂಗಾಯ್ತುದಂತೆ, ಮನಿಗ್ ಬಂದ್ರೆ ಮನಿಗಿತ್ತಲೇ ಚಡ್ಡಿ ವದ್ದೆ ಆಯ್ತುದಂತೆ!

ಯಣ್ಣ, ನೀನು ಇದನ್ಯಲ್ಲ ನಂಬ್ತಿಯ?

ಹಿಂದೆ ಯಲ್ಲ ನಂಬ್ತಿದ್ರು, ನಾನೂ ನಂಬ್ತಿದ್ದೆ, ಈಗ ನೋಡಿದ್ರೆ ಯಾಕೋ ಅನ್‌ಮಾನ

ಮತ್ತೆ ಯಡ್ಯೂರಪ್ಪ ಯಾಕ್ ನಂಬ್ತನೆ?

ಏ.. ನಂಬದೂ ಇಲ್ವಂತೆ ಏನೂ ಇಲ್ವಂತೆ, ಸುಮ್ನೆ ನಾಟ್ಕ ಆಡ್ತನಂತೆ, ಸಿಕ್ಕಾಪಟ್ಟೆ ದುಡ್ ತಿಂದವ್ನೆ, ಸೈಟು, ಜಮೀನ್ ಮಾಡ್ಕಂಡವ್ನೆ, ಅದ್ಯಲ್ಲಾನು ವಿಚಾರ್ಣೆ ಮಾಡಿ ಅಂತವ ಅದ್ಯಾರೋ ಕೋರ್ಟಿಗಾಕ್ಯವ್ರಂತೆ, ಅದ್ಕೆ ಯದ್ರಿಕತ್ತವ್ನೆ, ಆದ್ರೆ ಜನ ಮೆಚ್ಸಕೆ ಮಾಟ ಗೀಟ ಅಂತ ನಾಟ್ಕ ಆಡ್ತಾವ್ನೆ.

ಆಸ್ತಿ ಮಾಡಿದ್ರೆ ಅದಕ್ಯಾಕೆ ಯದ್ರಿಕತ್ತನೆ?

ಯಾಕೆ ಅಂದ್ರೆ ಅದು ಅವ್ನು ಕಷ್ಟಪಟ್ಟು ದುಡ್ದಿದ್ದಲ್ವಲ್ಲ, ಅದ್ಕೆ ಬಯ ಆಯ್ತಾ ಆದಂತೆ. ತೆಮಿಳ್ ನಾಡ್ನಲಿ ರಾಜ ಅನ್ನನು ಸೆಂಟ್ರಲ್ ಗೌರ್ಮೆಂಟ್ನಲಿ ಮಿನಿಷ್ಟ್ರಾಗಿದ್ದ. ಅವ್ನು ಸಿಕ್ಕಾಬಟ್ಟೆ ದುಡ್ ತಿಂದು ಈಗ ಮಿನಿಷ್ಟ್ರು ಕ್ಯಲ್ಸ ಕಳ್ಕಂಡು ಜೈಲಿಗೋಗ್ಯವ್ನಂತೆ. ಇದ ನೋಡಿ ಯಡ್ಯೂರಪ್ಪಂಗೂ ಬಯ ಆಗಿ ಈತರ ಆಡ್ತಾ ಅವ್ನಂತೆ.

ರಾಜ ಅನ್ನನ ಯಾರು ಇಡ್ದು ಜೈಲಿಗೆ ಕಳುಸ್ದರು?

ವಿರೋದ್ ಪಕ್ಷದವ್ರು, ಈ ಬೀಜೇಪಿಯವ್ರು ಯಲ್ರೂ ಸೇರ್ಕಂಡು ಗಲಾಟೆ ಮಾಡಿದ್ರಂತೆ. ಕ್ವನಿಗೆ ಕಾಂಗ್ರೆಸ್‌ನವ್ರು ಇದ ಮುಚ್ಚಾಕಕೆ ಆಗದಿಲ್ಲ ಅಂತ ತಿಳ್ಕಂಡು, ರಾಜನ್ನ ನೀನು ಜೈಲಿಗೋಗಪ್ಪ ಅಂದ್ರಂತೆ. ಈಗ ಅವ್ನು ಜೈಲಲವ್ನೆ

ಅಲ್ಲ, ಇಲ್ಲಿ ನೋಡಿದ್ರೆ ಯಡ್ಯೂರಪ್ಪ ಅಜೀರ್ಣ ಆಗಂಗೆ ತಿಂದು ಕೂತವ್ನೆ, ಆ ಬೀಜೇಪಿಯವ್ರು ರಾಜ ಅನ್ನನ್ ಬಗ್ಗೆ ಯಾವ್ ಬಾಯ್ಲಿ ಮಾತಾಡ್ಯರು?

ಅದ್ಕೆ ಯಡ್ಯೂರಪ್ಪುಂಗೆ ಬಯ ಆಗಿರದು. ಕಾಂಗ್ರೆಸ್‌ನವ್ರು ಅವ್ರು ಕಡೆ ತಪ್ ಮಾಡಿದ್ ವಬ್ಬುನ್ನಾರ ಜೈಲಿಗ್ ಕಳಿಸ್ಯವ್ರೆ, ಅದ ನೋಡಿ ಬೀಜೇಪಿ ಲೀಡ್ರುಗಳೂ ಯಡ್ಡಿ ನೀನು ಜೈಲಿಗೋಗಿ ನಮ್ ಮಾನ ಉಳ್ಸಪ್ಪ ಅಂತವ ಎಲ್ಲಿ ಏಳ್ತರೋ ಅಂತ ಯದ್ರಿಕಂಡು ಬ್ಯಾರೇರ್ ಮ್ಯಾಲೆಲ್ಲ ಏನೇನೋ ಏಳ್ತಾ ಕುಂತವ್ನೆ.

ಅದ್ಕೆ ನಮ್ ರೇವಣ್ಣ ಏನಂದ್ನಂತೆ?

ಯಡ್ಯೂರಪ್ಪ ಕರ್ನಾಟಕಕ್ಕೆ ದ್ವರೆ ಇದ್ದಂಗೆ, ದ್ವರೇನೇ ಈತರ ಯದ್ರಿಕೆ ಆಯ್ತದೆ ಅಂದ್ರೆ ನಮ್ಮಂತೋರ್ ಕತೆ ಏನು? ಅಂತ ಕ್ವಚ್ಚನ್ ಮಾಡ್ತಾ ಅವ್ನಂತೆ.

ಮತ್ತೆ ಕರೆಂಟ್ ಮಿನಿಷ್ಟ್ರೂ ನಂಗೆ ಯಾರೋ ಪೋನ್ ಮಾಡಿ ಯದ್ರುಸ್ತಾ ಅವ್ರೆ, ನಂಗೆ ಯದ್ರಿಕೆ ಆಯ್ತಾ ಅದೆ ಅಂದವ್ನಂತೆ?

ಅದು ಒಂತರ ಅಂಗೆಯ. ಯಡ್ಯೂರಪ್ಪುಂಗೆ ಏನಾರ ಆದ್ರೆ ನಂಗೂ ಅಂಗೆಯ ಅಂತ ಏಳದು ಆ ಯಮ್ಮುಂಗೆ ಅಬ್ಯಾಸ ಆಗ್ಯದಂತೆ, ಜ್ವತಿಗೆ ಯಡ್ಯೂರಪ್ಪ ಜೈಲಿಗೋದ್ರೆ ನನ್ನ ಕಾಪಾಡರು ಯಾರು ಅಂತ ಯದ್ರಿಕಂಡು ಅಂಗೆ ಏಳ್ತಾ ಅವ್ನಂತೆ

ಏನೇ ಆಗ್ಲಿ, ರಾಜ್ಯ ಆಳಿ ಅಂತ ಜನ ಅದಿಕಾರ ಕೊಟ್ರೆ ಇವ್ರು ದುಡ್ನ ನುಂಗಿ ಅದ ಮುಚ್ಕಳಕೆ ಮಾಟ ಮಂತ್ರ ಅಂದ್ಕಂಡು ಜನಗಳಿಗೆ ಮೋಸ ಮಾಡದ ಏನಾರ ಮಾಡಿ ನಿಲ್ಲುಸ್ಬೇಕು ಕಣಣ್ಣ.

ಕನ್ನಡ ವಾರಪತ್ರಿಕೆ

“ಬೆಟ್ಟಗಳ ಒಡೆದೆವು ಬಂಡೆಗಳ ಹಿಂಡಿದೆವು... ಶ್ರಮವು ಯಾರಿಗೋ ಸಿರಿಯು ಯಾರಿಗೋ.....”

ಬೆಟ್ಟಗಳ ಒಡೆದೆವು ಬಂಡೆಗಳ ಹಿಂಡಿದೆವು
ನಮ್ಮ ರಕ್ತ ಚೆಲ್ಲಿ ನಾವು ಪ್ರಾಜೆಕ್ಟು ಕಟ್ಟಿದೆವು.
ಶ್ರಮವು ಯಾರಿಗೋ ಸಿರಿಯು ಯಾರಿಗೋ
ಶ್ಯಾರಿ ಗಂಜಿಗಾಗಿ ಸೇರು ಬೆವರು ಸುರಿಸೂತ
ಊರೂರು ತಿರುಗುವರಾರಯ್ಯ
ಈ ನಾಡ ಕಟ್ಟಿದೋರು ನಾವೆಲ್ಲಿ ಹೋಗಬೇಕು
ಕೂಲಿಯವರು ನಾವು ಕೇಳಯ್ಯ.....

ಇಂಥ ಕೂಲಿಕಾರರ, ಹಾಡುಗಳು ಆ ಸಭಾಂಗಣದಲ್ಲಿ ಮಾರ್ದನಿಸಿದವು. ಅದು ಕೃಷಿ



ಕೂಲಿಕಾರರ ರಾಜ್ಯಮಟ್ಟದ ಸಮಾವೇಶ. ಕ್ಷಮಿಸಿ ಕೂಲಿಕಾರರದ್ದಲ್ಲ, ಮಹಿಳಾ ಕೂಲಿಕಾರ್ತಿಯರದ್ದು.

ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದ ನೂರಾರು ಮಹಿಳಾ ಕೂಲಿಕಾರರು ಅಲ್ಲಿ ನೆರೆದರು. ಅದು ಬೆಂಗಳೂರಿನ ಕಬ್ಬನ್‌ಪಾರ್ಕ್‌ನೊಳಗಿನ ಎನ್.ಜಿ.ಓ. ಸಭಾಂಗಣ. ಉದ್ಯೋಗ ಖಾತ್ರಿ ಯೋಜನೆಯಲ್ಲಿ ಮನುಷ್ಯರಿಗೆ ಬದಲಿಗೆ ಯಂತ್ರಗಳಿಂದ ಕೆಲಸ ಮಾಡಿಸಿ ಕೆಲಸ ವಂಚಿಸುವುದು, ಜಾಬ್ ಕಾರ್ಡ್ ಕಿತ್ತುಕೊಂಡು ಕೂಲಿ ಕದಿಯುವುದು, ಮೈದಣಿದು ದುಡಿಸಿಕೊಂಡರೂ ಮಹಿಳೆ ಎಂಬ ಕಾರಣಕ್ಕೆ ಕೂಲಿ ಕಮ್ಮಿ ಕೊಡುವುದು, ಮಹಿಳೆಯರ ಮೇಲೆ ಭೂಮಾಲಿಕರ ದಬ್ಬಾಳಿಕೆ, ಲೈಂಗಿಕ ಕಿರುಕುಳಗಳು, ಈ ಕೂಲಿಕಾರ ಮಹಿಳೆಗ್ಯಾಕೆ ಚುನಾವಣೆ ಹುಚ್ಚು ಎಂದು ಗೇಲಿ ಮಾಡಿ, ಅಣ್ಕಿ ಮಾಡಿ, ಭೂಮಾಲೀಕ ವರ್ಗ ರಾಜಕೀಯದ ರಕ್ಷಣೆಗೆ ಸಂಚು ಮಾಡುವುದು.... ಹೀಗೆ ಏನೆಲ್ಲಾ ಅನುಭವಗಳು. ಎಷ್ಟೋ ಯಶಸ್ವಿ ಹೋರಾಟದ ದಿಟ್ಟ ಅನುಭವಗಳನ್ನು ಅಲ್ಲಿ ಕೂಲಿಕಾರರ ಮಹಿಳೆಯರು ಹಂಚಿಕೊಂಡರು. ಅಸ್ಪೃಶ್ಯತೆಯ ಅಪಮಾನಗಳನ್ನು ಎದುರಿಸಬೇಕಾಗುವ ಪರಿಸ್ಥಿತಿಗಳೂ ಅಲ್ಲಿ ತೆರೆದುಕೊಂಡವು. ಕೂಲಿಕಾರ ಮಹಿಳೆಯರ ಅಧ್ಯಕ್ಷೀಯ ಮಂಡಳಿಯು ಕಲಾಪ ನಡೆಸಿಕೊಟ್ಟಿತು. ಸಂಘಟನೆ, ಹೋರಾಟವೊಂದೇ ಸಮಸ್ಯೆಗೆ ಪರಿಹಾರ ಎಂಬುದು ಪ್ರತಿನಿಧಿಗಳ ಅನುಭವಗಳ ಹಂಚಿಕೆಯ ಮೂಲಕವೇ ಸರ್ವಾನುಮತದ ನಿರ್ಣಯವೆಂಬಂತೆ ಮೂಡಿಬಂದಿತು. ಸಮಾರಂಭದ ವರದಿ ಮುಂದಿದೆ.



“ಸಾಮಾಜಿಕ ಭದ್ರತೆ ಮಹಿಳಾ ಕೂಲಿಕಾರರಿಗೆ ಸಿಗಲಿ ಬರೀ ಯಡಿಯೂರಪ್ಪನವರ ಕುಟುಂಬ ವರ್ಗಕ್ಕಲ್ಲ”

- ವಿಜಯರಾಘವನ್

ಶಾಸನಬದ್ಧ ನಿರ್ದೇಶನದಂತೆ ನೂರು ದಿನಗಳ ಕೆಲಸ ಕೊಡುವ ಬದಲಿಗೆ ಕರ್ನಾಟಕ ರಾಜ್ಯದಲ್ಲಿ ಮಹಾತ್ಮಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಕೇವಲ 30 ದಿನಗಳ ಉದ್ಯೋಗ ಮಾತ್ರ ಕೊಡಲಾಗುತ್ತಿದೆ. ಒಂದು ಕೆ.ಜಿ. ಈರುಳ್ಳಿ ಕೊಂಡುಕೊಳ್ಳುವಷ್ಟಾದರೂ ಕೂಡ ರಾಜ್ಯ ಸರ್ಕಾರ ಕನಿಷ್ಠ ಕೂಲಿ ಕೊಡುತ್ತಿಲ್ಲ.

ಕರ್ನಾಟಕದಲ್ಲಿ ಉದ್ಯೋಗಖಾತ್ರಿ ಯೋಜನೆಯ ದಿನಗೂಲಿಯನ್ನು ಕನಿಷ್ಠ 150ಕ್ಕೆ ಏರಿಸಬೇಕು. ವರ್ಷದಲ್ಲಿ ಕನಿಷ್ಠ 200 ದಿನಗಳ ಉದ್ಯೋಗ ನೀಡುವಂತೆ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಲಾಗುತ್ತಿದೆ. ರಾಜ್ಯ ಸರ್ಕಾರ ಸಹ 200 ದಿನಗಳ ಕಾಲ ಕೆಲಸ ಒದಗಿಸಬೇಕು.

ಕೂಲಿಕಾರರು, ಅದರಲ್ಲೂ ಮಹಿಳಾ ಕೃಷಿ ಕೂಲಿಕಾರರಿಗೆ ಕರ್ನಾಟಕ ರಾಜ್ಯದಲ್ಲಿ ಸಾಮಾಜಿಕ ಭದ್ರತೆ ಇಲ್ಲ. ಸಮಾಜದ ಉತ್ಪಾದಕತೆ ಹೆಚ್ಚಿಸಲು ಬೆವರು ಸುರಿಸಿ ದುಡಿಯುವ ಈ ಕೂಲಿಕಾರರ ಜೀವನಕ್ಕೆ ಸಾಮಾಜಿಕ ಭದ್ರತೆ ಒದಗಿಸಬೇಕು.

ನಿವೇಶನ ಮತ್ತು ಮನೆ ನಿವೃತ್ತಿ ವೇತನ, ಸೂಕ್ತ ರೇಷನ್ ಒದಗಿಸಬೇಕು. ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರದಲ್ಲಿ ಸಾಮಾಜಿಕ ಭದ್ರತೆ ಎಂಬುದು ಯಡಿಯೂರಪ್ಪನವರ ಹಿರಿ ಮಗ, ಕಿರಿ ಮಗ, ಅಳಿಯ, ಕುಟುಂಬ ವರ್ಗದವರಿಗೆ, ರೆಡ್ಡಿ ಸಹೋದರರಿಗೆ ಮಾತ್ರ ಸಿಗುತ್ತಿದೆ. ಕೃಷಿ ಕೂಲಿಕಾರರ ಸಂಘವು ಈ ನೀತಿಗಳ ವಿರುದ್ಧ ಹೋರಾಟವನ್ನು ತೀವ್ರಗೊಳಿಸಬೇಕು ಎಂದು ಮಾಜಿ ಸಂಸದರೂ ಹಾಗೂ ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ಅಧ್ಯಕ್ಷರಾದ ಎ.ವಿಜಯರಾಘವನ್ ಕರೆ ನೀಡಿದರು.

ಬೆಂಗಳೂರಿನ ಎನ್‌ಜಿಓ ಸಭಾಂಗಣದಲ್ಲಿ ಇಂದು ಆರಂಭಗೊಂಡ ಎರಡು ದಿನಗಳ ಪ್ರಥಮ ಮಹಿಳಾ ಕೃಷಿ ಕೂಲಿಕಾರರ ರಾಜ್ಯಮಟ್ಟದ ಸಮಾವೇಶವನ್ನು ಉದ್ಘಾಟಿಸಿ ಅವರು ಈ ಮಾತುಗಳನ್ನು ಹೇಳಿದರು.

ಕೇರಳ ರಾಜ್ಯದಲ್ಲಿ ಅಲ್ಲಿನ ಎಡರಂಗ ಸರ್ಕಾರ ಉದ್ಯೋಗ ಖಾತ್ರಿ ಯೋಜನೆಯಲ್ಲಿ ದಿನಕ್ಕೆ 200 ರೂಪಾಯಿ ಕೂಲಿ ಕೊಡಲು ತೀರ್ಮಾನಿಸಿದೆ. ಅಲ್ಲಿ ಕೂಲಿಕಾರರಿಗೆ ಕುಡಿಯುವ ನೀರು,ಶೌಚಾಲಯ ವ್ಯವಸ್ಥೆ ಇರುವ ಮನೆ, ನಿವೇಶನ, ನಿವೃತ್ತಿ ವೇತನ, ರಿಯಾಯಿತಿ ದರದಲ್ಲಿ ರೇಷನ್, ಹಾಗೂ ತರಕಾರಿ ಕೊಡುತ್ತಿದೆ. ಕರ್ನಾಟಕ ಸರ್ಕಾರ ಈ ಮಾದರಿಯನ್ನು ಗಮನಿಸಬೇಕು ಎಂದೂ ವಿಜಯ ರಾಘವನ್ ಒತ್ತಾಯಿಸಿದರು.

ಪುಟ 12 ಕ್ಕೆ

ಹರಿದು ಹೋಗುವ ಸೀರೆ ಹಂಚುವ ಬದಲು ಭೂಹೀನರಿಗೆ ಭೂಮಿ ಕೊಡಿ

- ಬಿ.ಟಿ.ಲಲಿತಾ ನಾಯಕ್

ಸರಕಾರ ಬಡ ಮಹಿಳೆಯರಿಗೆ ಹಂಚುವ ಸೀರೆ ಬಲುಬೇಗ ಹರಿದುಹೋಗುತ್ತದೆ. ಸರ್ಕಾರ ಸೀರೆ ಹಂಚುವ ಬದಲಿಗೆ ಬಡವರಿಗೆ, ಭೂಹೀನ ಕೂಲಿಕಾರರಿಗೆ ಭೂಮಿ ಹಂಚಿ ನೀರಾವರಿ ಮುಂತಾದ ಸೌಲಭ್ಯ ಒದಗಿಸಿಕೊಟ್ಟರೆ ಜನರು ತಮಗೆ ಬೇಕಾದ ಸೀರೆ ಮತ್ತು ಬಟ್ಟೆಯನ್ನು ತಾವೇ ಕೊಂಡುಕೊಳ್ಳುತ್ತಾರೆ. ತಮ್ಮ ಮಕ್ಕಳನ್ನು ಶಾಲೆಗೆ. ಕಳುಹಿಸುತ್ತಾರೆ ಸ್ವಾವಲಂಬಿಗಳಾಗುತ್ತಾರೆ ಎಂದು ಮಾಜಿ ಸಚಿವರು, ಸಾಹಿತಿಗಳೂ ಆದ ಶ್ರೀಮತಿ ಬಿ.ಟಿ.ಲಲಿತಾನಾಯಕ್‌ರವರು ಹೇಳಿದರು. ಜನವರಿ 30 ರಂದು ಸಮಾವೇಶದ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡ ಅವರು ಮಾತನಾಡಿ ಈ ಮಾತುಗಳನ್ನು ಹೇಳಿದರು

ಕೃಷಿ ಕೂಲಿಕಾರ ಮಹಿಳೆಯರು, ದಲಿತ ಹಾಗೂ ಬುಡಕಟ್ಟು ಮಹಿಳೆಯರ ಬದುಕಿಗೆ ರಕ್ಷಣೆ ಇಲ್ಲ. ದಿನನಿತ್ಯವೂ ಅವರ ಮೇಲೆ ಅತ್ಯಾಚಾರ, ಮಾನಭಂಗದಂತಹ ದೌರ್ಜನ್ಯಗಳು ನಡೆಯುತ್ತಿದೆ. ತನಗೆ ರಾಜ್ಯದಲ್ಲಿ ಕನಿಷ್ಠ ದಿನಕ್ಕೆ ಇಂತಹ 5 ರಿಂದ 6 ದೂರುಗಳಾದರೂ ಬರುತ್ತವೆ ಎಂದೂ ಲಲಿತಾ ನಾಯಕ್ ಹೇಳಿದರು.

ಬಹುತೇಕ ದಿನಗೂಲಿಯನ್ನೇ ಅವಲಂಬಿಸಿರುವ ಲಂಬಾಣಿ ಜನರು ಸಹ ಬಹಳ ಸಂಕಷ್ಟದಲ್ಲಿದ್ದಾರೆ. ಕೂಲಿ ಸಾಲದ ಈ ವಿಭಾಗದ ಜನರು ಹಣವಂತರಿಗೆ ತಮ್ಮ ಮಕ್ಕಳನ್ನು ಮಾರಿಕೊಳ್ಳುವಂತಹ ಘಟನೆಗಳು ನಡೆಯುತ್ತಿವೆ. ಎಷ್ಟೋ ಕಡೆಗಳಲ್ಲಿ ಕೂಲಿಕಾರರ ತುಂಡು ಜಮೀನು, ಮನೆಗಳನ್ನು ಕಸಿದುಕೊಳ್ಳಲಾಗುತ್ತಿದೆ. ಇಂತಹ ಪರಿಸ್ಥಿತಿ ಬದಲಾಗಬೇಕಾದರೆ ಕೂಲಿಕಾರರು, ಮಹಿಳೆಯರು ಸಂಘಟಿತರಾಗಿ ಹೋರಾಟ ನಡೆಸಬೇಕೆಂದು ಬಿ.ಟಿ.ಲಲಿತಾ ನಾಯಕ್ ರವರು ಕರೆ ನೀಡಿದರು.

ಅಖಿಲ ಭಾರತ ಕೃಷಿ ಕೂಲಿಕಾರರ ಸಂಘಟನೆಯ ಅಧ್ಯಕ್ಷರಾದ ಪಿ.ರಾಮಯ್ಯ ಅವರು ಮಾತನಾಡಿ ದೇಶದಲ್ಲಿ ಕೂಲಿಕಾರರಿಗೆ ವರ್ಷದಲ್ಲಿ ಸರಾಸರಿ 57 ದಿನ ಮಾತ್ರ ಕೂಲಿಯ ಕೆಲಸ ಸಿಗುತ್ತಿದೆ. ಕುಟುಂಬದ ನಿರ್ವಹಣೆಗೆ ಅವರಿಗೆ ಸಿಗುವ ಕೂಲಿ ಸಾಲುವುದಿಲ್ಲ. ಅದರಿಂದ ಕೂಲಿಕಾರರು ಅದರಲ್ಲೂ ಮಹಿಳೆಯರು ರಕ್ತಹೀನತೆಯಿಂದ ಬಳಲುತ್ತಿದ್ದಾರೆ. ಅವರ ಮಕ್ಕಳು ಅಪೌಷ್ಠಿಕತೆಯಿಂದ ನರಳುತ್ತಿದ್ದಾರೆ. ಕೇಂದ್ರ ರಾಜ್ಯ ಸರ್ಕಾರಗಳಿಗೆ ಕೂಲಿಕಾರರ ಬಗೆಗೆ ಕಾಳಜಿಯಿಲ್ಲ. ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಜಾರಿಗೆ ಬಂದಿರುವುದು ಮುಖ್ಯವಾಗಿ ಎಡಪಕ್ಷಗಳ ಹೋರಾಟದಿಂದ. ಈ ಯೋಜನೆಯ ಸರಿಯಾದ ಜಾರಿಗಾಗಿಯೂ ಹೋರಾಟ ನಡೆಯಬೇಕು. ಅದಿಲ್ಲವಾದರೆ ಯೋಜನೆಯಲ್ಲಿ ಭ್ರಷ್ಟಾಚಾರ ವಿಪರೀತವಾಗಿ ಯೋಜನೆ ವಿಫಲವಾಗುತ್ತದೆ ಎಂದು ಹೇಳಿದರು.

ಸಂಘಟನೆಯ ರಾಜ್ಯ ಉಪಾಧ್ಯಕ್ಷರಾದ ಜಿ.ಎನ್.ನಾಗರಾಜ್‌ರವರು ಸಮಾರಂಭದ ಅಧ್ಯಕ್ಷತೆ ಮಾತನಾಡಿ ಇಂದು ಗ್ರಾಮೀಣ ಪ್ರದೇಶಗಳಲ್ಲಿ ದನಿಯಿಲ್ಲದ ಕೂಲಿಕಾರರಿಗೆ ಸಂಘ ದನಿ ಕೊಡಲು ಶ್ರಮಿಸುತ್ತಿದೆ. ಗ್ರಾಮೀಣ ಪ್ರದೇಶಗಳಲ್ಲಿಂದು ಶ್ರೀಮಂತರು ಭೂಮಾಲೀಕರ ದನಿಯೇ ಕೇಳುತ್ತಿದೆ. ಅದನ್ನು ಬದಲಿಸಬೇಕಿದೆ ಎಂದರು. ಸಮಾರಂಭದಲ್ಲಿ ಕೃಷಿ ಕೂಲಿಕಾರರ ಸಂಘಟನೆಯ ರಾಜ್ಯ ಅಧ್ಯಕ್ಷರಾದ ನಿತ್ಯಾನಂದ ಸ್ವಾಮಿ, ಪ್ರಧಾನ ಕಾರ್ಯದರ್ಶಿ ಚಂದ್ರಪ್ಪ ಹೊಸ್ಕೇರಾ, ಮಹಿಳಾ ಕೃಷಿ ಕೂಲಿಕಾರರ ರಾಜ್ಯ ಮಹಿಳಾ ಉಪಸಮಿತಿಯ ನೂತನ ಸಂಚಾಲಕಿ ಮಲ್ಲಮ್ಮ ಕೊಡ್ಲಿಯವರು ಉಪಸ್ಥಿತರಿದ್ದರು.

ಜನಶಕ್ತಿ ಓದುಗರ ಸಮಾವೇಶಗಳು ಸಮುದಾಯ ಮಾಧ್ಯಮ ವಿಚಾರ ಸಂಕಿರಣ ಇತ್ಯಾದಿ

ಜನ ಹೋರಾಟಗಳ ಮಾಹಿತಿದಾರ, ದುಡಿಯುವ ವರ್ಗದ ಮಾರ್ಗದರ್ಶಿ ಹಾಗೂ ಕನ್ನಡದ ಮುಖ್ಯ ವಾರಪತ್ರಿಕೆಯಾಗಿರುವ 'ಜನಶಕ್ತಿ'ಯ ಪ್ರಸಾರ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳುವ ಕಾರ್ಯಕ್ರಮಗಳನ್ನು ಸಿಪಿಎಂ ಪಕ್ಷದ ಮಂಗಳೂರು ನಗರ ಸಮಿತಿ ಹಮ್ಮಿಕ್ರೊಂಡಿತ್ತು. ಅದರ ಭಾಗವಾಗಿ ನಗರದ ವಿವಿಧ ಕಡೆಗಳಲ್ಲಿ 'ಜನಶಕ್ತಿ' ಓದುಗರ ಸಮಾವೇಶಗಳನ್ನು ಏರ್ಪಡಿಸಲಾಗಿತ್ತು.

ಈ ಪ್ರಸಾರ ವಿಸ್ತರಣೆಯ ಭಾಗವಾಗಿ 'ಜನಶಕ್ತಿ' ಸಂಪಾದಕರಾದ ಎಸ್.ವೈ.ಗುರುಶಾಂತ್ ಹಾಗೂ ಸಂಪಾದಕೀಯ ವಿಭಾಗದ ಆರ್.ರಾಮಕೃಷ್ಣ ಅವರು ಜನವರಿ 9 ರಂದು ಮಂಗಳೂರು ನಗರ ಮತ್ತು ತಾಲ್ಲೂಕಿನಲ್ಲಿ ವಿತರಣೆಯ ಜವಾಬ್ದಾರಿ ಹೊತ್ತ ಪಕ್ಷದ ಮುಖ್ಯ ಸಂಗಾತಿಗಳೊಂದಿಗೆ ಸಂವಾದ ನಡೆಸಿದ್ದರು. ಜನವರಿ 20 ರಂದು ನಗರದ 'ಜನಶಕ್ತಿ' ಏಜೆಂಟರುಗಳ ಸಭೆಯನ್ನು ಸಿಪಿಎಂ ಮಂಗಳೂರು ನಗರ ಸಮಿತಿಯಿರುವ ವೈದಾನ ಕಚೇರಿಯಲ್ಲಿ ಕರೆಯಲಾಗಿತ್ತು. ದಕ್ಷಿಣ ಕನ್ನಡ ಜಿಲ್ಲಾ ಸಿಪಿಎಂ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜೆ.ಬಾಲಕೃಷ್ಣ ಶೆಟ್ಟಿ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಇನ್ನೊಬ್ಬ ಕಾರ್ಯದರ್ಶಿ ಮಂಡಳಿ ಸದಸ್ಯರಾದ ವಸಂತ ಆಚಾರಿ ಈ ಸಭೆಯನ್ನು ಉದ್ಘಾಟಿಸಿ ಮಾತನಾಡಿದರು. ಪಕ್ಷದ ನಗರ ಸಮಿತಿ ಕಾರ್ಯದರ್ಶಿ ಸುನಿಲ್‌ಕುಮಾರ್ ಬಜಾಲ್, ಸಿಪಿಎಂ ಜಿಲ್ಲಾಸಮಿತಿ ಸದಸ್ಯರಾದ ಸುಕುಮಾರ್, ಕೃಷ್ಣಪ್ಪ ಕೊಂಚಾಡಿ ಈ ಸಭೆಯನ್ನುದ್ದೇಶಿಸಿ ಮಾತನಾಡಿದರು. 'ಐಕ್ಯರಂಗ'ದಿಂದ ಮೊದಲುಗೊಂಡು ಇದೀಗ 'ಜನಶಕ್ತಿ'ಯಾಗಿ ಮುಂದುವರಿಯುತ್ತಿರುವ 'ಜನಶಕ್ತಿ'ಯ ಇತಿಹಾಸ, ಮುಖ್ಯವಾಗಿ ಮಂಗಳೂರಿನಿಂದ ಮುದ್ರಣಗೊಳ್ಳುತ್ತಿದ್ದ 'ಐಕ್ಯರಂಗ' ಬೆಂಗಳೂರಿಗೆ ಸ್ಥಳಾಂತರವಾದುದು ಮೊದಲಾದ ಹೆಮ್ಮೆಯ ಹಲವು ಸಂಗತಿಗಳನ್ನು, ಮಾತನಾಡಿದ ಎಲ್ಲ ಜಿಲ್ಲಾಸಮಿತಿ ನಾಯಕರು ಪ್ರತಿನಿಧಿಗಳಿಗೆ ಸ್ಫೂರ್ತಿ ಮೂಡುವಂತೆ ವಿವರಿಸಿದರು. ಹಿರಿಯ ಪ್ರತಿನಿಧಿಗಳೂ ತಮ್ಮ ಅನುಭವಗಳನ್ನು ತಿಳಿಸಿದರು. ಪ್ರತಿನಿಧಿಗಳು ವೈಯಕ್ತಿಕವಾಗಿ ತಾವು ಹೆಚ್ಚಿಸಲಿರುವ ಚಂದಾ ವಿವರಗಳನ್ನು ಕ್ರೋಢೀಕರಿಸಿದಾಗ, ಮಂಗಳೂರು ನಗರವೊಂದರಲ್ಲೇ ಈಗಿರುವ ಪ್ರಸಾರ ಸಂಖ್ಯೆಯನ್ನು 316 ರಿಂದ 405 ಕ್ಕೆ ಹೆಚ್ಚಿಸುವುದೆಂದು ತೀರ್ಮಾನಿಸಲಾಯಿತು. 15 ಮಂದಿ ಪ್ರತಿನಿಧಿಗಳು ಈ ಸಭೆಯಲ್ಲಿ ಭಾಗವಹಿಸಿದ್ದರು.



ವರದಿ : ವಾ.ಉ

ಮಂಗಳೂರು ನಗರ ಪ್ರದೇಶದಲ್ಲಿ ಈ ಅಭಿಯಾನದ ಭಾಗವಾಗಿ ಸ್ಥಳೀಯವಾಗಿ ಓದುಗರ ಸಮಾವೇಶವನ್ನು ಏರ್ಪಡಿಸಲಾಗಿತ್ತಷ್ಟೇ. ಡಿಸೆಂಬರ್ 26 ರಂದು ನಡೆದ ಸಮಾವೇಶದಲ್ಲಿ ಬಜಾಲು ಪಕ್ಕಲಡ್ಕ ಯುವಕ ಮಂಡಲದಲ್ಲಿ 40 ಮಂದಿ ಬಜಾಲ್ ಕಂಕನಾಡಿ ಪ್ರದೇಶದ 'ಜನಶಕ್ತಿ' ಓದುಗರ ಸಭೆಯಲ್ಲಿ ಹಾಜರಿದ್ದರು. ಕೃಷ್ಣಪ್ಪ ಕೊಂಚಾಡಿ ಸಮಾವೇಶವನ್ನು ಉದ್ಘಾಟಿಸಿದರು. ಸುನಿಲ್‌ಕುಮಾರ್ ಬಜಾಲ್, ಪಕ್ಷದ ಬಜಾಲ್ ಶಾಖೆ ಕಾರ್ಯದರ್ಶಿ ಅಶೋಕ್ ಸಾಲ್ಯಾನ್, ಕಂಕನಾಡಿ ಶಾಖೆಯ ಕಾರ್ಯದರ್ಶಿ ಲೋಕೇಶ್ ಎಂ. ಸಭೆಯನ್ನುದ್ದೇಶಿಸಿ ಮಾತನಾಡಿದರು. ಪತ್ರಿಕೆಯ ಚಂದಾ ಸಂಖ್ಯೆಯನ್ನು 50 ರಿಂದ 100 ಕ್ಕೆ ಹೆಚ್ಚಿಸಲು ತೀರ್ಮಾನಿಸಲಾಯಿತು. ಓದುಗರ ಪೈಕಿ ಹರಿಶ್ಚಂದ್ರ, ಸಂತೋಷ್, ಜಯರಾಮ, ಮಣಿಯಾಣಿ, ಸಂತೋಷ್‌ಕುಮಾರ್, ಪ್ರೇಮನಾಥ್ ಜಲ್ಲಿಗುಡ್ಡೆ ಪ್ರತಿಕ್ರಿಯೆ ನೀಡಿದರು.

ಜನವರಿ 16 ರಂದು ಎಯ್ಯಾಡಿ ಕೊಂಚಾಡಿ ಪ್ರದೇಶದ ಓದುಗರ ಸಮಾವೇಶವನ್ನು ಕೊಂಚಾಡಿಯ ಡಿವೈಎಫ್‌ಐ ಕಛೇರಿಯಲ್ಲಿ ಏರ್ಪಡಿಸಲಾಗಿತ್ತು. 35 ಮಂದಿ ಓದುಗರು ಭಾಗವಹಿಸಿದ್ದರು. ಸುನಿಲ್‌ಕುಮಾರ್ ಬಜಾಲ್ ಸಮಾವೇಶವನ್ನು ಉದ್ಘಾಟಿಸಿದರು. ಕೃಷ್ಣಪ್ಪ ಕೊಂಚಾಡಿ ಅಧ್ಯಕ್ಷತೆ ವಹಿಸಿದ್ದರು. ಸಂವಾದದಲ್ಲಿ ಸ್ಥಳೀಯ ಶಿಕ್ಷಕಿ ನಾಗರತ್ನ, ಸಿಪಿಎಂ ಕೊಂಚಾಡಿ ಶಾಖಾ ಕಾರ್ಯದರ್ಶಿ ರವಿಚಂದ್ರ.ಕೆ, ಸುನಂದಾ.ಕೆ, ತಿಮ್ಮಯ್ಯ ಕೊಂಚಾಡಿ, ಗಣೇಶ್ ಕೊಪ್ಪಲಕಾಡು, ಮೋನಪ್ಪ ದೇವಾಡಿಗ, ದಾಮೋದರ ಪೂಜಾರಿ, ತುಕಾರಾಮ ಕೊಂಚಾಡಿ, ಡಿವೈಎಫ್‌ಐನ ಕ್ರಿಸ್ಟೋಫರ್ ಮೊದಲಾದವರು ಮಾತನಾಡಿದರು. ಪತ್ರಿಕಾ ಪ್ರಸಾರ ಸಂಖ್ಯೆಯನ್ನು 39 ರಿಂದ 60 ಕ್ಕೆ ಹೆಚ್ಚಿಸಲು ತೀರ್ಮಾನಿಸಲಾಯಿತು.

ಜನವರಿ 30 ರಂದು ಬೋಳಾರ ಹಂಚು ಕಾರ್ಮಿಕರ ಸಂಘದ ಕಚೇರಿ ಕಟ್ಟಡದಲ್ಲಿ ಬೋಳಾರ ಪ್ರದೇಶದ ಓದುಗರ ಸಮಾವೇಶ ನಡೆಯಿತು. ಪಕ್ಷದ ಜಿಲ್ಲಾ ಸಮಿತಿ



ಮುಖಂಡರಾದ ಸುಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಕೃಷ್ಣಪ್ಪ ಕೊಂಚಾಡಿ ಮುಖ್ಯ ಅತಿಥಿಗಳಾಗಿದ್ದರು. ಪಕ್ಷದ ಮಂಗಳೂರು ನಗರ ಸಮಿತಿ ಕಾರ್ಯದರ್ಶಿ ಸುನಿಲ್‌ಕುಮಾರ್ ಬಜಾಲ್, ನಗರ ಸಮಿತಿ ಸದಸ್ಯೆ ಭಾರತಿ ಬೋಳಾರ ಸಭೆಯನ್ನುದ್ದೇಶಿಸಿ ಮಾತನಾಡಿದರು. ಪ್ರದೇಶದಲ್ಲಿ ಪತ್ರಿಕಾ ಪ್ರಸಾರಸಂಖ್ಯೆಯನ್ನು 60 ರಿಂದ 75 ಕ್ಕೆ ಹೆಚ್ಚಿಸಲು ತೀರ್ಮಾನಿಸಲಾಯಿತು. ಅಲ್ಲದೆ ಪತ್ರಿಕಾ ವಿತರಣೆ ಸಮಿತಿಯೊಂದನ್ನು ರಚಿಸಿ, ಸುನಿಲ್ ಬೋಳಾರ ಅವರನ್ನು ಅದಕ್ಕೆ ಸಂಚಾಲಕರಾಗಿ ಮಾಡಲಾಯಿತು.

★

ಪ್ರಜಾಸತ್ತಾತ್ಮಕ ಸಂಸ್ಕೃತಿಗೆ ಉತ್ತೇಜನವೇ ಪರಿಹಾರ

"ಮಾಧ್ಯಮ ಇವತ್ತು ಎದುರಿಸುತ್ತಿರುವ ಸಮಸ್ಯೆಗೆ, ಸಮಾಜದಲ್ಲಿ ಪ್ರಜಾಸತ್ತಾತ್ಮಕ ಸಂಸ್ಕೃತಿಯನ್ನು ಉತ್ತೇಜನಗೊಳಿಸುವುದೇ ಅತ್ಯುತ್ತಮ ಪರಿಹಾರವಾಗಿದೆ. ಈ ಪ್ರಜಾಸತ್ತಾತ್ಮಕ ಸಂಸ್ಕೃತಿಯಾದರೋ ಚರ್ಚೆ ಮತ್ತು ಸಂವಾದದಿಂದ ಮಾತ್ರ ಮೂಡಿಬರಲು ಸಾಧ್ಯ" ಎಂಬುದಾಗಿ ಮಣಿಪಾಲ ಸಂವಹನ ಸಂಸ್ಥೆಯ ನಿರ್ದೇಶಕ ಪ್ರೊ.ವರದೇಶ ಹಿರೇಗಂಗೆ ಹೇಳಿದರು. ಅವರು ಕುಂದಾಪುರದ ಭಂಡಾರ್ಕರ್ಸ್ ಕಾಲೇಜಿನಲ್ಲಿ ಜನವರಿ 30 ರಂದು ಕುಂದಾಪುರ ಸಮುದಾಯ ಏರ್ಪಡಿಸಿದ್ದ "ಜನಸಂಸ್ಕೃತಿ ಮತ್ತು ಮಾಧ್ಯಮ" ವಿಚಾರ ಸಂಕಿರಣದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು.

"ಒಂದೇ ವಿಚಾರಗಳ ಪ್ರತಿಪಾದನೆ ಸಂಸ್ಕೃತಿಯೂ ಆಗುವುದಿಲ್ಲ. ಅಥವಾ ಅದರಿಂದ ಸಮುದಾಯವೂ ರೂಪುಗೊಳ್ಳುವುದಿಲ್ಲ. ಸಾಮಾನ್ಯವಾದ ಜನಪರ ನಿಲುವು ಸಮುದಾಯವನ್ನು ರೂಪಿಸುತ್ತದೆ. ಕೋಮುವಾದದ ಋಣಾತ್ಮಕ ಅಂಶಗಳೇ ಉದ್ದೀಪನಗೊಳ್ಳುವ ಇಂದಿನ ದಿನಗಳಲ್ಲಿ ಮಾಧ್ಯಮಗಳು ಕೊಳ್ಳುಬಾಕ ಹಾಗೂ ಬಂಡವಾಳಶಾಹಿಗಳ ಹಿಡಿತದಿಂದ ಹೊರಬಂದು ಪರಿಣಾಮಕಾರಿ ಹೊಣೆ ನಿರ್ವಹಿಸುವ ಅಗತ್ಯವಿದೆ" ಎಂದರು.

'ಹಿಂದೂ' ಪತ್ರಿಕೆಯ ಬೆಂಗಳೂರು ಬ್ಯೂರೋ ಮುಖ್ಯಸ್ಥರಾದ ಪಾರ್ವತಿ ಮೆನನ್ "ಮಾಧ್ಯಮ ಮತ್ತು ಕಲೆ" ಕುರಿತು, 'ಪ್ರಜಾವಾಣಿ'ಯ ಹಿರಿಯ ಪತ್ರಕರ್ತರಾದ ದಿನೇಶ್ ಅಮೀನ್ ಮಟ್ಟು "ಬದಲಾಗುತ್ತಿರುವ ಮಾಧ್ಯಮದ ಮುಖಗಳು" ಕುರಿತೂ, ವ್ಯಂಗ್ಯಚಿತ್ರಕಾರ ವಸಂತ ಹೊಸಬೆಟ್ಟು "ಮಾಧ್ಯಮದಲ್ಲಿ ವ್ಯಂಗ್ಯಚಿತ್ರದ ಪಾತ್ರ" ಕುರಿತೂ ಮತ್ತು 'ಹಿಂದೂ ಪತ್ರಿಕೆಯ ಕೋಲಾರದ ಹಿರಿಯ ಪತ್ರಕರ್ತರಾದ ವಿಶ್ವ ಕುಂದಾಪುರ "ಮಾಧ್ಯಮ ಹಾಗೂ ಸಾಮಾಜಿಕ ಹೊಣೆಗಾರಿಕೆ" ಕುರಿತೂ ವಿಚಾರಗಳನ್ನು ಮಂಡಿಸಿದರು.

ಮಣಿಪಾಲ ಅಕಾಡೆಮಿ ಆಫ್ ಜನರಲ್ ಎಜುಕೇಶನ್‌ನ ಆಡಳಿತಾಧಿಕಾರಿಗಳಾದ ಪ್ರೊ.ಎಚ್.ಶಾಂತಾರಾಮ್ ವಿಚಾರಸಂಕಿರಣವನ್ನು ಉದ್ಘಾಟಿಸಿದರು. ರಾಜ್ಯ ಸಮುದಾಯದ ಪ್ರಧಾನ ಕಾರ್ಯದರ್ಶಿ ಟಿ.ಸುರೇಂದ್ರರಾವ್ ಸಮಾರೋಪ ಭಾಷಣ ಮಾಡಿದರು. ಕುಂದಾಪುರ ಸಮುದಾಯದ ಅಧ್ಯಕ್ಷ ಕೆ.ಪ್ರಭಾಕರನ್, ಜಿ.ವಿ.ಕಾರಂತ, ಭಂಡಾರ್ಕರ್ಸ್ ಕಾಲೇಜಿನ ಪ್ರಿನ್ಸಿಪಾಲರಾದ ಡಾ.ದೋಮ ಚಂದ್ರಶೇಖರ್, ಪ್ರೊ. ದಿನೇಶ್ ಹೆಗ್ಡೆ ಮೊದಲಾದವರು ಈ ವಿಚಾರಸಂಕಿರಣವನ್ನು ಸಂಘಟಿಸಿದ್ದರು.

★

ಉಡುಪಿಯಲ್ಲಿ ಕಟ್ಟಡ ಕಾರ್ಮಿಕರ ಪ್ರತಿಭಟನೆ :

ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ನಿರ್ಲಕ್ಷ್ಯವನ್ನು ಖಂಡಿಸಿ ಹಾಗೂ ಕಟ್ಟಡ ಕಾರ್ಮಿಕರ ವಿವಿಧ ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ ಉಡುಪಿ ಜಿಲ್ಲಾ ಕಟ್ಟಡ ಮತ್ತು ನಿರ್ಮಾಣ ಕಾರ್ಮಿಕರ ಸಂಘ ಜನವರಿ 31 ರಿಂದ ಮೊದಲುಗೊಂಡು 3 ದಿನಗಳ ಕಾಲ ಉಡುಪಿಯಲ್ಲಿ ಪ್ರತಿಭನೆ ನಡೆಸಿತು.

ಉಡುಪಿ ಸರ್ವಿಸ್ ನಿಲ್ದಾಣದಿಂದ ಮೆರವಣಿಗೆ ಹೊರಟ ನೂರಾರು ಕಟ್ಟಡ ಕಾರ್ಮಿಕರು, ಕೋರ್ಟ್ ರಸ್ತೆಯಲ್ಲಿರುವ ಜಿಲ್ಲಾ ಕಾರ್ಮಿಕ ಅಧಿಕಾರಿ ಕಚೇರಿ ಮುಂದೆ ಮತ ಪ್ರದರ್ಶನ ನಡೆಸಿದರು. ಸರಕಾರದ ವಿರುದ್ಧ ಘೋಷಣೆಗಳನ್ನು ಕೂಗಿ, ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಲಾಯಿತು.

ಪ್ರತಿಭಟನೆಯಲ್ಲಿ ಸಂಘದ ಜಿಲ್ಲಾಧ್ಯಕ್ಷ

ಪುಟ 15 ಕ್ಕೆ



ನರ ಹೊರೆ

ಲಾಲ್‌ಗಢದಲ್ಲಿ ಹರಿದ ಕೆಂಪು ಸಮುದ್ರ

ಸಿಬ್ಬಿಸಿ

ಅಂದು ಡಿಸೆಂಬರ್ 31. ಇಡೀ ದೇಶದ ಮಾಧ್ಯಮಕ್ಕೆ ಸುದ್ದಿಗೆ ಗ್ರಾಸವಾಗಿದ್ದ ಲಾಲ್‌ಗಢದಲ್ಲಿ ಕೆಂಬಾವುಟ ಹಿಡಿದ ಜನಸಾಗರವೇ ಸೇರಿತ್ತು. ತೃಣಮೂಲ ಬೆಂಬಲಿತ ಮಾವೋವಾದಿ ಉಗ್ರರ ಹಿಂಸಾಚಾರಕ್ಕೆ ತುತ್ತಾಗಿದ್ದ ಪ್ರದೇಶ ಇದು. ಜನ ನಕ್ಸಲೀಯರ ಹಿಂಸಾಚಾರಕ್ಕೆ, ತೃಣಮೂಲಿಗಳ ಸರ್ವಾಧಿಕಾರಕ್ಕೆ ರೋಸಿ ಹೋಗಿ ಮತ್ತೆ ಕೆಂಬಾವುಟದತ್ತ ವಿಶ್ವಾಸ ತೋರಿಸಿದ ಸ್ಪಷ್ಟ ಸಂಕೇತ ಇದು.

ಜಂಗಲ್ ಮಹಲ್‌ನ ಬರ್ಬರ ಹತ್ಯಾಕಾಂಡ ಹಾಗೂ ನಿರಂತರ ಹಿಂಸಾಚಾರದಿಂದ ಕಂಗೆಟ್ಟ ಜನ ಪ್ರಜಾಪ್ರಭುತ್ವದ ರಕ್ಷಣೆಗೆ ಕಂಕಣಬದ್ಧರಾಗಿ ಈ ಬೃಹತ್ ರ್‍ಯಾಲಿ ನಡೆಸಿದರು. ಪಶ್ಚಿಮ ಮಿಡ್ನಾಪುರ ಜಿಲ್ಲೆಯಲ್ಲಿ ಕಳೆದ ಎರಡು ವರ್ಷಗಳಲ್ಲಿ ಇದೇ ಮೊದಲ ಬಾರಿ ಇಷ್ಟೊಂದು ಬೃಹತ್ ಜನಸಮೂಹ ಸಿಪಿಎಂ ಕರೆಗೆ ಸ್ಪಂದಿಸಿದ್ದರು.

ಲಾಲ್‌ಗಢ ಮಾತ್ರವಲ್ಲ ಸುತ್ತಮುತ್ತಲಿನ ಗ್ರಾಮಗಳ ಜನರೂ ಈ ರ್‍ಯಾಲಿಯಲ್ಲಿ ಉತ್ಸಾಹದಿಂದ ಪಾಲ್ಗೊಂಡರು. ಇದೇ ಪ್ರದೇಶ ಕಳೆದೆರಡು ವರ್ಷಗಳಿಂದ ಮಾವೋವಾದಿ ಉಗ್ರರ ತೀವ್ರ ಹಿಂಸಾಚಾರಕ್ಕೆ ನಲುಗಿತ್ತು. ಗ್ರಾಮದ 71 ಮಂದಿ ಸಿಪಿಎಂ ಸದಸ್ಯರು, ಸ್ಥಳೀಯ ನಾಯಕರು ಹತ್ಯೆಗೀಡಾಗಿದ್ದರು. ನೂರಾರು ಕುಟುಂಬಗಳು ನಕ್ಸಲೀಯರ ಜೀವಭಯದಿಂದ ಊರನ್ನೇ ಬಿಟ್ಟು ಬೇರೆಡೆ ವಲಸೆ ಹೋಗಬೇಕಾಯಿತು. ಇಡೀ ದೇಶದಲ್ಲೇ ಲಾಲ್‌ಗಢ ತಮ್ಮ ಚಳವಳಿಯ ಮಾದರಿ ಎಂಬುದನ್ನು ಸ್ವತಃ ನಕ್ಸಲೀಯರೇ ಘೋಷಿಸಿಕೊಂಡರು. ಹೀಗೆ ಅವರೇ ಘೋಷಿಸಿಕೊಂಡ ನಕ್ಸಲೀಯರ ಶಕ್ತಿಕೇಂದ್ರದ ಭದ್ರಕೋಟೆ ಕಳೆದ ಕೆಲವು ತಿಂಗಳಿನಿಂದ ಶಿಥಿಲಗೊಳ್ಳಲಾರಂಭಿಸಿತು. ಜನ ನಿಧಾನವಾಗಿ ಹಿಂಸಾಚಾರದ ಕಹಿ ಅನುಭವದಿಂದ ಕಂಗೆಟ್ಟು ಪ್ರಜಾಸತ್ತಾತ್ಮಕ ಚಳವಳಿಯೆಡೆಗೆ ಆಕರ್ಷಿತರಾಗತೊಡಗಿದರು.

ರಾಮಕೃಷ್ಣ ವಿದ್ಯಾಪೀಠದ ಶಾಲಾ ಮೈದಾನದಲ್ಲಿ ಈ ಬೃಹತ್ ರ್‍ಯಾಲಿ ನಡೆಯಿತು. ರ್‍ಯಾಲಿಗೆ ಆಗಮಿಸಿದ ಬೃಹತ್ ಜನಸ್ತೋಮಕ್ಕೆ ವಿಶಾಲ ಮೈದಾನ ಅತ್ಯಂತ ಕಿರಿದು ಎನಿಸಿತು. ಕೆಂಪು ಸೈನದ ರಣಕಹಳೆ, ಬುಡಕಟ್ಟು ಜನರ ವಾದ್ಯದ ಸದ್ದು, ಉತ್ಸಾಹಭರಿತ ಘೋಷಣೆಗಳು ಮತ್ತು ಜಾನಪದ ಕುಣಿತಗಳು ರ್‍ಯಾಲಿಗೆ ಮತ್ತಷ್ಟು ಕಳೆ ನೀಡಿದವು. ಮಾತ್ರವಲ್ಲ, ನಕ್ಸಲೀಯ ಸಶಸ್ತ್ರ ಪಡೆಗಳ ವಿರುದ್ಧ ಎದೆತಟ್ಟಿ ಹೋರಾಡುವ ಕೆಚ್ಚನ್ನು ಮತ್ತಷ್ಟು ಹೆಚ್ಚಿಸಿತು.

ಪಕ್ಷದ ಜಿಲ್ಲಾ ಕಾರ್ಯದರ್ಶಿ ದೀಪಕ್ ಸರ್ಕಾರ್, ಕಿಸಾನ್ ಸಭಾದ ರಾಜ್ಯ ಕಾರ್ಯದರ್ಶಿ ತರುಣ್ ರಾಯ್ ಹಾಗೂ ಎಡರಂಗದ ಸಚಿವ ಸುಶಾಂತ್ ಘೋಷ್ ರ್‍ಯಾಲಿಯನ್ನು ಉದ್ದೇಶಿಸಿ ಮಾತನಾಡಿದರು. ಹಿಂಸಾಚಾರದ ವಿರುದ್ಧ ಸುದೀರ್ಘ ಹೋರಾಟ ನಡೆಸಿ ಬೃಹತ್ ಸಂಖ್ಯೆಯಲ್ಲಿ ಸೇರಿದ ಜನಸ್ತೋಮವನ್ನು ಅವರು ಅಭಿನಂದಿಸಿದರು.

ಕೇಂದ್ರ ಸಚಿವೆ ಹಾಗೂ ತೃಣಮೂಲ ನಾಯಕಿ ಮಮತಾ ಬ್ಯಾನರ್ಜಿ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ ಸಿಪಿಎಂ ನಾಯಕರು, ಮಾವೋವಾದಿಗಳ ದುಷ್ಕೃತ್ಯವನ್ನು ಎಳೆಎಳೆಯಾಗಿ ಬಿಚ್ಚಿಟ್ಟರು. ವಿಧಾನಸಭಾ ಚುನಾವಣೆ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಮತ್ತು ಗೃಹ ಸಚಿವ ಪಿ ಚಿದಂಬರಂ ಪರಿಸ್ಥಿತಿಯ ರಾಜಕೀಯ ಲಾಭ ಪಡೆಯಲು ಯತ್ನಿಸಿರುವುದನ್ನು ರ್‍ಯಾಲಿ ತೀವ್ರವಾಗಿ ಖಂಡಿಸಿತು. ಎಡ ಪ್ರಜಾಸತ್ತಾತ್ಮಕ ಹೋರಾಟದ ಫಲವಾಗಿ ಮೂಡಿಬಂದ ಜನಪರ ಸರ್ಕಾರವನ್ನು ರಕ್ಷಿಸಲು ಹಾಗೂ ಜನಪರ ಚಳವಳಿಯನ್ನು ಮುಂದಕ್ಕೊಯ್ಯಲು ನಿರಂತರ ಬೆಂಬಲ ನೀಡುವಂತೆ ಜನತೆಯನ್ನು ಮನವಿ ಮಾಡಿದರು. ○



ಮಾವೋವಾದಿಗಳ ಕೋಟೆ ಎನ್ನಲಾಗುತ್ತಿದ್ದ ಲಾಲ್‌ಗರ್‌ನಲ್ಲಿ ಸಿಪಿಐ(ಎಂ) ರ್‍ಯಾಲಿಯಲ್ಲಿ ಸೇರಿದ್ದ ಅಪಾರ ಜನಸ್ತೋಮದಲ್ಲಿ ಒಂದು ಭಾಗದ ಚಿತ್ರ

ಜಾರ್ಖಂಡ್ : ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ ಅಭೂತಪೂರ್ವ ಯಶಸ್ಸು

ಅಕ್ಟೋಬರ್ 28ರಿಂದ ಡಿಸೆಂಬರ್ 28ರ ವರೆಗೆ ಜಾರ್ಖಂಡ್ ರಾಜ್ಯದ ಪಂಚಾಯತ್‌ಗಳಿಗೆ ಐದು ಹಂತದ ಚುನಾವಣೆ ನಡೆಯಿತು. 32 ವರ್ಷಗಳ ಸುದೀರ್ಘ ಅವಧಿಯ ಬಳಿಕ ಈ ರಾಜ್ಯದಲ್ಲಿ ನಡೆದ ಪಂಚಾಯತ್ ಚುನಾವಣೆ ಇದು. 53 ವರ್ಷಕ್ಕಿಂತ ಕಿರಿಯವರು ಇದೇ ಮೊದಲ ಬಾರಿಗೆ ಪಂಚಾಯತ್‌ನ ತಮ್ಮ ಜನಪ್ರತಿನಿಧಿಗಳಿಗೆ ಮತದಾನ ನಡೆಸಿದರು.

ಈ ಚುನಾವಣೆಗಳಲ್ಲಿ ಸಿಪಿಐಎಂ 10 ಜಿಲ್ಲಾ ಪರಿಷತ್ ಸ್ಥಾನಗಳನ್ನು ಗೆದ್ದು ಉತ್ತಮ ಸಾಧನೆಯನ್ನು ತೋರಿದೆ. 94 ಬ್ಲಾಕ್ ಪಂಚಾಯತ್ (ಪಂಚಾಯತ್ ಸಮಿತಿ)ಗಳು ಮತ್ತು 97 ಮುಖ್ಯ (ಪಂಚಾಯತ್ ಅಧ್ಯಕ್ಷ) ಸ್ಥಾನಗಳು ಸಿಪಿಐಎಂ ಪಾಲಾಗಿವೆ. ಗ್ರಾಮಾಂತರ ಪ್ರದೇಶದ ಇನ್ನಷ್ಟು ಫಲಿತಾಂಶಗಳಿಗಾಗಿ ಕಾಯಲಾಗುತ್ತಿದೆ.

ಒಂದು ಜಿಲ್ಲಾ ಪಂಚಾಯತ್ ಸ್ಥಾನ ಎಂದರೆ ಸರಾಸರಿ 50 ಸಾವಿರ ಮತಗಳು. ಇಂತಹ 10 ಜಿಲ್ಲಾ ಪಂಚಾಯತ್ ಸ್ಥಾನಗಳಲ್ಲಿ ಸಿಪಿಐಎಂನ ಪ್ರಮುಖ ನಾಯಕರು ಚುನಾಯಿತರಾಗಿದ್ದಾರೆ. ಒಬ್ಬರು ಪಕ್ಷದ ರಾಜ್ಯ ಸಮಿತಿ ಸದಸ್ಯರು, ಇಬ್ಬರು ಜಿಲ್ಲಾ ಸಮಿತಿ ಸದಸ್ಯರು, ಇಬ್ಬರು ಸ್ಥಳೀಯ ಸಮಿತಿ ಸದಸ್ಯರು, ಇಬ್ಬರು ಪಕ್ಷದ ಸದಸ್ಯರು ಹಾಗು ಇತರ ಮೂವರು ಸಾಮೂಹಿಕ ಸಂಘಟನೆಗಳ ಸದಸ್ಯರು. (ಸಿಐಟಿಯು, ಡಿವೈಎಫ್‌ಐ ಮತ್ತು ಜನವಾದಿ ಮಹಿಳಾ ಸಂಘಟನೆಯ ಸದಸ್ಯರು).

10 ಮಂದಿಯ ಸಾಮಾಜಿಕ ಹಿನ್ನೆಲೆ:

ಮೂವರು ಪರಿಶಿಷ್ಟ ಪಂಗಡ, ಒಬ್ಬರು ಪರಿಶಿಷ್ಟ ಜಾತಿ ಹಾಗೂ ಆರು ಮಂದಿ ಹಿಂದುಳಿದ ವರ್ಗದವರು. ಐವರು ಪುರುಷರು ಹಾಗೂ ಐವರು ಮಹಿಳೆಯರು.

ಈ ಚುನಾವಣೆಗಳಲ್ಲಿ ಪಕ್ಷ ಕೆಲವೊಂದು ಮಹತ್ವದ ಸಾಧನೆಯನ್ನು ದಾಖಲಿಸಿದೆ. ಮತದಾನದ ಪ್ರಮಾಣ ಕಳೆದ ವಿಧಾನಸಭಾ ಚುನಾವಣೆಯಲ್ಲಿ ದಾಖಲಾಗಿರುವುದಕ್ಕಿಂತ ಶೇಕಡಾ 50ಕ್ಕಿಂತಲೂ ಹೆಚ್ಚು ಮತದಾನವಾಗಿದೆ. ಮಹಿಳೆಯರಿಗೆ ಅರ್ಧದಷ್ಟು ಸ್ಥಾನ ಮೀಸಲು. ಹಾಗಾಗಿ, ದೊಡ್ಡ ಸಂಖ್ಯೆಯಲ್ಲಿ ಮಹಿಳೆಯರು ಈ ಚುನಾವಣೆಯಲ್ಲಿ ಸ್ಪರ್ಧಿಸಿದ್ದರು.

ಮಾವೋವಾದಿ ಸಂಘಟನೆಗಳು ಚುನಾವಣೆಯನ್ನು ಬಹಿಷ್ಕರಿಸಿದ್ದರು. ನಕ್ಸಲ್ ಭೀತಿಯ ಮಧ್ಯೆಯೂ ಜನರು ಅದರಲ್ಲೂ ಮಹಿಳೆಯರು ದೊಡ್ಡ ಸಂಖ್ಯೆಯಲ್ಲಿ ಉತ್ಸಾಹದಿಂದ ಮತಗಟ್ಟೆಗೆ ಆಗಮಿಸಿ ತಮ್ಮ ಸಂವಿಧಾನಿಕ ಹಕ್ಕನ್ನು ಚಲಾಯಿಸಿದರು.

ಬೆಲೆ ಏರಿಕೆ ವಿರೋಧಿಸಿ ಫೆಬ್ರವರಿ 8 ರಂದು ರಾಜಭವನ ಫೆ. 9 ರಂದು ಸಂಸತ್ ಎದುರು ಪ್ರತಿಭಟನೆ

ಬೆಲೆ ಏರಿಕೆ ವಿರುದ್ಧ ರಾಷ್ಟ್ರವ್ಯಾಪಿ ಆಂದೋಲನ ಸಾರಿರುವ 9 ಎಡ ಹಾಗೂ ಜಾತ್ಯಾತೀತ ಪಕ್ಷಗಳು ಇದೇ ಫೆಬ್ರವರಿ 9 ರಂದು ಸಂಸತ್ ಎದುರು ಬೃಹತ್ ಪ್ರತಿಭಟನೆ ನಡೆಸಲಿದೆ. ಅದರಂತೆ 8 ರಂದು ಬೆಂಗಳೂರಿನಲ್ಲಿ ರಾಜಭವನದ ಎದುರು ಮತ ಪ್ರದರ್ಶನ ಮಾಡಲಿವೆಯೆಂದು ಮಾಜಿ ಪ್ರಧಾನಿ ಜೆಡಿ(ಎಸ್)ನ ರಾಷ್ಟ್ರಾಧ್ಯಕ್ಷರಾದ ಹೆಚ್.ಡಿ.ದೇವೇಗೌಡರು ಹಾಗೂ ಎಡಪಕ್ಷಗಳ ನಾಯಕರು ಮಾಧ್ಯಮಗೋಷ್ಠಿಯಲ್ಲಿ ಘೋಷಿಸಿದರು.

ಜೆಡಿ(ಎಸ್) ಕಛೇರಿಯಲ್ಲಿ ನಡೆದ ಗೋಷ್ಠಿಯಲ್ಲಿ ಬೆಲೆಯೇರಿಕೆ ನಿಯಂತ್ರಿಸುವಲ್ಲಿ ಕೇಂದ್ರ ರಾಜ್ಯ ಸರ್ಕಾರಗಳು ವಿಫಲವಾಗಿವೆಯೆಂದು ದೇವೇಗೌಡರವರು ತಿಳಿಸಿದರು. 9 ರ ದೆಹಲಿ ರ್‍ಯಾಲಿಯಲ್ಲಿ ತಾವೂ ಭಾಗವಹಿಸುವುದಾಗಿಯೂ ಅಂದು ಎಲ್ಲಾ ಪಕ್ಷಗಳು ಸಂಸತ್ತಿನ ಒಳಗೆ ಹಾಗೂ ಹೊರಗೆ ಆಂದೋಲನ ರೂಪಿಸುವ ಇನ್ನಿತರ ಅಂಶಗಳ ಬಗ್ಗೆ ಚರ್ಚಿಸಿ ನಿರ್ಧರಿಸಲಿವೆಯೆಂದರು.

ರಾಷ್ಟ್ರವ್ಯಾಪ್ತಿಯಲ್ಲಿ ಬೆಲೆಯೇರಿಕೆಗೆ ಕಾರಣವಾಗಿರುವ ನಾಲ್ಕು ಅಂಶಗಳನ್ನು ವಿವರಿಸಿದ ಸಿಪಿಐ(ಎಂ)ನ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜಿ.ಎನ್.ನಾಗರಾಜ್‌ರವರು ಬೆಲೆ ನಿಯಂತ್ರಣಕ್ಕೆ ಸೂಚಿಸಿದ ಆರು ಅಂಶಗಳ ಬಗ್ಗೆ ಕೇಂದ್ರ ಸರ್ಕಾರ ಪೂರ್ಣ ನಿರ್ಲಕ್ಷಿಸಿದೆಯೆಂದರು. ರಾಜ್ಯದ ಬಿಜೆಪಿ ಸರ್ಕಾರ ರೇಷನ್ ವಿತರಿಸುವಲ್ಲಿ ಹಾಗೂ ಬೆಲೆ ಏರಿಕೆ ಬಾಧೆಯಿಂದ ಜನರನ್ನು ರಕ್ಷಿಸುವಲ್ಲಿ ಮಾಡಬೇಕಾದ ಕನಿಷ್ಟ ಕೆಲಸಗಳನ್ನು ಮಾಡುತ್ತಿಲ್ಲ ಎಂದು ಟೀಕಿಸಿದರು. ಸಿಪಿಐ ನ ರಾಜ್ಯ ನಾಯಕರಾದ ಹೆಚ್.ವಿ. ಅನಂತಸುಬ್ಬರಾವ್ ರವರು ಪೆಟ್ರೋಲ್, ಡೀಸೆಲ್‌ಗಳಂತಹವುಗಳ ಬೆಲೆ ಏರಿಕೆಯ ಅಡ್ಡ ಪರಿಣಾಮಗಳೂ ಬೆಲೆ ಏರಿಕೆಯ ಕಾರಣಗಳಲ್ಲೊಂದು. ಜನತೆ ಸಂಕಷ್ಟದಲ್ಲಿರುವಾಗ ಕೇಂದ್ರ, ರಾಜ್ಯ ಸರ್ಕಾರಗಳು ಕಾಳಜಿಯನ್ನೇ ತೋರುತ್ತಿಲ್ಲ ಎಂದರು. ಫಾರ್ವರ್ಡ್ ಬ್ಲಾಕ್‌ನ ರಾಜ್ಯ ಅಧ್ಯಕ್ಷರಾದ ಜಿ.ಆರ್. ಶಿವಶಂಕರ್‌ರವರು ಬೆಲೆ ಏರಿಕೆ ವಿರುದ್ಧ ಪ್ರತಿಭಟನೆಗಳು ಮುಂದುವರಿಯಲಿವೆ ಎಂದರು.

ಈ ಗೋಷ್ಠಿಯಲ್ಲಿ ಜೆಡಿ(ಎಸ್) ಮುಖಂಡರಾದ ಮಾಜಿ ಸಂಸದ ನಾರಾಯಣಸ್ವಾಮಿ, ಕೃಷ್ಣಪ್ಪ, ನಾರಾಯಣರಾವ್, ವಕ್ತಾರ ರಮೇಶ್‌ಬಾಬು, ಸಿಪಿಐ(ಎಂ)ನ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಎಸ್.ವೈ.ಗುರುಶಾಂತ್, ಸಿಪಿಐ ನ ಮುಖಂಡರಾದ ಹರಿಗೋವಿಂದ್ ಪಾಲ್ಗೊಂಡಿದ್ದರು. ಇದಕ್ಕೆ ಮುನ್ನ ಜಂಟಿ ಸಭೆಯು ಜರುಗಿತು. ○

ಪಿಡಿ ಸಂಪಾದಕೀಯ

ಅರಬ್ ಜಗತ್ತಿನ ಬೆಳವಣಿಗೆಗಳು ಅಂತಿಮವಾಗಿ ಯಾವ ರೀತಿಯಲ್ಲೇ ಅನಾವರಣಗೊಳ್ಳಲಿ, ಅಲ್ಲಿ ಒಂದು ಅತ್ಯಂತ ಪ್ರಮುಖ ಪರಿವರ್ತನೆ ನಡೆಯುತ್ತಿದೆ ಎಂಬುದಂತೂ ಸ್ಪಷ್ಟ. ಹಲವು ತಲೆಮಾರುಗಳಿಂದ ಅರಬ್ ಜನಗಳು ದೀರ್ಘಕಾಲದ ತ್ಯಾಗ-ಬಲಿದಾನ, ಹೋರಾಟಗಳ ಹೊರತಾಗಿಯೂ ಮತ್ತೆ-ಮತ್ತೆ ವಿಶ್ವಾಸಘಾತಗಳನ್ನು ಅನುಭವಿಸಿದ್ದಾರೆ. ಈ ಬಾರಿಯ ಜನತೆಯ ಉತ್ಕ್ರಾಂತಿಗಳು ಕೂಡ ಕೊನೆಗೆ ಇದೇ ಹಾದಿ ಹಿಡಿಯಬಹುದು ಎಂಬ ಸಹಜ ಭಯ ಇದ್ದರೂ ಕೂಡ ಅಮೆರಿಕಾ-ಪರ ಸರ್ವಾಧಿಕಾರಿ ಆಳ್ವಿಕೆಗಳನ್ನು ಕೂರಿಸುವ ಸಾಮ್ರಾಜ್ಯಶಾಹಿ ಕಣ್ಕೋಟ ಯಾವುದೇ ನೈಜ ಪ್ರಜಾಸತ್ತಾತ್ಮಕ ವಿರೋಧವನ್ನು ಹತ್ತಿಕ್ಕಿ ಮೂಲಭೂತವಾದಿ ಇಸ್ಲಾಮಿಕ್ ಆಳ್ವಿಕೆಗಳಿಗೆ ಹಾದಿ ಮಾಡಿಕೊಟ್ಟಿದೆ ಎಂಬುದರ ನೆನಪೂ ಇದೆ.



ಈಜಿಪ್ಟ್, ಯೆಮನ್... ಮಧ್ಯಪ್ರಾಚ್ಯದಲ್ಲಿ ಜನತೆಯ ಪ್ರಚಂಡ ಬಂಡಾಯ

ಈ ಸಂಚಿಕೆ ಮುದ್ರಣಕ್ಕೆ ಹೋಗುವ ವೇಳೆಗೆ ಕೈರೋ ನಗರದ ತಹ್ರೀರ್(ವಿಮೋಚನಾ) ಚೌಕವನ್ನು 'ಮಿಲಿಯ ಜನಗಳ ಮೆರವಣಿಗೆ' ಆವರಿಸಿದೆ. ಕರ್ಫ್ಯೂವನ್ನು ಭೇದಿಸಿ, ಸಾಲುಗಟ್ಟಿ ನಿಂತಿರುವ ಸೈನಿಕರು ಮತ್ತು ಅವರ ಟ್ಯಾಂಕುಗಳನ್ನು ಲೆಕ್ಕಿಸದೆ ಒಂದು ಜನಸಾಗರವೇ ಹರಿದು ಬಂದು ಹೋಸ್ನಿ ಮುಬಾರಕ್ ಅವರ ಮೂರು ದಶಕಗಳ ಕಾಲದ ಆಡಳಿತ ಕೊನೆಗೊಳ್ಳಬೇಕು, ಪ್ರಜಾಪ್ರಭುತ್ವ ಸುಧಾರಣೆಗಳು ನಡೆಯಬೇಕು ಎಂದು ಆಗ್ರಹ ಪಡಿಸುತ್ತಿದೆ, ಜನತೆಯ ಬದುಕು ಹಸನಾಗುವ ಆಶಾಭಾವನೆ ವ್ಯಕ್ತ ಪಡಿಸುತ್ತಿದೆ.

ಬಿಕ್ಕಟ್ಟನ್ನು ತಣ್ಣಗಾಗಿಸಬಹುದು ಎಂದು ಮುಬಾರಕ್ ಒಂದು ಹೊಸ ಮಂತ್ರಿ ಸಂಪುಟದ ಪ್ರತಿಜ್ಞಾಸ್ವೀಕಾರ ನಡೆಸಿದರು, ಕೆಲವು ಮೇಲುಮೇಲಿನ ಸುಧಾರಣೆಗಳನ್ನು ಮಾಡಲು ಸಿದ್ಧ ಎಂದರು. ಆದರೆ ಸೇನೆಯ ಹೇಳಿಕೆ ಅಧಿಕಾರದಲ್ಲಿ ಮುಂದುವರೆಯುವ ಅವರ ಪ್ರಯತ್ನಗಳಿಗೆ ಒಂದು ದೊಡ್ಡ ಆಘಾತವಾಗಿ ಬಂದಿರಬೇಕು. 'ಸಶಸ್ತ್ರ ಪಡೆಗಳು ತಮ್ಮ ಮಹಾನ್ ಜನತೆಯ ಮೇಲೆ ಬಲಪ್ರಯೋಗ ನಡೆಸುವುದಿಲ್ಲ. ನಿಮ್ಮ ಬೇಡಿಕೆಗಳು ನ್ಯಾಯಬದ್ಧ ಎಂಬುದನ್ನು ಅರಿತಿರುವ ನಿಮ್ಮ ಸಶಸ್ತ್ರ ಪಡೆಗಳು ದೇಶವನ್ನು ಮತ್ತು ನಾಗರಿಕರನ್ನು ರಕ್ಷಿಸುವ ತಮ್ಮ ಜವಾಬ್ದಾರಿಯನ್ನು ವಹಿಸಲು ಕಾತುರವಾಗಿವೆ', ಶಾಂತಿಯುತವಾದ ಅಭಿವ್ಯಕ್ತಿಯ ಸ್ವಾತಂತ್ರ್ಯದ ಭರವಸೆಯನ್ನು ಎಲ್ಲರಿಗೂ ದೃಢಪಡಿಸುತ್ತವೆ' ಎಂದು ಸೇನೆಯ ಹೇಳಿಕೆ ತಿಳಿಸಿದೆ. ಕಾನೂನು ಬಾಹಿರರು ಲೂಟಿ ನಡೆಸಲು, ನಾಗರಿಕರಲ್ಲಿ ಭಯ ಹುಟ್ಟಿಸಲು ಬಿಡುವುದಿಲ್ಲ; ಯಾವುದೇ ಚಿತಾವಣೆಗಾರರು ಅರಾಜಕತೆಯನ್ನು ಸೃಷ್ಟಿಸುವುದನ್ನು ತಡೆಯಲು ಮತ್ತು ಇದನ್ನು ಬಳಸಿ ಆಳುವ ಮಂದಿ ಜನಗಳ ಈ ಬಂಡಾಯಕ್ಕೆ ಏನೂ ಔಚಿತ್ಯವಿಲ್ಲ ಎಂದು ಬಿಂಬಿಸುವುದನ್ನು ಈ ಮೂಲಕ ತಡೆಯಲು ಸೇನಾಪಡೆಗಳು ಪ್ರಯತ್ನಿಸುತ್ತವೆ ಎಂದು ಆ ಹೇಳಿಕೆ ಎಚ್ಚರಿಸಿದೆ. ಈ ಬೆಳವಣಿಗೆಗಳು ಅಂತಿಮವಾಗಿ ಯಾವ ರೀತಿಯಲ್ಲೇ ಅನಾವರಣಗೊಳ್ಳಲಿ, ಒಂದು ಅತ್ಯಂತ ಪ್ರಮುಖ ಪರಿವರ್ತನೆ ನಡೆಯುತ್ತಿದೆ ಎಂಬುದಂತೂ ಸ್ಪಷ್ಟ.



ಇದು ಜನತೆಯ ಪ್ರತಿಭಟನಾ ಮಹಾಪೂರ

'ಜಾಜಿ ಮಲ್ಲಿಗೆ ಕ್ರಾಂತಿ'ಯ ಪ್ರಭಾವ

ಇಜಿಪ್ಟಿನ ಈ ಮಹತ್ವಪೂರ್ಣ ಬೆಳವಣಿಗೆಗಳು ಬಂದಿರುವುದು ಟ್ಯುನೀಸಿಯಾದ ಜನತಾ ಉತ್ಕ್ರಾಂತಿಯ ಹಿನ್ನೆಲೆಯಲ್ಲಿ. ಅಲ್ಲಿ 23 ವರ್ಷಗಳ ಕಾಲ ಒಂದು ಸರ್ವಾಧಿಕಾರಶಾಹಿ ಆಳ್ವಿಕೆಯ ಮುಖ್ಯಸ್ಥನಾಗಿ ಅಧಿಕಾರದಲ್ಲಿದ್ದ ಅಧ್ಯಕ್ಷ ಝೈನ್ ಅಬಿದಿನ್ ಬೆನ್ ಅಲಿಯನ್ನು ಪದಚ್ಯುತಗೊಳಿಸಲಾಗಿದೆ. ಮತಪ್ರದರ್ಶನಗಳು. ದಂಗೆಗಳು ಆರಂಭವಾದದ್ದು ನಿರುದ್ಯೋಗ, ಆಹಾರ ಹಣದುಬ್ಬರ, ಭ್ರಷ್ಟಾಚಾರ, ಪ್ರಜಾಪ್ರಭುತ್ವ ಹಕ್ಕುಗಳ ದಮನ ಮತ್ತು ಬಡತನದ ಪ್ರಶ್ನೆಗಳ ಮೇಲೆ. ಈ 'ಜಾಜಿಮಲ್ಲಿಗೆ ಕ್ರಾಂತಿ'ಯ ಪ್ರಭಾವ ಮಧ್ಯಪ್ರಾಚ್ಯದ ದೇಶಗಳಾದ್ಯಂತ ಸಾಂಕ್ರಾಮಿಕವಾಗಿ ಹಬ್ಬಿದೆ. 'ವಿಕಿಲೀಕ್ಸ್' ಹೊರಗೆಡಹಿದ ಸಂಗತಿಗಳು ಆಳುವ ಗಣ್ಯರ ವೈಭವಯುತ ಜೀವನ ಮತ್ತು ತದ್ವಿರುದ್ಧವಾಗಿ ಬಹುಪಾಲು ಜನಗಳ ನರಳಾಟವನ್ನು ತೋರಿಸಿಕೊಟ್ಟವು. ಇದರಿಂದ ಒಬ್ಬ ಯುವಕ ಬೆಂಕಿ ಹಚ್ಚಿಕೊಂಡು ಮಾಡಿದ ಆತ್ಮಾಹುತಿ ಈ ಬಂಡಾಯಕ್ಕೆ ಪ್ರಚೋದನೆಯಾಯಿತು.

ಯೆಮೆನ್‌ನಲ್ಲಿ ಸಾವಿರಾರು ವಿದ್ಯಾರ್ಥಿಗಳು ಮತ್ತು ವಿರೋಧಿ ಕಾರ್ಯಕರ್ತರು ಅಲಿ ಅಬ್ದುಲ್ಲ ಸಲೇಹ್‌ನ ಸರ್ವಾಧಿಕಾರಶಾಹಿ ಆಳ್ವಿಕೆಯನ್ನು ಕೊನೆಗೊಳಿಸಬೇಕೆಂದು ಒಂದು ನಿರಂತರ ಪ್ರತಿಭಟನೆಯ ಕಿಡಿ ಹಚ್ಚಿದರು. ಸಲೇಹ್ 1978ರಿಂದ ಉತ್ತರ ಯೆಮೆನಿನ ಅಧ್ಯಕ್ಷನಾಗಿದ್ದ, 1990ರಿಂದ ಏಕೀಕೃತ ಯೆಮೆನ್‌ನ ಅಧ್ಯಕ್ಷನಾದ; ನಂತರ 1999ರಲ್ಲಿ ಪುನರೇಕೀಕರಣಗೊಂಡ ಯೆಮೆನ್‌ನ ಅಧ್ಯಕ್ಷನಾದ.

ಜೋರ್ಡಾನ್‌ನಲ್ಲಿ ಕಾರ್ಯಾಂಗದ ಅಧಿಕಾರ ಇರುವುದು ರಾಜನ ಕೈಗಳಲ್ಲಿ. ತೊಂಭತ್ತು ವರ್ಷಗಳಿಗಿಂತಲೂ ಹೆಚ್ಚು ಕಾಲದಿಂದ ಹಾಷಿಮೈಟ್ ರಾಜವಂಶ ಆಳುತ್ತಿದೆ. ಜನವರಿ 2011ರಲ್ಲಿ 'ರೊಟ್ಟಿ ಮತ್ತು ಸ್ವಾತಂತ್ರ್ಯ' ಎಂಬ ಘೋಷಣೆಯಡಿ ಜನಗಳ ಪ್ರತಿಭಟನೆ ಹೆಚ್ಚುತ್ತಿರುವ ಅಸಮಾನತೆಗಳು ಮತ್ತು ಹೆಚ್ಚುತ್ತಿರುವ ಸ್ವಜನ ಪಕ್ಷಪಾತಗಳನ್ನು ಎತ್ತಿ ತೋರಿಸಿದವು. ಈ ಸಂಚಿಕೆ ಮುದ್ರಣಕ್ಕೆ ಹೋಗುವ ವೇಳೆಗೆ, ರಾಜ, ಪರಿಸ್ಥಿತಿಯನ್ನು ಉಳಿಸಿಕೊಳ್ಳಲು ಮತ್ತು ಜನತೆಯ ಅಸಂತೃಪ್ತಿಯನ್ನು ತಡೆಯಲು ಸರಕಾರವನ್ನು ವಜಾ ಮಾಡಿ ಹೊಸದೊಂದನ್ನು ಪುನರ್ರಚಿಸಿದ್ದಾನೆ.

ಇಂತಹುದೇ ಪ್ರತಿಭಟನೆಗಳ ವರದಿಗಳು ಮೊರಾಕ್ಕೊ, ಅಲ್ಜೀರಿಯ ಮುಂತಾದ ಇತರ ಮಧ್ಯಪ್ರಾಚ್ಯದ ದೇಶಗಳಿಂದಲೂ ಬರುತ್ತಿವೆ. ಅರಬ್ ಟೆಲಿವಿಶನ್ ವಾಹಿನಿ ಅಲ್ ಜರಿ?ೀರ ಹಲವು ನಿಷೇಧಗಳನ್ನು ಎದುರಿಸಿಕೊಂಡು, ತನ್ನ ವರದಿಗಾರರು ಬಂಧನಗಳನ್ನು ಎದುರಿಸಬೇಕಾಗಿ ಬಂದರೂ ಜಗ್ಗದೆ ಈ ಪ್ರತಿಭಟನೆಗಳ ಮಂತ್ರಮುಗ್ಧಗೊಳಿಸುವ ನೇರಪ್ರಸಾರವನ್ನು ಒದಗಿಸಿದೆ.

ಐಎಂಎಫ್ ದಾರಿ ತಂದ ಪಿಡುಗು

ದಶಕಗಳ ಕಾಲ ಸರ್ವಾಧಿಕಾರಶಾಹಿ ಆಳ್ವಿಕೆಯ ಅಡಿಯಲ್ಲಿ ನರಳಿದ್ದಲ್ಲದೆ, ಜಾಗತಿಕ ಆರ್ಥಿಕ ಬಿಕ್ಕಟ್ಟಿನ ಕಳೆದೆರಡು ವರ್ಷಗಳಲ್ಲಿ ಈ ದೇಶಗಳ ಜನರು ವಿಪರೀತ ಸಂಕಟಗಳನ್ನು ಅನುಭವಿಸಬೇಕಾಗಿ ಬಂದಿದೆ. ಐಎಂಎಫ್ ಮತ್ತು ವಿಶ್ವ ಬ್ಯಾಂಕಿಗೆ ಇಜಿಪ್ಟ್ ಮತ್ತು ಜೋರ್ಡಾನ್ ಆರ್ಥಿಕ ಸುಧಾರಣೆಗಳ ಅಚ್ಚುಮೆಚ್ಚಿನ ಮಾದರಿಗಳು. ಅವುಗಳ ಆರ್ಥಿಕಗಳು ಜಾಗತಿಕ ಆರ್ಥಿಕದೊಂದಿಗೆ ಆಳವಾಗಿ ಬೆಸೆದುಕೊಂಡಿವೆ. ಜಾಗತಿಕ ಹಣಕಾಸು ಬಿಕ್ಕಟ್ಟು ಇವುಗಳ ಮೇಲೆ ವಿನಾಶಕಾರಿ ಪರಿಣಾಮ ಬೀರಿವೆ. ಏಕೆಂದರೆ ಇಜಿಪ್ಟಿನಲ್ಲಿ 30 ಲಕ್ಷ ಮಂದಿ ಮತ್ತು ಜೋರ್ಡಾನಿನಲ್ಲಿ 5ಲಕ್ಷ ಮಂದಿ ಈ ವಲಯದಲ್ಲಿ ನೇರವಾಗಿ ದುಡಿಯುತ್ತಿದ್ದಾರೆ. ಸುಯೇಝ್ ಕಾಲುವೆಯಿಂದ, ಪ್ರವಾಸೋದ್ಯಮದಿಂದ ಮತ್ತು ರಫ್ತುಗಳಿಂದ ಇಜಿಪ್ಟ್ ಗಳಿಸುತ್ತಿದ್ದ ಆದಾಯಕ್ಕೆ ಆಳವಾದ ಹೊಡೆತ ಬಿದ್ದಿದೆ. ಇದರಿಂದಾಗಿ ಒಟ್ಟು ಆಂತರಿಕ ಉತ್ಪಾದನೆ (ಜಿಡಿಪಿ)ಯ ಬೆಳವಣಿಗೆಯಲ್ಲಿ ತೀವ್ರ ಇಳಿಕೆಯಾಗಿದೆ. ಯುವಜನರಲ್ಲಿ ನಿರುದ್ಯೋಗ 2005ರಲ್ಲಿಯೇ 34 ಶೇಕಡಾ ಇತ್ತು. ಅದು ಇನ್ನಷ್ಟು ತೀವ್ರವಾಗಿ ಹೆಚ್ಚಿತು. ಜೋರ್ಡಾನಿನ ಆರ್ಥಿಕ ಬೆಳವಣಿಗೆ 2008 ಮತ್ತು 2009ರ ನಡುವೆ 7.9ಶೇ.ದಿಂದ 2.8ಶೇ.ಕ್ಕೆ ಇಳಿಯಿತು. ಇವುಗಳ ಪರಿಣಾಮವಾಗಿ ಎರಗಿದ ಸಂಕಟಗಳೇ ಜನಗಳ ಈ ಪ್ರತಿಭಟನೆಗಳ ತಕ್ಷಣದ ಹಿನ್ನೆಲೆ.

ಅಮೆರಿಕ ಸಂಯುಕ್ತ ಸಂಸ್ಥಾನ ಶೀತಲ ಯುದ್ಧದ ನಂತರ ನಿರ್ಮಿಸ ಬಯಸಿದ 'ಹೊಸ ವಿಶ್ವ ವ್ಯವಸ್ಥೆ' ಕುಸಿಯುತ್ತಿದೆ ಎಂಬುದು ಸ್ಪಷ್ಟ. ಅದಕ್ಕಿಂತ ಮುಖ್ಯವಾಗಿ, ಜಾಗತಿಕ ಘಟನೆಗಳನ್ನು ನಿರ್ಧರಿಸುವ ಅಮೆರಿಕಾದ ಸಾಮರ್ಥ್ಯ ಸಾಕಷ್ಟು ಪ್ರಮಾಣದಲ್ಲಿ ದುರ್ಬಲಗೊಂಡಿದೆ. ಸಾಮ್ರಾಜ್ಯಶಾಹಿ, ಈ ಹಿಂದೆ, ತನ್ನ ಜಾಗತಿಕ ಸಾಮರಿಕ ಹಿತಗಳನ್ನು ಕಾಪಾಡಿಕೊಳ್ಳಲು ಹಲವಾರು ದೇಶಗಳಲ್ಲಿ ಅನೀತಿಯುತವಾಗಿ ಹಸ್ತಕ್ಷೇಪ ಮಾಡಿದೆ. ಇರಾನ್ ತೈಲವನ್ನು ರಾಷ್ಟ್ರೀಕರಿಸಿದಾಗ (1953) ಮೊಸಾದೆಘ್ ಸರಕಾರವನ್ನು ಸಿಐಎ ನೇತೃತ್ವದ ಕ್ಷಿಪ್ರಕ್ರಾಂತಿಯಲ್ಲಿ ಉರುಳಿಸಿದ್ದು, ಇಜಿಪ್ಟಿನಲ್ಲಿ ನಾಸೆರ್ ಸುಯೇಜ್ ಕಾಲುವೆಯನ್ನು ರಾಷ್ಟ್ರೀಕರಿಸಿದಾಗ ಆ ದೇಶದಲ್ಲಿ ಆಂಗ್ಲೋ-ಫ್ರೆಂಚ್ ಅತಿಕ್ರಮಣ (1956) ಮತ್ತು ಅಮೆರಿಕಾ-ಪರ ಆಳ್ವಿಕೆಗಳ ಪ್ರತಿಷ್ಠಾಪನೆ ಇವೆಲ್ಲ ಸಾಮ್ರಾಜ್ಯಶಾಹಿಗೆ ತನ್ನ ಮೂರು ಮೂಲಭೂತ ಕಾಳಜಿಗಳನ್ನು ಕಾಯ್ದುಕೊಳ್ಳಲು ಅವಕಾಶ ಕಲ್ಪಿಸಿ ಕೊಟ್ಟವು. ಆ ಕಾಳಜಿಗಳೆಂದರೆ, ತೈಲ ಸಂಪನ್ಮೂಲಗಳ ಮೇಲೆ ಹತೋಟಿ ಹೊಂದಿರುವುದು; ಪಾಶ್ಚಿಮಾತ್ಯ ಸರಕು ಸಾಗಾಣಿಕೆಗೆ ಮತ್ತು ಅಮೆರಿಕನ್ ಮಿಲಿಟರಿ ಚಲನ-ವಲನಗಳಿಗೆ ನಿರ್ಣಾಯಕವಾದ ಸುಯೇಜ್ ಕಾಲುವೆಯ ಮೇಲೆ ಹತೋಟಿ; ಮತ್ತು ಈ



ಹೊಸ್ನಿ ಮುಬಾರಕ್ ತೊಲಗಲಿ

ಪ್ರದೇಶದಲ್ಲಿ ಇಸ್ರೇಲಿನ ಮಿಲಿಟರಿ ಪ್ರಾಬಲ್ಯವನ್ನು ಬೆಸೆಯುವುದು. ಈ ಕಾರ್ಯತಂತ್ರ ಯಶಸ್ವಿಯಾಗಲು ಇಜಿಪ್ಟ್ ಕೀಲುಮೊಳೆಯಾಗಿ ಕೆಲಸ ಮಾಡಬೇಕಿತ್ತು. ಇದಕ್ಕೆ ಪ್ರತಿಯಾಗಿ, ಇಜಿಪ್ಟ್ 1978ರ ಕ್ಯಾಂಪ್ ಡೇವಿಡ್ ಒಪ್ಪಂದವಾದಂದಿನಿಂದ 35 ಬಿಲಿಯ(3500ಕೋಟಿ) ಡಾಲರ್ ಮಿಲಿಟರಿ ನೆರವು ಪಡೆಯಿತು. ಇದು ಇಸ್ರೇಲಿನ ನಂತರ ಯಾವುದೇ ದೇಶ ಅಮೆರಿಕಾದಿಂದ ಪಡೆದ ಅತಿ ದೊಡ್ಡ ನೆರವು. 'ಬೇರೆ' ನೆರವಿನ ಹೆಸರಿನಲ್ಲೂ ಅದಕ್ಕೆ ಸರಾಸರಿ ಪ್ರತಿವರ್ಷ 200 ಕೋಟಿ ರೂ. ಸಿಗುತ್ತಿತ್ತು.

ಎಂದಿನ ಅಮೆರಿಕನ್ ತಂತ್ರ

ಆದ್ದರಿಂದ, ತಾನು ಮಾನವ ಹಕ್ಕುಗಳ, ಪ್ರಜಾಪ್ರಭುತ್ವದ ಮತ್ತು ಮಾನವೀಯ ಮೌಲ್ಯಗಳ ರಕ್ಷಕ ಎಂದು ಸದಾ ತನ್ನ ಬೆನ್ನು ತಾನೇ ತಟ್ಟಿಕೊಳ್ಳುವ ಅಮೆರಿಕಾ ಬಹಳ ಜಾಗರೂಕತೆಯಿಂದ ಈ ಬೆಳವಣಿಗೆಗಳಿಗೆ ಪ್ರತಿಕ್ರಿಯಿಸುತ್ತಿದ್ದರೆ ಅದರಲ್ಲಿ ಆಶ್ಚರ್ಯವೇನಿಲ್ಲ. ಟ್ಯುನೀಸಿಯ, ಯೆಮೆನ್ ಮತ್ತು ಜೋರ್ಡಾನ್ -ಇವೆಲ್ಲವೂ ಅಮೆರಿಕಾ-ಪರ ಆಳ್ವಿಕೆಗಳು. ಆದರೆ ಅವು ಇಜಿಪ್ಟಿಗಿಂತ ಭಿನ್ನ. ಅಧ್ಯಕ್ಷ ಒಬಾಮ 'ಸದ್ಯಕ್ಕಾದರೂ', ಮುಬಾರಕ್ ರಾಜೀನಾಮೆ ಕೇಳದಿದ್ದರೂ ಅದಕ್ಕೆ ಬಹಳ ಹತ್ತಿರ ಬಂದಿದ್ದಾರೆ ಎಂದು ಜನವರಿ 30ರ ನ್ಯೂಯಾರ್ಕ್ ಟೈಮ್ಸ್ ಹೇಳಿದೆ. ಆದರೆ ಈಗ ಅವರ ಕಾರ್ಯವೈಖರಿ ಜಗತ್ತಿಗೆ ಚಿರಪರಿಚಿತವಾಗಿದೆ; ಅವರು ಇಜಿಪ್ಟಿಯನ್ನರ ಮತ್ತು ಇತರ ಮಧ್ಯಪ್ರಾಚ್ಯ ದೇಶಗಳ ಜನಗಳ 'ಸಾರ್ವತ್ರಿಕ ಹಕ್ಕುಗಳು' ಇತ್ಯಾದಿಗಳ ಬಗ್ಗೆ ಮಾತಾಡುತ್ತಿದ್ದಾರೆ, ಆದರೆ ಅವು ದೊರೆಯುವಂತೆ ಒತ್ತಡವನ್ನಾಗಲೀ, ಪ್ರಭಾವವನ್ನಾಗಲೀ ಬೀರುತ್ತಿಲ್ಲ.


ಅಮೆರಿಕಾ, ಇಜಿಪ್ಟಿನಲ್ಲಿ ಆಳ್ವಿಕೆ ಬದಲಾಗಬೇಕೆಂದು ಬಹಿರಂಗವಾಗಿಯೇನೂ ಕೇಳದಿದ್ದರೂ, ಹಲವು ಪರ್ಯಾಯ ವಿಧಾನಗಳ ಮೂಲಕ ತನ್ನ ಕಾರ್ಯತಂತ್ರದ ಹತೋಟಿಯನ್ನು ಉಳಿಸಿಕೊಳ್ಳಲು ಅದು ಸಿದ್ಧತೆ ನಡೆಸಿದೆ. ಮುಬಾರಕ್ ಹೋದರೆ 'ಮುಸ್ಲಿಂ ಬ್ರದರ್‌ಹುಡ್' ಎಂಬ ಇಸ್ಲಾಮಿಕ್ ಸಂಘಟನೆ ಅಧಿಕಾರ ವಹಿಸಿಕೊಳ್ಳುತ್ತದೆ ಎಂದು ಬೆದರು ಬೊಂಬೆ ತೋರಿಸುವ ಅದರ ಯತ್ನ ಫಲ ಕೊಟ್ಟಿಲ್ಲ ಎಂಬುದೀಗ ಸ್ಪಷ್ಟ. ಬಹಳ ಕಾಲದಿಂದ ಗುಪ್ತಚರ ಇಲಾಖೆಯ ಮುಖ್ಯಸ್ಥನಾಗಿ ಕೆಲಸ ಮಾಡಿರುವ ಒಮರ್ ಸುಲೇಮಾನ್‌ರನ್ನು ಉಪಾಧ್ಯಕ್ಷರನ್ನಾಗಿ ನೇಮಿಸಿ ಸೇನೆಯನ್ನು ತಟಸ್ಥಗೊಳಿಸುವ ತೋರಿಕೆಯ ಕೆಲಸವಾಗಲೀ, ಮುಂದಿನ ಚುನಾವಣೆಗಳಲ್ಲಿ ತಾನು ಸ್ಪರ್ಧಿಸುವುದಿಲ್ಲ ಎಂಬ ಪ್ರಕಟಣೆಯಾಗಲೀ ಜನರಿಗೆ ಅರ್ಥಪೂರ್ಣ ಸುಧಾರಣೆಯಾಗಿ ಕಾಣುತ್ತಿಲ್ಲ. ಈಗ ಎಲ್ಲ ಕಣ್ಣುಗಳು ಅಂತರ್ರಾಷ್ಟ್ರೀಯ ಅಣುಶಕ್ತಿ ಸಂಸ್ಥೆ(ಐಎಇಎ)ಯ ಮಾಜಿ ಮುಖ್ಯಸ್ಥ ಎಲ್ ಬರದೈ ಮೇಲೆ ತಿರುಗಿದೆ. ವಿದೇಶಗಳಲ್ಲಿ ಬಹಳ ಕಾಲ ವಿವಿಧ ಹುದ್ದೆಗಳಲ್ಲಿ ಕೆಲಸ ಮಾಡಿದ ಇವರು ಈಗ ಹಿಂದಿರುಗಿ ಬಂದು 'ಬದಲಾವಣೆಗೆ ರಾಷ್ಟ್ರೀಯ ಸಂಘ' ಎಂದು ಅವರೇ ಹೆಸರಿಸಿರುವ ಸಂಘಟನೆಯ ಮುಖ್ಯಸ್ಥರಾಗಿದ್ದಾರೆ. ಅಮೆರಿಕಾ ಅವರನ್ನು ಐಎಇಎ ಮುಖ್ಯಸ್ಥರಾಗಿದ್ದಾಗ ಇರಾಕಿನ ಅತಿಕ್ರಮಣಕ್ಕೆ ದಾರಿ ಮಾಡಿಕೊಟ್ಟ ತನ್ನ ಮಿಲಿಟರಿ ಕಾರ್ಯಾಚರಣೆಗಳಿಗೆ ಬಳಸಿಕೊಂಡಂತೆ ಈಗಲೂ ಬಳಸಿಕೊಳ್ಳಲು ಪ್ರಯತ್ನಿಸುತ್ತದೆ ಎಂದು ಬೇರೆ ಹೇಳಬೇಕಾಗಿಲ್ಲ.

ಪುಟ 13 ಕ್ಕೆ

ಹಾರುತಾ ದೂರ ದೂರ, ಮೇಲೇರುತಿವೆ ಆಹಾರ

ಆಹಾರದ ಬೆಲೆಯೇರಿಕೆಯ ಮೂಲಗಳು ಮತ್ತು ನಿಯಂತ್ರಣ ಮಾರ್ಗಗಳು

■ ಜಯ



ಆಹಾರ ಧಾನ್ಯಗಳು ಮತ್ತು ತರಕಾರಿಗಳ ಬೆಲೆಗಳು ಇಡೀ ದೇಶವನ್ನೆಲ್ಲಾ ಕಾಡ್ಗಿಚ್ಚಿನಂತೆ ಆವರಿಸಿ ಸುಡುತ್ತಿದ್ದರೆ, ಪ್ರಧಾನ ಮಂತ್ರಿ ಮನ್‌ಮೋಹನ್ ಸಿಂಗ್ ನೇತೃತ್ವದ ಯುಪಿಎ ಸರ್ಕಾರ ಕಾಟಾಚಾರಕ್ಕೆ ಮಂತ್ರಿಗಳನ್ನು ಒಳಗೊಂಡ ಸಭೆಗಳ ನಂತರ ಸಭೆ ನಡೆಸಿ ಕೈತೊಳೆದುಕೊಳ್ಳುತ್ತಿದೆ. ದಾವೋಸ್‌ನಲ್ಲಿ ಜರುಗಿದ ವಿಶ್ವ ಆರ್ಥಿಕ ವೇದಿಕೆಯಲ್ಲಿ ನಮ್ಮ ಯೋಜನಾ ಆಯೋಗದ ಉಪಾಧ್ಯಕ್ಷರಾದ ಮೊಂಟೆಕ್ ಸಿಂಗ್ ಅಹ್ಲುವಾಲಿಯಾ ಅವರು ಭಾರತೀಯ ಜನತೆಯು ಶ್ರೀಮಂತರಾಗುತ್ತಿರುವುದರಿಂದ ಅವರು ಹೆಚ್ಚಿನ ಆಹಾರ ತಿನ್ನುತ್ತಿದ್ದಾರೆ, ಹಾಗಾಗಿ ಆಹಾರ ಧಾನ್ಯಗಳ ಬೆಲೆ ಜಾಸ್ತಿಯಾಗುತ್ತಿದೆಯೆಂದು ಅಮೇರಿಕಾ ಏಜೆಂಟನಂತೆ ಮಾತನಾಡಿದ್ದಾರೆ. ಏಕೆಂದರೆ ಅಂದಿನ ಅಮೇರಿಕಾದ ಅಧ್ಯಕ್ಷ ಬುಷ್ ಕೂಡ ಇದೇ ಮಾತನಾಡಿದ್ದರು. ಅಹ್ಲುವಾಲಿಯಾ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಬಹುರಾಷ್ಟ್ರೀಯ ಕಂಪನಿಗಳಾದ ವಾಲ್-ಮಾರ್ಟ್ ಮತ್ತು ಟೆಸ್ಕೋ ಕಂಪನಿಗಳನ್ನು ಭಾರತದ ಚಿಲ್ಲರೆ ಮಾರಾಟ ಕ್ಷೇತ್ರಕ್ಕೆ ಆಹ್ವಾನಿಸಿದರೆ ಆಹಾರ ಧಾನ್ಯಗಳ ಬೆಲೆ ತಗ್ಗಬಹುದು ಎಂದು ಹೇಳಿ ತಾನೊಬ್ಬ ಬಹುರಾಷ್ಟ್ರೀಯ ಕಂಪನಿಗಳ ಏಜೆಂಟ್ ಎಂಬುದನ್ನು ಸಾಬೀತುಪಡಿಸಿದ್ದಾರೆ.

ಸಗಟು ಬೆಲೆ ಸೂಚ್ಯಂಕದ ಹಣದುಬ್ಬರ

(ಮೂಲ: ಆರ್ಥಿಕ ಸಲಹೆಗಾರರ ಕಛೇರಿ, ವಾಣಿಜ್ಯ, ಕೈಗಾರಿಕೆ ಸಚಿವಾಲಯ, ಭಾರತ ಸರ್ಕಾರ)

	2006-07	2007-08	2008-09	2009-10
ಎಲ್ಲ ಸರಕುಗಳು	6.51	4.82	8.03	3.57
ಆಹಾರ	7.99	5.97	9.07	14.52

ಬೆಲೆಯೇರಿಕೆಯ ಮಟ್ಟ:

ಹಾಗಿದ್ದಲ್ಲಿ ಬೆಲೆಯೇರಿಕೆಗೆ ಕಾರಣವಾಗಿರುವ ನೈಜ ಅಂಶಗಳೇನು ಎಂಬುದನ್ನು ತಿಳಿಯೋಣ. ಕಳೆದ ಮೂರು ವರ್ಷಗಳಿಂದ ಸಗಟು ಬೆಲೆ ಸೂಚ್ಯಂಕವು ಸತತವಾಗಿ ಏರುತ್ತಲೇ ಇದೆ.

ನರಳುತ್ತಿರುವ ಹಸಿವಿನ ಭಾರತ:

ಬೆಳೆಯುತ್ತಿರುವ ಜನಸಂಖ್ಯೆಗೆ ಅನುಗುಣವಾಗಿ ಆಹಾರ ಉತ್ಪಾದನೆಯು ಸಹ ಬೆಳೆಯಬೇಕು. ಆದರೆ, ಭಾರತದಲ್ಲಿ ಆಹಾರ ಉತ್ಪಾದನೆ ಮತ್ತು ಅದು ಜನರಿಗೆ ದೊರೆಯುವ ಪ್ರಮಾಣವು ಹೆಚ್ಚಳವಾಗಿಲ್ಲ. 2008-09ರಲ್ಲಿ ಭಾರತದಲ್ಲಿ ವಾರ್ಷಿಕ ತಲಾ ಆಹಾರ ಧಾನ್ಯ ಲಭ್ಯತೆಯು ಕೇವಲ 165 ಕೆಜಿ ಇದ್ದು, 2000-01ರಲ್ಲಿಯೂ ಇದೇ ಮಟ್ಟದಲ್ಲಿತ್ತು. ಆದರೆ ಚೀನಾದಲ್ಲಿ 2008-09ರಲ್ಲಿ ಆಹಾರ ಧಾನ್ಯ ಲಭ್ಯತೆಯು 290ಕೆಜಿ ಇದ್ದರೆ, ಅಮೇರಿಕಾದಲ್ಲಿ 1000 ಕೆಜಿಗಿಂತಲೂ ಹೆಚ್ಚಿತ್ತು. ನಮ್ಮ ದೇಶದ ಜಿಡಿಪಿ ಬೆಳೆಯುತ್ತಿದ್ದರೂ 2009-10ರಲ್ಲಿ ತಲಾ ಆಹಾರ ಧಾನ್ಯ ಲಭ್ಯತೆಯು 161ಕೆಜಿಗೆ ಕುಸಿಯಿತು. ಹೀಗೆ ಜನತೆಯ ಆಹಾರ ಬಳಕೆಯು ಹೆಚ್ಚಾಗಿಲ್ಲವೆಂಬುದನ್ನು ಅಂಕಿಅಂಶಗಳು ಸ್ಪಷ್ಟವಾಗಿ ತಿಳಿಸುತ್ತವೆ.

ವಿಶ್ವದಲ್ಲಿ ಹಸಿವಿನಿಂದ ನರಳುತ್ತಿರುವವರ ಸಂಖ್ಯೆ 92.5 ಕೋಟಿಯಿದೆಯೆಂದು ವಿಶ್ವ ಸಂಸ್ಥೆಯ ಆಹಾರ ಕಾರ್ಯಕ್ರಮವು ತಿಳಿಸಿದೆ. ಭಾರತದ 3 ವರ್ಷದೊಳಗಿನ ಅರ್ಧಕ್ಕೂ ಹೆಚ್ಚು ಮಕ್ಕಳು ಹಸಿವಿನಿಂದ ನರಳುತ್ತಿದ್ದಾರೆ ಮತ್ತು ಅರ್ಧದಷ್ಟು ಗರ್ಭಿಣಿಯರು ರಕ್ತಹೀನತೆ ಅನುಭವಿಸುತ್ತಿದ್ದಾರೆ ಎಂದು ರಾಷ್ಟ್ರೀಯ ಕೌಟುಂಬಿಕ ಆರೋಗ್ಯ ಸಮೀಕ್ಷೆ ತಿಳಿಸಿದೆ.

ಬೆಲೆಯೇರಿಕೆಗೆ ಪ್ರಮುಖ ಕಾರಣಗಳು:

ಇಂದಿನ ಬೆಲೆಯೇರಿಕೆಗೆ ಪ್ರಮುಖ ಕಾರಣಗಳೆಂದರೆ ಸಟ್ಟಾಕೋರರು ಮತ್ತು ದೊಡ್ಡ ಕಂಪನಿಗಳು ದೊಡ್ಡ ಪ್ರಮಾಣದಲ್ಲಿ ಈರುಳ್ಳಿ, ಸಕ್ಕರೆ ಮತ್ತು ಆಹಾರ ಧಾನ್ಯಗಳನ್ನು ದೊಡ್ಡ ಪ್ರಮಾಣದಲ್ಲಿ



ಸಂಗ್ರಹಿಸಿಟ್ಟುಕೊಳ್ಳುತ್ತಿರುವುದು. ಇವರ ಮೇಲೆ ಸರ್ಕಾರ ಯಾವುದೇ ಕ್ರಮ ಕೈಗೊಳ್ಳದ ಕಾರಣ, ಇವರು ಮತ್ತಷ್ಟು ಉತ್ತೇಜಿತಗೊಂಡಿದ್ದಾರೆ.

ಮತ್ತೊಂದು ಕಾರಣವೆಂದರೆ, ಅಂತರಾಷ್ಟ್ರೀಯ ಮಟ್ಟದಲ್ಲಿ ಹಾಗೂ ನಮ್ಮ ದೇಶದಲ್ಲಿ ಆಹಾರ ಧಾನ್ಯಗಳ ಮೇಲೆ ಜೂಜುಕೋರ ವಾಯಿದಾ ವ್ಯಾಪಾರವನ್ನು ನಡೆಸುತ್ತಿರುವ ಖಾಸಗಿ ಕಂಪನಿಗಳ ಚಟುವಟಿಕೆಗಳನ್ನು ಸರ್ಕಾರ ನಿಯಂತ್ರಿಸದೇ ಇರುವುದು. ಮತ್ತೊಂದೆಡೆ, ಸಾರ್ವತ್ರಿಕ ಪಡಿತರ ವ್ಯವಸ್ಥೆಯನ್ನು ನಿರಂತರವಾಗಿ ದುರ್ಬಲಗೊಳಿಸುತ್ತಿರುವುದು.

ಡೀಸೆಲ್ ಮತ್ತು ರಾಸಾಯನಿಕ ಗೊಬ್ಬರಗಳಿಗೆ ನೀಡುತ್ತಿದ್ದ ಸಹಾಯಧನವನ್ನು ಕಡಿತಗೊಳಿಸಿ ಅವುಗಳ ಬೆಲೆಯನ್ನು ಮತ್ತಷ್ಟು ಏರಿಸಿರುವುದು ಆಹಾರ ಧಾನ್ಯಗಳ ಹಣದುಬ್ಬರಕ್ಕೆ ಕಾರಣವಾಗಿದೆ. ಉದಾಹರಣೆಗೆ, ಪೆಟ್ರೋಲ್‌ನ ಬೆಲೆ ನಿಯಂತ್ರಣವನ್ನು ತೆಗೆದುಹಾಕಿರುವ ಕೇಂದ್ರ ಸರ್ಕಾರ, ಕಳೆದ 2010, ಜೂನ್ ತಿಂಗಳಿಂದ 2011ರ ಜನವರಿಯವರೆಗೆ ಪೆಟ್ರೋಲ್ ಬೆಲೆಯನ್ನು 7 ಬಾರಿ ಪ್ರತಿ ಲೀಟರ್‌ಗೆ ರೂ. 10ರವರೆಗೆ ಏರಿಸಿದೆ. ಪೆಟ್ರೋಲ್ ಬೆಲೆ ಅಂತರಾಷ್ಟ್ರೀಯ ಮಟ್ಟದಲ್ಲಿ ಪ್ರತಿ ಲೀಟರ್‌ಗೆ ರೂ. 25 ಇದ್ದರೆ, ಇಲ್ಲಿ ರೂ. 60ಕ್ಕೆ ಮಾರಾಟವಾಗುತ್ತಿದ್ದು, ಇದರಲ್ಲಿ ಪ್ರತಿ ಲೀಟರ್‌ಗೆ ರೂ. 30ನ್ನು ತೆರಿಗೆ ಮುಖಾಂತರ ಕೇಂದ್ರ ಸರ್ಕಾರ ಸಂಗ್ರಹಿಸುತ್ತಿದೆ.

ಸರ್ಕಾರ ಬೆಲೆ ನಿಯಂತ್ರಿಸಲು ಏನು ಮಾಡಬಹುದು?

ಸರ್ಕಾರದ ಆಹಾರ ಗೋದಾಮುಗಳಲ್ಲಿ ಸುಮಾರು 5 ಕೋಟಿ ಟನ್‌ಗಳಷ್ಟು ಅಕ್ಕಿ ಮತ್ತು ಗೋಧಿಯಿದ್ದು, ಇದು ಅಗತ್ಯಕ್ಕಿಂತ ಹೆಚ್ಚಿದೆ. ಇದನ್ನು ತಕ್ಷಣವೇ ನ್ಯಾಯಬೆಲೆ ಅಂಗಡಿಗಳ ಮೂಲಕ ಸಾರ್ವತ್ರಿಕವಾಗಿ ಎಲ್ಲರಿಗೂ ಪ್ರತಿ ತಿಂಗಳಿಗೆ 35 ಕೆಜಿ ಆಹಾರ ಧಾನ್ಯ ಕೆಜಿಯೊಂದಕ್ಕೆ ರೂ. 2ರಂತೆ ವಿತರಿಸಬೇಕು. ಎಪಿಎಲ್ ಮತ್ತು ಬಿಪಿಎಲ್ ಎಂಬ ವಿಭಜನೆಯನ್ನು ತೆಗೆದುಹಾಕಬೇಕು.

ರಾಷ್ಟ್ರೀಯ ರೈತರ ಆಯೋಗವು ನೀಡಿರುವ ಸಲಹೆಯಂತೆ, ರೈತರ ಬೆಳೆಗಳಿಗೆ ಉತ್ತಮ ಬೆಂಬಲ ಬೆಲೆ ನೀಡಬೇಕು. ಅವರ ಬೆಳೆಗಳಿಗೆ ಬ್ಯಾಂಕ್‌ನಿಂದ ಸುಲಭ ಸಾಲ, ಬೆಳೆ ಗೋದಾಮುಗಳು ಮತ್ತು ಮಾರುಕಟ್ಟೆ ವ್ಯವಸ್ಥೆ ರೂಪಿಸಿ ಬಲಪಡಿಸಬೇಕು.

ಸಟ್ಟಾಕೋರರು ಮತ್ತು ಬ್ಲಾಕ್‌ಮಾರ್ಕೆಟ್ ವಿರುದ್ಧ ನಿರ್ದಾಕ್ಷಿಣ್ಯ ಕಠಿಣ ಕ್ರಮಕೈಗೊಳ್ಳಬೇಕು. ಪೆಟ್ರೋಲ್, ಡೀಸೆಲ್ ಮತ್ತು ರಾಸಾಯನಿಕ ಗೊಬ್ಬರಗಳ ಬೆಲೆಯನ್ನು ಖಾಸಗಿಯವರಿಗೆ ವಹಿಸದೆ ಸರ್ಕಾರವೇ ನಿಯಂತ್ರಿಸಬೇಕು.

ನಮ್ಮ ಆಹಾರ ಧಾನ್ಯಗಳ ಉತ್ಪಾದನೆಯು ಏರುತ್ತಿರುವ ಜನಸಂಖ್ಯೆಗೆ ಅನುಗುಣವಾಗಿ ಬೆಳೆಯಬೇಕು. ನಮ್ಮ ಕೃಷಿ ಉತ್ಪಾದನೆಯು ಪ್ರಧಾನವಾಗಿ ಮಳೆಯಾಧಾರಿತವಾಗಿರುವುದರಿಂದ ಮಳೆಯಲ್ಲಿನ ಏರುಪೇರು ನೇರವಾಗಿ ಕೃಷಿ ಉತ್ಪನ್ನಗಳ ಮೇಲೆ ಪರಿಣಾಮ ಬೀರುತ್ತದೆ. ಅಲ್ಲದೆ, ನಮ್ಮ ದೇಶದಲ್ಲಿ ಕಡಿಮೆ ಆಹಾರ ಗೋದಾಮುಗಳಿದ್ದು, ಅವುಗಳಲ್ಲಿ ಆಧುನಿಕ ಸಂಗ್ರಹಣಾ ಸೌಲಭ್ಯಗಳಿಲ್ಲದ ಕಾರಣ ಹೆಚ್ಚಿನ ಆಹಾರ ಧಾನ್ಯಗಳನ್ನು ಸಂಗ್ರಹಿಸಿಡಲು ಸಾಧ್ಯವಾಗುತ್ತಿಲ್ಲ. ಈ ಹಿನ್ನೆಲೆಯಲ್ಲಿ ಸರ್ಕಾರ ಆಹಾರದ ಹಣದುಬ್ಬರಕ್ಕೆ ಕಾರಣವಾಗಿರುವ ಇಂತಹ ಮೂಲಗಳನ್ನು ತಕ್ಷಣ ಸರಿಪಡಿಸಬೇಕು. ○

...ಜಾತಿಗಳ ತಳುಕು

ಪುಟ 2 ರಿಂದ

ಊತ್ತುಪುರಂನ ದಲಿತರ ನಡುವೆ ಇಂದು ಸಿಪಿಐ(ಎಂ) ಭದ್ರವಾದ ನೆಲೆ ಸಿಕ್ಕಿದೆ. ಅಲ್ಲಿ ಸಿಪಿಐ(ಎಂ)ನ ಹಲವು ಶಾಖೆಗಳಲ್ಲದೆ, ಡಿವೈಎಫ್ಐ, ಕೃಷಿ ಕೂಲಿಕಾರರ ಸಂಘಟನೆ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯಂತಹ ಸಾಮೂಹಿಕ ಸಂಘಟನೆಗಳು ಬೆಳೆಯುತ್ತಿವೆ.

ದೇವಸ್ಥಾನ ಪ್ರವೇಶದ ಹೋರಾಟ

ಚೆನ್ನೈ ನಗರದ ಸಮೀಪದಲ್ಲಿರುವ ವಿಳುಪುರಂನಲ್ಲಿ ದೇವಸ್ಥಾನ ಪ್ರವೇಶಕ್ಕೆ ಅಲ್ಲಿನ ದಲಿತರು ಸಿದ್ದರಿದ್ದರು. ಊರಿನ ದಲಿತರು ಸೇರಿದಂತೆ ಸಾವಿರಾರು ಜನ ಮೆರವಣಿಗೆ ಮೂಲಕ ಪ್ರವೇಶ ಮಾಡಲು ನಿರ್ಧರಿಸಿದೆವು. ಈ ಹೋರಾಟದಲ್ಲಿ ಸಾಮಾನ್ಯ ಕ್ಷೇತ್ರದಿಂದ ಗೆದ್ದಿರುವ ಜನಪ್ರಿಯ ದಲಿತ ಶಾಸಕಿ ಲತ ಅವರು ಸೇರಿದಂತೆ ಹಲವರು ಹೋರಾಟದಲ್ಲಿ ಭಾಗವಹಿಸಿದ್ದೆವು. ಅಲ್ಲಿನ ಡಿವೈಎಸ್‌ಪಿ, ಇಬ್ಬರು ಇನ್ಸ್‌ಪೆಕ್ಟರುಗಳು ಸೇರಿ ನಮ್ಮನ್ನು ದೇವಸ್ಥಾನ ಪ್ರವೇಶ ಮಾಡಲು ಬಿಡಲಿಲ್ಲ. ಪೊಲೀಸರು ಲಾಠಿ ಚಾರ್ಜ್ ಮಾಡಿದರು. ನನಗೆ ಮಾತ್ರವಲ್ಲ ಶಾಸಕಿಯಾದ ಲತಾರವರನ್ನು ಕೆಳಗೆ ಹಾಕಿ ಹೊಟ್ಟೆ ಮೇಲೆ ತುಳಿದು ತೀವ್ರವಾಗಿ ಗಾಯಗೊಳಿಸಿದರು. ಅವರೇ ಆಮೇಲೆ ಆಸ್ಪತ್ರೆಗೆ ಸೇರಿಸಿದರು. ಈ ಹೋರಾಟ ನಿಂತಿಲ್ಲ. ಜನವರಿ 31, 2011 ರಂದು ದೇವಸ್ಥಾನ ಪ್ರವೇಶಕ್ಕೆ ಕಾರ್ಯ ಯೋಜನೆ ರೂಪಿಸಲಾಗಿದೆ. ಈ ಹೋರಾಟದ ಸಂದರ್ಭದಲ್ಲಿ ಶಾಸಕಿಯಾದ ಲತಾ ಅವರು 'ನಾನೊಬ್ಬಳು ಶಾಸಕಿ. ದೇವಸ್ಥಾನದೊಳಕ್ಕೆ ಅದೇ ಹೇಗೆ ನನ್ನನು ಬಿಡದೆ ತಡೆಯುತ್ತೀರಿ?' ಎಂದು ಪೊಲೀಸ್ ಅಧಿಕಾರಿಗಳನ್ನು ಪ್ರಶ್ನಿಸಿದಾಗ, ಆ ಪೊಲೀಸ್ ಅಧಿಕಾರಿಗಳು ನೀವು ಶಾಸಕಿ ಎಂಬುದು ನಿಜ. ಆದರೆ ನೀವು ದಲಿತ ಶಾಸಕಿ. ಅದಕ್ಕೆ ಒಳಗೆ ಬಿಡುವುದಿಲ್ಲ ಎಂದಿದ್ದರು !!!

ಜಾತಿ ನಿರ್ಮೂಲನೆಯಾಗದೆ ಜನತಾ ಪ್ರಜಾಪ್ರಭುತ್ವ ಕ್ರಾಂತಿ ಸಾಧಿಸಲಾಗದು

ಸಿಪಿಐ(ಎಂ) ಪಕ್ಷದ ಗುರಿ ಜನತಾ ಪ್ರಜಾಪ್ರಭುತ್ವ ಕ್ರಾಂತಿ ಸಾಧಿಸುವುದಾಗಿದೆ. ಜಾತಿ ತಾರತಮ್ಯ, ಅಸ್ಪೃಶ್ಯತೆ ತೊಲಗಿಸದೆ ಈ ಕ್ರಾಂತಿ ಸಾಧ್ಯವಿಲ್ಲ.

ಎಕೆಜಿ, ಇ.ಎಂ.ಎಸ್, ಪಿ. ಸುಂದರಯ್ಯ ಮುಂತಾದವರ ನೇತೃತ್ವದ ಪುನ್ನಪ್ಪ ವಯಲಾರ್ ಹೋರಾಟ, ತೆಲಂಗಾಣ ಹೋರಾಟ ನಮಗೆ ಒಳ್ಳೆಯ ಪಾಠ ಕಲಿಸಿವೆ. ಅಸ್ಪೃಶ್ಯತೆ ವಿರುದ್ಧದ ದಲಿತ ಮತ್ತು ದಲಿತೇತರರ ಐಕ್ಯ ಹೋರಾಟಗಳಿಂದ ದಲಿತೇತರರು ನಮ್ಮಿಂದ ದೂರವಾಗುವುದಿಲ್ಲ. ಬದಲಾಗಿ ದಲಿತ ಮತ್ತು ದಲಿತೇತರ ಒಗ್ಗಟ್ಟು ಬಲವಾಗುತ್ತದೆ ಎಂಬುದನ್ನು ತೋರಿಸಿಕೊಟ್ಟಿದೆ. ಇಂತಹ ಹೋರಾಟಗಳು ಪ್ರಜಾಪ್ರಭುತ್ವ ಹೋರಾಟಗಳನ್ನು ಗಟ್ಟಿಗೊಳಿಸುವುದಲ್ಲದೆ ಕಮ್ಯೂನಿಸ್ಟ್ ಚಳುವಳಿಯನ್ನು ಗಟ್ಟಿಗೊಳಿಸುತ್ತದೆ. ಪಶ್ಚಿಮ ಬಂಗಾಳದಲ್ಲಿ ಭೂಮಿ ಹಂಚಿಕೆಯಿಂದಾಗಿ ದಲಿತರು, ಹಿಂದುಳಿದ ವರ್ಗದವರು ನಮ್ಮ ಬೆನ್ನೆಲುಬಾಗಿ ನಿಂತಿದ್ದಾರೆ. ಆರಂಭದಲ್ಲಿ ಪಕ್ಷಕ್ಕೆ ಕೆಲವು ಸಮಸ್ಯೆ ಉಂಟುಮಾಡಬಹುದು. ಇದು ಶಾಶ್ವತವಲ್ಲ. ಅಸಮಾನತೆ ವಿರುದ್ಧ ಹೋರಾಟ ಮಾಡುವುದು ತಪ್ಪಲ್ಲ. ಸಮಾನತೆ ಸಾಧಿಸಲು ಸಾಧ್ಯವಿದೆ ಎಂಬುದನ್ನು ಜನತೆ ಅರ್ಥ ಮಾಡಿಕೊಳ್ಳುತ್ತಾರೆ.

ನಾವು ಇದುವರೆವಿಗೂ ತಮಿಳುನಾಡಿನಲ್ಲಿ ನಡೆಸಿದ ಹೋರಾಟಗಳಲ್ಲಿ ಯಾವ ಸಂದರ್ಭದಲ್ಲಿಯು ಜಾತಿ ಗಲಭೆ ಉಂಟಾಗಿಲ್ಲ. ಅದು ನಮಗೆ ಅಡ್ಡಿಯಾಗಿ ಬಂದಿಲ್ಲ. ಅಲ್ಲದೆ ನಾವು ಬಲಿಷ್ಠವಾಗುತ್ತಿದ್ದೇವೆ. ಸುಮಾರು 18 ದಲಿತ ಸಂಘಟನೆಗಳು ಅಸ್ಪೃಶ್ಯತಾ ನಿರ್ಮೂಲನ ರಂಗವನ್ನು ಸೇರಿವೆ. ಸಕ್ರಿಯವಾಗಿ ಭಾಗವಹಿಸಿವೆ. ಇದರಲ್ಲಿ 10 ರಾಜ್ಯಮಟ್ಟದ ಸಂಘಟನೆಗಳಾಗಿವೆ. 67 ಜಿಲ್ಲಾಮಟ್ಟದ ಸಂಘಟನೆಗಳು ರಂಗವನ್ನು ಸೇರಿವೆ. ಅಲ್ಲದೆ ಈ ಹೋರಾಟದ ಪರಿಣಾಮ ಸರ್ಕಾರ ಜಿಲ್ಲಾಮಟ್ಟದಲ್ಲಿ ಎಸ್‌ಸಿ/ ಎಸ್‌ಟಿ ಅಭಿವೃದ್ಧಿ ನಿಗಮದ ಕಮಿಟಿಗಳಿಗೆ ಸಿಪಿಐ(ಎಂ) ಸದಸ್ಯರನ್ನು ನೇಮಕ ಮಾಡಿದೆ. ರಾಜ್ಯಮಟ್ಟದ ಸಮಿತಿಯಲ್ಲಿ ಮೂವರು ಸಿಪಿಐ(ಎಂ) ಮುಖಂಡರ ಸದಸ್ಯರಾಗಿ ನೇಮಕಗೊಂಡಿದ್ದೇವೆ. ರಾಜ್ಯ ಸರ್ಕಾರದಿಂದ ಅರುಂಧತಿಯಾರ್ ಕ್ಷೇಮಾಭಿವೃದ್ಧಿ ಮಂಡಳಿಗೆ ಪಕ್ಷದ ಮೂವರು ಮುಖಂಡರು ನೇಮಕಗೊಂಡಿದ್ದಾರೆ. ಇದು ನಮ್ಮ ಹೋರಾಟದ ಸಾಧನೆಯಾಗಿದೆ. ಇದರಿಂದ ದಲಿತರ ಅಭಿವೃದ್ಧಿಗೆ ಅನುಕೂಲ ಕಲ್ಪಿಸಲು ಅವಕಾಶ ಸಿಕ್ಕಿದೆ.

ದಲಿತರಲ್ಲಿ ಜಾಗೃತಿ ಮೂಡಿಸಲು ತ್ರೈಮಾಸಿಕ ಪತ್ರಿಕೆ ವೆಣ್‌ಮಣಿ (ಆರದ ಬೆಂಕಿ) ಎಂಬ ಪತ್ರಿಕೆ ಹೊರ ತರುತ್ತಿದ್ದೇವೆ. ವೆಣ್‌ಮಣಿಯೆಂದರೆ 44 ದಲಿತರನ್ನು ಅವರು ಹೆಚ್ಚು ಕೂಲಿ ಕೇಳಿದ್ದಕ್ಕಾಗಿ ಭೂಮಾಲಿಕರು ಸಜೀವದಹನ ಮಾಡಿದ ಸ್ಥಳವಾಗಿದೆ.

ನಮ್ಮಲ್ಲಿ ಬದ್ಧತೆ ಇರಬೇಕು. ದಲಿತೇತರ ಜನರಿಗೆ ಸರಿಯಾದ ತಿಳುವಳಿಕೆ ನೀಡಿ ಐಕ್ಯತೆ ಬೆಸೆಯುವುದು ನಿರಂತರವಾಗಿ ನಡೆಸಬೇಕು. ಪಾಳೆಗಾರಿ ವ್ಯವಸ್ಥೆ ವಿರುದ್ಧದ ಹೋರಾಟ ತೀವ್ರಗೊಳಿಸಿ ಜಾತಿ ನಿರ್ಮೂಲನೆ ಮಾಡುವ ಚಳುವಳಿಯನ್ನು ನಿರಂತರವಾಗಿ ನಡೆಸಬೇಕು.

ಜನಚಳುವಳಿಯ ಪರಿಣಾಮ

ಒಂದು ಜನ ಚಳುವಳಿ ಪರಿಣಾಮಕಾರಿಯಾಗಿದ್ದರೆ ಏನೆಲ್ಲಾ ಸಾಧಿಸಬಹುದು ಎಂಬುದಕ್ಕೆ ತಮಿಳುನಾಡಿನ ಅಸ್ಪೃಶ್ಯತಾ ನಿವಾರಣ ರಂಗದ ಹೋರಾಟವೇ ಸಾಕ್ಷಿ.

ತಮಿಳುನಾಡಿನ ಅಸ್ಪೃಶ್ಯರಲ್ಲಿ ಅರುಂಧತಿಯಾರ್ ಎಂದು ಕರೆಯುವ ಸಮುದಾಯವು ಶೋಷಿತರಲ್ಲೇ ಶೋಷಿತ ಸಮುದಾಯ, ಪಾರಂಪರಿಕವಾಗಿ ಮಲ ಹೊರುವ ಮತ್ತು ಊರಿನ ಸ್ವಚ್ಛತೆಗೆ ಸಂಬಂಧಿಸಿದ ಕೆಲಸಗಳನ್ನು ಹೇರಲಾಗಿದ್ದ ಈ ಸಮುದಾಯವು ಶೈಕ್ಷಣಿಕವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ ಇತರ ದಲಿತ ಸಮುದಾಯಕ್ಕಿಂತಲೂ ಹಿಂದುಳಿದಿದೆ. ಮೀಸಲಾತಿ ಸೌಲಭ್ಯ ಪಡೆಯುವಲ್ಲಿ ಕೂಡ ಇತರ ದಲಿತ ಸಮುದಾಯದೊಂದಿಗೆ ಸ್ಪರ್ಧಿಸಲಾಗಿಲ್ಲ. ಇದನ್ನು ಗುರುತಿಸಿದ ರಂಗ ಅರುಂಧತಿಯಾರ್ ಸಮುದಾಯವನ್ನು ಸಂಘಟಿಸಿ ರಾಜ್ಯಮಟ್ಟದ ಬೃಹತ್ ರ್‍ಯಾಲಿ ಸಂಘಟಿಸಿತು. ಸುಮಾರು 30 ಸಾವಿರ ಜನ ರ್‍ಯಾಲಿಯಲ್ಲಿ ಪಾಲ್ಗೊಂಡರು. ಆ ನಂತರ ಸರ್ಕಾರ ಅರುಂಧತಿಯಾರ್ ಸಮುದಾಯಕ್ಕೆ ಶೇ.3 ರಷ್ಟು ಪ್ರತ್ಯೇಕ ಮೀಸಲಾತಿ ಘೋಷಿಸಬೇಕಾಯಿತು.

ಅಲ್ಲಿ ಕಾದಿತ್ತು ಡಿಐಜಿ, ಎಸ್.ಪಿ.ಗಳಿಗೂ ಅಮಾನತ್ತು ಶಿಕ್ಷೆ

ಅಸ್ಪೃಶ್ಯತೆ ಆಚರಣೆ ವಿರುದ್ಧ ರಂಗವು ನಡೆಸಿದ ಹೋರಾಟದಲ್ಲಿ ಗ್ರಾಮೀಣ ಜಾತಿವಾದಿ ಶಕ್ತಿಗಳ ದಬ್ಬಾಳಿಕೆ ಒಂದು ಬಗೆಯದಾದರೆ ಹಿರಿಯ ಪೊಲೀಸ್ ಅಧಿಕಾರಿಗಳು ಸೇರಿದಂತೆ ಅಧಿಕಾರಶಾಹಿಗಳ ವರ್ತನೆ ಮತ್ತೊಂದು ಬಗೆಯದು.

ಅಸ್ಪೃಶ್ಯತೆಯ ಕುರಿತ ದೂರುಗಳನ್ನು ನಿರ್ಲಕ್ಷಿಸುವುದಂತೂ ತೀರಾ ಮಾಮೂಲಿ ಬಿಡಿ. ಹಲವು ಸಂದರ್ಭಗಳಲ್ಲಿ ದೌರ್ಜನ್ಯಕಾರಿ ಜಾತಿವಾದಿಗಳೊಂದಿಗೆ ಸೇರಿಕೊಂಡು ದಲಿತರ ವಿರುದ್ಧ ನಿಲ್ಲುವ ಉದಾಹರಣೆಗಳಿಗೇನು ಕಡಿಮೆ ಇಲ್ಲ. ತಮಿಳುನಾಡಿನಲ್ಲಿ ರಂಗ ಇಂಥ ಪ್ರವೃತ್ತಿಯ ವಿರುದ್ಧವೂ ತೀವ್ರವಾಗಿ ಸೆಣೆಸಿದೆ.

ಈ ಹೋರಾಟದಲ್ಲಿ ತಮಿಳುನಾಡಿನ ಡಿಐಜಿ ಮಟ್ಟದ ಹಿರಿಯ ಅಧಿಕಾರಿಯನ್ನು ಬಿಟ್ಟಿಲ್ಲ. ಈ ಹೋರಾಟದಲ್ಲಿ ಇಲ್ಲಿಯವರೆಗೆ ಒಬ್ಬರು ಡಿ.ಐ.ಜಿ. ಅಂದರೆ ಪೊಲೀಸ್ ಮಹಾ ನಿರ್ದೇಶಕರು 2 ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು (ಎಸ್‌ಪಿ) ಅಲ್ಲದೆ 4 ಜನ ಜಿಲ್ಲಾ ಉಪ ಪೊಲೀಸ್ ವರಿಷ್ಠಾಧಿಕಾರಿಗಳು ಅಂದರೆ ಡಿವೈಎಸ್‌ಪಿಗಳು 6 ಜನ ಇನ್ಸ್‌ಪೆಕ್ಟರ್‌ಗಳು, 10 ಜನ ಸಬ್ ಇನ್ಸ್‌ಪೆಕ್ಟರ್‌ಗಳು ತಮ್ಮ ಸೇವೆಯಿಂದ ಅಮಾನತುಗೊಂಡಿದ್ದಾರೆ. ಅಷ್ಟು ಪರಿಣಾಮಕಾರಿಯಾಗಿದೆ ರಂಗದ ಹೋರಾಟ.

ಅಯ್ಯೋ! ಅವಳು ದಲಿತ ಬಾಲಕಿ ತಿನ್ನ ಬೇಕಾಯಿತು ಒಂದು ಹಿಡಿ ಧೂಳು!

ಅದೊಂದು ತಮಿಳುನಾಡು ಶಾಲೆ. ಶಾಲೆ ಎಂದ ಮೇಲೆ ಹಲವಾರು ಜಾತಿಯ ಹಿನ್ನೆಲೆಯ ಮಕ್ಕಳು ಅಲ್ಲಿರುತ್ತಾರೆ. ಏನೇನೋ ತೊಂದರೆ ಎದುರುಸಿಕೊಂಡಾದರೂ ಸರಿ ದಲಿತ ಮಕ್ಕಳೂ ಶಾಲೆಗೆ ಬರುತ್ತಾರೆ. ಶಾಲೆಯಲ್ಲಿ ಕಸ ಗುಡಿಸುವ ಸಿಬ್ಬಂದಿ ಇಲ್ಲದಿದ್ದಾಗ ನಮ್ಮ ಶಿಕ್ಷಕ ಮಹಾಶಯರಾದರಾದರು ಏನು ಮಾಡಿದರು ? ದಲಿತ ಬಾಲಕಿಯೊಬ್ಬಳನ್ನು ಕರೆದು ನೀನು ಶಾಲೆಯ ಕಸ ಗುಡಿಸಬೇಕೆಂದು ಅಪಮಾನಕಾರಿ ರೀತಿಯಲ್ಲಿ ಕೆಲಸ ಹೇರಿದರು. ಬಾಲಕಿ ಸ್ವಾಭಿಮಾನಿ..ಆಕೆ ತನ್ನನ್ನೇ ಗುರುತಿಸಿ ಆರಿಸಿ ಒಪ್ಪಿಸಿದ ಆ ಕೆಲಸ ಮಾಡಲು ನಿರಾಕರಿಸಿದಳು. ನನ್ನ ಅಪ್ಪ, ಅಮ್ಮ ಜಾಡಮಾಲಿ ವೃತ್ತಿಯವರಿರಬಹುದು. ಆದರೆ ನಾನು ಶಾಲೆಗೆ ಬರುವುದು ಓದುವುದಕ್ಕಾಗಿ ಎಂದಳು ದಿಟ್ಟವಾಗಿ. ಆ ಶಿಕ್ಷಕರು ಸುಮ್ಮನೆ ಬಿಟ್ಟಾರೆಯೆ ? ಆ ತರಗತಿಯ ಮಾನಿಟರ್‌ನನ್ನು ಕರೆದು ಆದೇಶಿಸಿದರು. 'ಹೇಗಾದರೂ ಸರಿ. ಅವಳಿಂದ ಶಾಲೆಯ ಕಸ ಗುಡಿಸಿಸಬೇಕು', ಆಮೇಲೆ ಆ ಕೆಲಸ ನಿರಾಕರಿಸಿದ್ದಕ್ಕೆ ಶಿಕ್ಷೆಯಾಗಿ ಅವಳು ಒಂದು ಹಿಡಿ ಧೂಳು ತಿನ್ನಬೇಕು.

ಮಾನಿಟರ್ ಪಟ್ಟು ಹಿಡಿದು ಎರಡೂ ಆದೇಶ ಜಾರಿ ಮಾಡಿಸಿದ. ಒಂದು ಹಿಡಿ ಧೂಳು ತಿನ್ನಬೇಕಾಗಿ ಬಂದ ಬಾಲಕಿಯ ಆರೋಗ್ಯದಲ್ಲಿ ಗಂಭೀರವಾದ ಸಮಸ್ಯೆಯೇ ತಲೆದೋರಿತು. ಹಿರಿಯ ವೈದ್ಯರುಗಳು ಸಾಕಷ್ಟು ಒದ್ದಾಡಿ ಶ್ರಮಿಸಿದ ಮೇಲೆ ಬಾಲಕಿಗೆ ಮರು ಜೀವ ಬಂದಂತಾಯಿತು.

ದಲಿತ ಬಾಲಕಿಗೆ ಆದ ಈ ಘೋರ ಅನ್ಯಾಯವನ್ನು ಅಸ್ಪೃಶ್ಯತಾ ನಿವಾರಣ ರಂಗ ಗಂಭೀರವಾಗಿ ಪರಿಗಣಿಸಿತು. ತಪ್ಪಿತಸ್ಥರಿಗೆ ಶಿಕ್ಷೆಗಾಗಿ ಹಾಗೂ ಬಾಲಕಿಗೆ ಸೂಕ್ತ ಪರಿಹಾರಕ್ಕಾಗಿ ಆಗ್ರಹಿಸಿತು. ತೀವ್ರ ಪ್ರತಿಭಟನೆಯ ನಂತರ ಎರಡೂ ದಕ್ಕಿದವು. ಉನ್ನತ ಮಾನವೀಯ ಮೌಲ್ಯ ಬೋಧಿಸಬೇಕಾದ, ಅದನ್ನು ಆಚರಿಸಬೇಕಾದ ಶಿಕ್ಷಕರ ಮನಸ್ಸಿನಲ್ಲಿ ಜಾತಿವಾದದ ಕೊಳಕು ಯಾವ ಪ್ರಮಾಣದಲ್ಲಿದೆ ಎಂಬುದನ್ನು ನೋಡಿದರೆ ಅಘಾತವಾಗದಿರದು ಅಲ್ಲವೇ?

ಅಂಬೇಡ್ಕರ್ ಪ್ರತಿಮೆ ಎಲ್ಲಿರಬೇಕು?

ತಮಿಳುನಾಡಿನ ವಿರುಧಾಚಲಂ ಎಂಬ ಊರಿನಲ್ಲಿ ಡಾ। ಬಾಬಾ ಸಾಹೇಬ್ ಅಂಬೇಡ್ಕರ್‌ರವರ ಪ್ರತಿಮೆಯೊಂದನ್ನು ಸ್ಥಾಪಿಸಲು ನಿರ್ಧರಿಸಲಾಗಿತ್ತು. ಪ್ರತಿಮೆ ಸಿದ್ಧವಾಯಿತು. ಊರಿನ ಮಧ್ಯದ ಪ್ರಮುಖ ವೃತ್ತದ ಬಳಿ ಪ್ರತಿಮೆ ಸ್ಥಾಪನೆಗೆ ಸಿದ್ಧತೆ ಆರಂಭವಾಯಿತು. ರಾಷ್ಟ್ರ ನಾಯಕರ ಪ್ರತಿಮೆಗಳು ಸಾಮಾನ್ಯ ಇರುವುದೆಲ್ಲಾ ಊರಿನ ಆಯಕಟ್ಟಿನ ಪ್ರಮುಖ ಜಾಗದಲ್ಲಿ ತಾನೆ ?

ಊರಿನ ಜಾತಿವಾದಿ ಜನಗಳ ಜಾತಿಪ್ರಜ್ಞೆ ಜಾಗೃತವಾಯಿತು. .... ಉಹುಂ ಅಂಬೇಡ್ಕರ್ ಪ್ರತಿಮೆ ಊರಿನ ಮಧ್ಯಭಾಗದಲ್ಲಿ ಇರುವಂತಿಲ್ಲ. ಅದನ್ನು ಬೇಕಾದರೆ ದಲಿತರ ಕಾಲೋನಿಯಲ್ಲಿ ಸ್ಥಾಪಿಸಿಕೊಳ್ಳಿ......ಬಲಾಢ್ಯರ ಗುಟುರು. ಪ್ರತಿಮೆ ಸ್ಥಾಪನೆಗೆ ಮುಂದಾಗಿದ್ದವರು ತಮ್ಮ ಕ್ಷೇತ್ರದ ಲೋಕಸಭಾ ಸದಸ್ಯರನ್ನು ಸಂಪರ್ಕಿಸಿದರು. ಆ ಕ್ಷೇತ್ರದ ಎಂ.ಪಿ. ದಲಿತ ಪ್ಯಾಂಥರ್ಸ್ ಪಕ್ಷದ ಅಧ್ಯಕ್ಷರಾದ ತಿರುಮಾವಳ್. ಉಹುಂ... ಅವರ ಪ್ರಯತ್ನವೂ ಫಲ ನೀಡಲಿಲ್ಲ. ಅವರು ಕೈ ಚೆಲ್ಲಿ ...ಪ್ರತಿಮೆಯನ್ನು ದಲಿತ ಕೇರಿಯಲ್ಲೇ ಸ್ಥಾಪಿಸಿ, ಬೇರೆ ದಾರಿ ಇಲ್ಲ... ಎಂದು ಬಿಟ್ಟರು.

ಸರಿ. ದಲಿತ ಕೇರಿಯಲ್ಲಿ ಪ್ರತಿಮೆ ಸ್ಥಾಪನೆ ಮಾಡುವುದೆಂದಾಯಿತು. ಸಂಗತಿ ಅಸ್ಪೃಶ್ಯತಾ ನಿವಾರಣಾ ರಂಗದ ಗಮನಕ್ಕೆ ಬಂತು. ಅಂಬೇಡ್ಕರರು ಕೇವಲ ದಲಿತರಿಗೆ ಮಾತ್ರ ಮುಖಂಡರಲ್ಲ. ಅವರು ರಾಷ್ಟ್ರ ನಾಯಕರು. ಸಂವಿಧಾನ ಶಿಲ್ಪಿ . ಊರಿನ ಆಯಕಟ್ಟಿನ ಜಾಗದಲ್ಲಿ ಪ್ರತಿಮೆ ಸ್ಥಾಪನೆಗೆ ಅವಕಾಶ ನೀಡುವುದಿಲ್ಲ ಎಂಬುದು ಕೂಡ ಹೀನಾಯವಾದ ಜಾತಿವಾದ ಮತ್ತು ಅಸ್ಪೃಶ್ಯತೆಯ ಆಚರಣೆಯ ಮತ್ತೊಂದು ರೂಪ. ಅದನ್ನು ಒಪ್ಪಲು ಸಾಧ್ಯವಿಲ್ಲ. ಪ್ರತಿಮೆಯನ್ನು ಮೊದಲು ಯೋಜಿಸಿದ ಜಾಗದಲ್ಲೆ ಸ್ಥಾಪಿಸಬೇಕು.....ರಂಗವು ವಿಷಯದಲ್ಲಿ ಮಧ್ಯ ಪ್ರವೇಶಿಸಿತು.

ರಂಗ ಹೋರಾಟ ನಡೆಸಿತು ಮಾತ್ರವಲ್ಲ, ಕೋರ್ಟಿನ ಕಟಕಟೆಯನ್ನೂ ಏರಿತು. ವಿಷಯ ಕೇಳಿದ ನ್ಯಾಯಾಧೀಶರು ಬಲಾಢ್ಯರ ಜಾತಿವಾದ, ಮೊಂಡುವಾದವನ್ನು ಕೇಳಿ ಕೆರಳಿ ಕೆಂಡವಾದರು. ಆದೇಶ ಹೊರಟಿತು. .....ಪ್ರತಿಮೆ ಸ್ಥಾಪನೆ ಮೂಲ ಯೋಜನೆಯಂತೆಯೇ ನಡೆಯಬೇಕು. ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ಸ್ವತ: ಜಿಲ್ಲಾಧಿಕಾರಿಗಳೇ ಖುದ್ದು ವಹಿಸಿ ಸಮಾರಂಭ ನಡೆಸಬೇಕು. ಸಮಾರಂಭಕ್ಕೆ ಅಸ್ಪೃಶ್ಯತಾ ನಿವಾರಣಾ ರಂಗದ ಮುಖಂಡರನ್ನೂ ಸಹ ಮುಖ್ಯ ಅತಿಥಿಗಳಾಗಿ ಕರೆಯಬೇಕು...

ನ್ಯಾಯಾಲಯದ ಆದೇಶ ಜಾರಿಯಾಯಿತು. ಜಾತಿವಾದಿಗಳು ಬಾಲ ಮುದುರಿಕೊಂಡು ಕೂರುವಂತಾಯಿತು. ಈಗ ಊರಿನ ಪ್ರಮುಖ ಸ್ಥಳದಲ್ಲಿ ಅಪ್ರತಿಮ ಹೋರಾಟಗಾರ ಡಾ।ಬಿ.ಆರ್. ಅಂಬೇಡ್ಕರರ ಪ್ರತಿಮೆ ರಾರಾಜಿಸುತ್ತಿದೆ.

ಸಮುದಾಯ ರಾಜ್ಯ ಸಮ್ಮೇಳನ

ಬಹು ಸಂಸ್ಕೃತಿ ರಕ್ಷಣೆಗೆ ಪಣ

■ ಎನ್.ಕೆ.ವಸಂತರಾಜ್

"ಕಲೆಗಾಗಿ ಕಲೆ ಅಲ್ಲ, ಬದುಕಿಗಾಗಿ ಕಲೆ, ಜನರಿಗಾಗಿ ಕಲೆ" ಎನ್ನುವ ಆಶಯ ಹೊತ್ತು 1975 ರಲ್ಲಿ ಹುಟ್ಟಿದ ಸಮುದಾಯಕ್ಕೆ ಈಗ 35 ವರ್ಷದ ಹರೆಯ. ತುರ್ತು ಪರಿಸ್ಥಿತಿಯ ವಿರುದ್ಧ ಸಿಡಿದ ಪ್ರಜಾಸತ್ತಾತ್ಮಕ ಚಳುವಳಿಯ ಭಾಗವಾಗಿ ಹೊಮ್ಮಿದ ಸಾಂಸ್ಕೃತಿಕ ಚಳುವಳಿಯ ಮಂಚೂಣಿಯಲ್ಲಿತ್ತು ಸಮುದಾಯ. ಸದಾ ಸಮಕಾಲೀನ ಸಾಂಸ್ಕೃತಿಕ ಸವಾಲುಗಳಿಗೆ ಸ್ಪಂದಿಸುತ್ತಾ ಜನಮುಖಿ ಸಂಸ್ಕೃತಿ ಗಟ್ಟಿಗೊಳಿಸಲು ಹೆಣಗಿದೆ. ಬಹುಸಂಸ್ಕೃತಿಯ ರಕ್ಷಣೆ ಪ್ರಸ್ತುತ ಕಾಲಘಟ್ಟದ ಪ್ರಮುಖ ಸಾಂಸ್ಕೃತಿಕ ಸವಾಲು ಎಂದು ಸಮುದಾಯ ಪರಿಗಣಿಸಿದೆ.

ಬಹು ಧರ್ಮ, ಬಹು ಸಂಸ್ಕೃತಿಗಳ ಬೀಡು ಗುಲಬರ್ಗಾ. ಬಸವ, ಬಂದೇನವಾಜರ ಸಮನ್ವಯ ಭೂಮಿ ಗುಲಬರ್ಗಾದಲ್ಲಿ 2011ರ ಜನವರಿ 22-23 ರಂದು ಸಮುದಾಯದ 4ನೇ ರಾಜ್ಯ ಸಮ್ಮೇಳನ ಯಶಸ್ವಿಯಾಗಿ ನಡೆಯಿತು. ಕರ್ನಾಟಕದ ಸಾಂಸ್ಕೃತಿಕ ಸನ್ನಿವೇಶ, ಅದರ ಹಿನ್ನೆಲೆಯಲ್ಲಿ ತನ್ನ ಸಾಂಸ್ಕೃತಿಕ ಜವಾಬ್ದಾರಿ ಮತ್ತು ಅದನ್ನು ಹೊರಲು ಅಗತ್ಯವಾದ ಸಂಘಟನಾ ವಿಷಯಗಳ ಬಗ್ಗೆ ಸಮ್ಮೇಳನ ವಿವರವಾಗಿ ಚರ್ಚಿಸಿತು. ಬಹುಸಂಸ್ಕೃತಿಯ ರಕ್ಷಣೆಗೆ ಪಣ ತೊಟ್ಟಿತು.

ಎಚ್ಚರಿಕೆಯ ಗಂಟೆ

ಮುಖ್ಯಮಂತ್ರಿಗಳ ವಿರುದ್ಧ ಭ್ರಷ್ಟಾಚಾರದ ಕೇಸು ಹಾಕಲು ಅನುಮತಿ ಕೊಟ್ಟ ಗವರ್ನರ್ ಕ್ರಮದ ವಿರುದ್ಧ ಬಿಜೆಪಿ ಸರ್ಕಾರಿ ಪ್ರಾಯೋಜಿತ ಬಂದಿನ ಬಿಸಿ ಇದ್ದಾಗ್ಯೂ, ಉದ್ಘಾಟನಾ ಸಮಾರಂಭಕ್ಕೆ ನಿಯೋಜಿತ ಹಾಲ್ ತುಂಬಿ ತುಳುಕುತ್ತಿತ್ತು. ಉದ್ಘಾಟನಾ, ವಿಚಾರ ಸಂಕಿರಣ, ಸಮ್ಮೇಳನದ ಕಲಾಪಗಳು, ಸಾಂಸ್ಕೃತಿಕ ಸಂಜೆ, ಸಮಾರೋಪ ಎಲ್ಲವೂ ನಡೆದದ್ದು ಹೈದರಾಬಾದು ಕರ್ನಾಟಕದ ಉಚ್ಚ ಶಿಕ್ಷಣ ಮತ್ತು ಸಾಂಸ್ಕೃತಿಕ ಕೇಂದ್ರ ಗುಲಬರ್ಗಾ ವಿಶ್ವವಿದ್ಯಾಲಯದಲ್ಲಿ. ಅನ್ವಯಿಕ ಇಲೆಕ್ಟ್ರಾನಿಕ್ಸ್ ವಿಭಾಗದ ಭಾಭಾ ಹಾಲಿನಲ್ಲಿ ಸಜ್ಜಾಗಿದ್ದ ಸಿಜಿಕೆ ವೇದಿಕೆಯಿಂದ ಎನ್ನುವುದು ಇಂದಿನ ಸನ್ನಿವೇಶದಲ್ಲಿ ಅತ್ಯಂತ ಅರ್ಥಪೂರ್ಣವಾಗಿತ್ತು.

"ಕಲೆಗಾಗಿ ಕಲೆ ಅಲ್ಲ, ಬದುಕಿಗಾಗಿ ಕಲೆ, ಜನರಿಗಾಗಿ ಕಲೆ" ಎನ್ನುವ ಆಶಯ ಹೊತ್ತು 1975 ರಲ್ಲಿ ಹುಟ್ಟಿದ ಸಮುದಾಯಕ್ಕೆ ಈಗ 35 ವರ್ಷದ ಹರೆಯ. ತುರ್ತು ಪರಿಸ್ಥಿತಿಯ ವಿರುದ್ಧ ಸಿಡಿದ ಪ್ರಜಾಸತ್ತಾತ್ಮಕ ಚಳುವಳಿಯ ಭಾಗವಾಗಿ ಹೊಮ್ಮಿದ ಸಾಂಸ್ಕೃತಿಕ ಚಳುವಳಿಯ ಮಂಚೂಣಿಯಲ್ಲಿತ್ತು ಸಮುದಾಯ. ಸದಾ ಸಮಕಾಲೀನ ಸಾಂಸ್ಕೃತಿಕ ಸವಾಲುಗಳಿಗೆ ಸ್ಪಂದಿಸುತ್ತಾ ಜನಮುಖಿ ಸಂಸ್ಕೃತಿ ಗಟ್ಟಿಗೊಳಿಸಲು ಹೆಣಗಿದೆ. ಬಹುಸಂಸ್ಕೃತಿಯ ರಕ್ಷಣೆ ಪ್ರಸ್ತುತ ಕಾಲಘಟ್ಟದ ಪ್ರಮುಖ ಸಾಂಸ್ಕೃತಿಕ ಸವಾಲು ಎಂದು ಸಮುದಾಯ ಪರಿಗಣಿಸಿದೆ.

ಗುಲಬರ್ಗಾ ವಿಶ್ವವಿದ್ಯಾಲಯದ ಉಪಕುಲಪತಿ ಪ್ರೊ. ಈ.ಟಿ.ಪುಟ್ಟಯ್ಯನವರು ಗಂಟೆ ಬಾರಿಸುವ ಮೂಲಕ ಸಮ್ಮೇಳನವನ್ನು ವಿಶಿಷ್ಟವಾಗಿ ಉದ್ಘಾಟಿಸಿದರು. ಸಮುದಾಯದ ವಿಶಿಷ್ಟ ಕೊಡುಗೆ, ಪ್ರಸ್ತುತ ಸನ್ನಿವೇಶದಲ್ಲಿ ಮಹತ್ವದ ಬಗ್ಗೆ ಮಾತನಾಡಿದ ಪ್ರೊ. ಪುಟ್ಟಯ್ಯನವರು ಬಹು ಸಂಸ್ಕೃತಿಯ ರಕ್ಷಣೆಗೆ ಬಾರಿಸಿದ ಎಚ್ಚರಿಕೆಯ ಗಂಟೆ ಇದು ಎಂದರು. ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಗುಲಬರ್ಗಾ ದೂರದರ್ಶನದ ಕೇಂದ್ರ ನಿರ್ದೇಶಕ ಎಂ.ಬಿ. ಪಾಟೀಲ ಇದು ನ್ಯಾಯದ ಗಂಟೆ ಎಂದರು. ಎಲ್ಲಾ ಕಲಾ ಪ್ರಕಾರಗಳು ಮಾಧ್ಯಮಗಳು ಮಾರಾಟದ ಸರಕಾಗಿರುವ ಇಂದಿನ ಸನ್ನಿವೇಶದ ಸಾಂಸ್ಕೃತಿಕ ಸವಾಲುಗಳ ಬಗ್ಗೆ ವಿವರವಾಗಿ ಮಾತನಾಡಿದರು. 1981 ರ ಸಮುದಾಯದ 'ಬಂಡೆದ್ದ ರೈತರೆಡೆಗೆ ಜಾಥಾ'ವನ್ನು 21 ದಿನಗಳ ಕಾಲ ದೂರದರ್ಶನದ ತಂಡದ ಭಾಗವಾಗಿ ದಾಖಲಿಸಿದ ಅನುಭವದ ಬಗ್ಗೆ ನೆನಪಿಸಿಕೊಂಡರು. ಆಗಲೂ ಈಗಲೂ ಮಾಧ್ಯಮ ಮತ್ತು ಸಾಂಸ್ಕೃತಿಕ ಕಾರ್ಯಕರ್ತರು ಅಧ್ಯಯನ ಮಾಡಬೇಕಾದ 'ಸಾಮೂಹಿಕ ಸಂವಹನದ ಒಂದು ಪ್ರಧಾನ ಪರಿಣಾಮಕಾರಿ ಪ್ರಯೋಗ' ಅದು ಎಂದರು.

ರಂಗೇರಿದ ಸಂಜೆ

ಮೊದಲ ದಿನ ಸಂಜೆ ಪ್ರತಿನಿಧಿ ಸಭೆಯ ನಂತರ ಸಾಂಸ್ಕೃತಿಕ ಕಾರ್ಯಕ್ರಮಗಳಿಂದ ಸಂಜೆ ರಂಗೇರಿತು. ಸಮುದಾಯದ ವಲಯ ಕಾರ್ಯದರ್ಶಿಗಳಾಗಿದ್ದ ಶಂಕರಯ್ಯ ಘಂಟಿಯವರ ನಾಟಕ ಸಂಕಲನ 'ಉರಿದ ಬದುಕು' ಬಿಡುಗಡೆಯಿಂದ ಸಂಜೆ ಆರಂಭವಾಯಿತು. ಆ ಮೇಲೆ ಸುಮಾರು ಎರಡು ಗಂಟೆಗಳ ಕಾಲ ರಾಮಲಿಂಗಯ್ಯ ಗವಾಯಿ ಮತ್ತು ಶಿವಶರಣ ಕಟ್ಟಿಮನಿ ಕಡಿಕೋಳ ಮಡಿವಾಳಪ್ಪ ಮತ್ತು ಅವರ ಪ್ರಮುಖ ಶಿಷ್ಯರುಗಳ ತತ್ವಪದಗಳನ್ನು ಹಿಂದೂಸ್ತಾನಿ ಶೈಲಿಯಲ್ಲಿ, ಪ್ರೇಕ್ಷಕರ ವಾ ವಾ ತಲೆದೂಗುವಿಕೆ ಮತ್ತು ಚಪ್ಪಾಳೆಗಳೊಂದಿಗೆ ನಿರರ್ಗಳವಾಗಿ ಹಾಡಿ ಸಂಜೆಗೆ ರಂಗೇರಿಸಿದರು. ತತ್ವಪದಗಳ ಬಗ್ಗೆ ಡಾ.ಮೀನಾಕ್ಷಿ ಬಾಳಿಯವರ ಸಮಯೋಚಿತ ಆಪ್ತ [illegible]

50 ವಿಶ್ವವಿದ್ಯಾಲಯಗಳೂ ಮಾಡದ..


ಸಮುದಾಯದ ಸ್ಥಾಪನೆಯಲ್ಲಿ ಪ್ರಮುಖ ಪಾತ್ರ ವಹಿಸಿದ ಮತ್ತು ಅದರ ನಾಮಕರಣ ಮಾಡಿದ ಕಿ.ರಂ. ನಾಗರಾಜ ಸ್ಮರಣೆಯ ವಿಚಾರ ಸಂಕಿರಣದಲ್ಲಿ "ಕಲಾ ಮಾಧ್ಯಮ ಹಾಗೂ ಸಾಮಾಜಿಕ ಬದ್ಧತೆ" ಬಗ್ಗೆ ಬೆಂಗಳೂರು ವಿಶ್ವವಿದ್ಯಾಲಯದ ಪ್ರೊ. ರಾಜಪ್ಪ ದಳವಾಯಿಯವರು ಮಾತನಾಡಿದರು. ಹಿಂದೆ 50 ವಿಶ್ವವಿದ್ಯಾಲಯಗಳೂ ಮಾಡದ ಸಾಮೂಹಿಕ ಶಿಕ್ಷಣ ಕೊಡುವ ಮತ್ತು ಎಚ್ಚರಮೂಡಿಸುವ ಕೆಲಸ ಮಾಡಿದ ಸಮುದಾಯ, ಹೊಸ ಪೀಳಿಗೆಯನ್ನು ಒಳಗೊಳ್ಳುವ ಬಗ್ಗೆ ತೀವ್ರ ಗಮನಹರಿಸಬೇಕು ಎಂದರು. ಆ ನಂತರ ನಡೆದ ಆಸಕ್ತಿಕಾರಕ ಬಿಸಿ ಚರ್ಚೆಗೆ ಅವರು ಉತ್ತರಿಸಿದರು. ಸಮುದಾಯದ ಅಧ್ಯಕ್ಷ ಪ್ರೊ. ಆರ್.ಕೆ.ಹುಡಗಿ ಅಧ್ಯಕ್ಷತೆ ವಹಿಸಿದ್ದರು.

ಸಮ್ಮೇಳನದ ನಿರ್ಣಯಗಳು

- ಜಾನುವಾರು ಹತ್ಯೆ ನಿಷೇಧ ಕಾನೂನು ಹಿಂದಕ್ಕೆ ಪಡೆಯಲು ಒತ್ತಾಯಿಸಿ, ಎಲ್ಲಾ ಕಲಾವಿದರಿಗೆ ವಿಮೆ ಮತ್ತು ಪಿಂಚಣಿಗೆ ಒತ್ತಾಯಿಸಿ
- ಬಹುಸಂಸ್ಕೃತಿಯ ರಕ್ಷಣೆಗೆ, ಏಕ ಸಂಸ್ಕೃತಿಯ ಹೇರಿಕೆಯ ವಿರುದ್ಧ
- ನೈಸರ್ಗಿಕ ಸಂಪತ್ತುಗಳ ರಕ್ಷಣೆಗೆ ಮತ್ತು ಗಣಿಗಾರಿಕೆ ರಾಷ್ಟ್ರೀಕರಣಕ್ಕೆ ಒತ್ತಾಯಿಸಿ
- ಹಂಪಿ ಮತ್ತು ಇತರ ಉತ್ಸವಗಳನ್ನು ಬಿಜೆಪಿ ಉತ್ಸವ ಮಾಡುವುದರ ವಿರುದ್ಧ
- ಮಾಧ್ಯಮಗಳು ಅಂಧಶ್ರದ್ಧೆಗಳ ಪೋಷಣೆ ಮಾಡುವುದನ್ನು ಖಂಡಿಸಿ ಇತ್ಯಾದಿ.

ಪ್ರತಿನಿಧಿಗಳ ಅಧಿವೇಶನ

ಸಮುದಾಯದ 25 ಘಟಕಗಳಿಂದ ಬಂದ 150ಕ್ಕೂ ಹೆಚ್ಚು ಪ್ರತಿನಿಧಿಗಳ ಅಧಿವೇಶನ ಮುಂದಿನ ಮತ್ತು ಪ್ರಮುಖ ಕಾರ್ಯಕ್ರಮವಾಗಿತ್ತು. ಅದು ಕಳೆದ ಸಮ್ಮೇಳನದ ನಂತರದ ಎರಡು ವರ್ಷಗಳ ವರದಿಯನ್ನು ಸಮುದಾಯದ ರಾಜ್ಯ ಸಮಿತಿಯ ಪರವಾಗಿ ಪ್ರಧಾನ ಕಾರ್ಯದರ್ಶಿ ಟಿ.ಸುರೇಂದ್ರ ರಾವ್ ಮಂಡಿಸಿದರು. ವರದಿಯಲ್ಲಿ ಕರ್ನಾಟಕದ ಸಾಂಸ್ಕೃತಿಕ ಸನ್ನಿವೇಶ ಮತ್ತು ಸಮುದಾಯದ ಸಂಘಟನಾ ಚಟುವಟಿಕೆ ಬಗೆಗಿನ ಎರಡು ಪ್ರಮುಖ ಭಾಗಗಳಿದ್ದವು. ಕರ್ನಾಟಕದ ಹಲವು ಸಾಂಸ್ಕೃತಿಕ ಬೆಳವಣಿಗೆಗಳನ್ನು ಗುರುತಿಸಿ, ವಿಶ್ಲೇಷಿಸುವ ಮೂಲಕ ಸಾಂಸ್ಕೃತಿಕ ಸನ್ನಿವೇಶದ ಮತ್ತು ಸವಾಲುಗಳ ಸಮಗ್ರ ಚಿತ್ರಣವನ್ನು ವರದಿ ನೀಡಿತು.



ನೂರು ಘಟಕಗಳ ಗುರಿ

ವರದಿಯ ಎರಡನೇ ಭಾಗ 25 ಘಟಕಗಳ ಮತ್ತು ಪ್ರಾದೇಶಿಕ-ರಾಜ್ಯ ಮಟ್ಟದ ಚಟುವಟಿಕೆಗಳನ್ನು ವಿವರಿಸಿ-ವಿಶ್ಲೇಷಿಸಿತು. ಚಟುವಟಿಕೆ ಮತ್ತು ಸಂಘಟನೆಯ ಮಟ್ಟದಲ್ಲಿ ಸೋಲು-ಗೆಲುವು, ಬಲ-ನ್ಯೂನ್ಯತೆಗಳನ್ನು ಗುರುತಿಸಿತು. ಅದರ ಹಿನ್ನೆಲೆಯಲ್ಲಿ ಸಂಘಟನೆ ಬಲ ಪಡಿಸಲು ಮತ್ತು ಚಟುವಟಿಕೆ ವಿಸ್ತರಿಸಲು ಹತ್ತು ನಿರ್ದಿಷ್ಟ ಅಂಶಗಳ ಕಾರ್ಯ ಯೋಜನೆ ರೂಪಿಸಿದೆ. ವರದಿಯ ಮೇಲೆ ಮರುದಿನ ಮಧ್ಯಾಹ್ನದ ವರೆಗೆ ತೀವ್ರ, ಗಂಭೀರ [illegible] ಅಂಗೀಕರಿಸಲಾಯಿತು.


ಚರ್ಚೆಗೆ ಉತ್ತರ ನೀಡಿದ ಕಾರ್ಯದರ್ಶಿಗಳು, ವರದಿ ಉತ್ತಮ ಪಡಿಸುವ ಹಲವು ಸಲಹೆ-ಸೂಚನೆಗಳನ್ನು ಸ್ವೀಕರಿಸುತ್ತಾ, ಸಂಘಟನೆ ಬಲಪಡಿಸಿ ಸವಾಲುಗಳನ್ನು ಎದುರಿಸುವ ಕ್ರಮಗಳ ಬಗ್ಗೆ ಒತ್ತು ನೀಡಿದರು. ಮುಂದಿನ ಸಮ್ಮೇಳನದ ಹೊತ್ತಿಗೆ ನೂರು ಘಟಕಗಳನ್ನು ಪ್ರತಿ ಜಿಲ್ಲೆಗೆ ಕನಿಷ್ಟ ಒಂದು ಘಟಕ ಹೊಂದುವ ಪಣವನ್ನು ಸಮ್ಮೇಳನ ತೊಟ್ಟಿತು. ಹಿಂದಿನ ರಾಜ್ಯ ಸಮಿತಿಯು ಸೂಚಿಸಿದ ಹೊಸ ರಾಜ್ಯ ಸಮಿತಿಯನ್ನು ಸಮ್ಮೇಳನ ಸರ್ವಾನುಮತದಿಂದ ಆರಿಸಿತು. ಹೊಸ ರಾಜ್ಯ ಸಮಿತಿ ಆರ್.ಕೆ.ಹುಡಗಿ ಯವರನ್ನು ಅಧ್ಯಕ್ಷರಾಗಿ, ಟಿ.ಸುರೇಂದ್ರ ರಾವ್ ಪ್ರಧಾನ ಕಾರ್ಯದರ್ಶಿಯನ್ನು ಪುನಃ ಆರಿಸಿತು. ಸ್ವಲ್ಪ ಬದಲಾದ ಹೊಸ ಪದಾಧಿಕಾರಿಗಳನ್ನೂ ಆರಿಸಿತು. ಸಮುದಾಯದ ಮುಂದಿರುವ ಕಾಯಕಗಳ ಬಗ್ಗೆ ಹೊಸದಾಗಿ ಆಯ್ಕೆಯಾದ ಉಪಾಧ್ಯಕ್ಷೆ ಡಾ. ಮೀನಾಕ್ಷಿ ಬಾಳಿಯವರ ಸ್ಫೂರ್ತಿದಾಯಕ ಕರೆ ಸಮಾರೋಪದ ಮುಖ್ಯ ಅಂಶವಾಗಿತ್ತು. ಎಲ್ಲಾ ಪ್ರತಿನಿಧಿಗಳು ಸಮುದಾಯ ಗೀತೆ "ಎಲ್ಲಿಂದ ಬಂದಿರೆಂದು ಕೇಳಬಹುದು ನೀವು.." ಹಾಡುತ್ತಾ ಸಾಲಾಗಿ ಹಾಲಿನಿಂದ ಹೊರ ನಡೆಯುವುದರೊಂದಿಗೆ ಸಮ್ಮೇಳನದ ಪಾರಂಪರಿಕ ಸಮಾವೇಶ ಕೊನೆ ಆಯಿತು.

ಸಾಂಸ್ಕೃತಿಕ ಸನ್ನಿವೇಶದ ಬಗ್ಗೆ ಅಂಧಶ್ರದ್ಧೆಗಳ ಪೋಷಣೆ

ಉಚ್ಚ ಜಾತಿಯವರು ಉಂಡುಬಿಟ್ಟ ಬಾಳೆ ಎಲೆಯ ಮೇಲೆ ಕೆಳಜಾತಿಯ ಜನರು ಉರುಳು ಸೇವೆ ಮಾಡುವ ಸಂಪ್ರದಾಯ ಪ್ರಜ್ಞಾವಂತರಾದ ಎಲ್ಲರನ್ನೂ ಘಾಸಿಗೊಳಿಸಿದೆ. ವಾಮಾಚಾರದ ಹೆಸರಿನಲ್ಲಿ ನರಹತ್ಯೆಯಾಗುತ್ತಿರುವ ವರದಿಗಳಂತೂ ಎಲ್ಲರನ್ನೂ ಧೃತಿಗೆಡಿಸಿದೆ. ಪುಟ್ಟ ಪುಟ್ಟ ಹೆಣ್ಣುಮಕ್ಕಳನ್ನು ದೇವರ ಹೆಸರಿನಲ್ಲಿ 'ಬಸವಿ' ಬಿಡುವ ಆಚರಣೆ ಅವ್ಯಾಹತವಾಗಿ ನಡೆಯುತ್ತಲೇ ಇದೆ. ಮಾಯ ಮಂತ್ರ ಮಾಟದಂತಹ ಮೌಢ್ಯಗಳು ವಿಧಾನ ಸೌಧದ ಬಾಗಿಲನ್ನೂ ತಟ್ಟಿದೆ. ಸನಾತನ ಧರ್ಮ ರಕ್ಷಣೆಯ ಹೆಸರಿನಲ್ಲಿ ಜನರನ್ನು ಸುಲಿಗೆ ಮಾಡುತ್ತಿರುವ ಜನಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುಗುತ್ತಲೇ ಇವೆ... ಮಾಧ್ಯಮಗಳು, ಮುಖ್ಯವಾಗಿ ವಿದ್ಯುನ್ಮಾನ ಮಾಧ್ಯಮ(ಟಿ.ವಿ)ಗಳು ಜನರಲ್ಲಿ ಮೌಢ್ಯಗಳನ್ನು ಬಿತ್ತುವ ಹಾಗೂ ಗಟ್ಟಿಗೊಳಿಸುವ ಕಾರ್ಯಕ್ರಮಗಳನ್ನು ನಿರಂತರವಾಗಿ ಬಿತ್ತರಿಸುವ ಮೂಲಕ ತಪ್ಪುದಾರಿಗೆ ಎಳೆಯುತ್ತಿರುವ ಸಂಗತಿ ಆಧುನಿಕ ಸಮಾಜಕ್ಕೆ ಬಗೆದ ದ್ರೋಹ ಎಂದು ಹೇಳಬೇಕಾಗುತ್ತದೆ... ... ...

ಸಾಂಸ್ಕೃತಿಕ ವಲಯ ಇನ್ನೂ ಜಾತ್ಯತೀತ

ಕರ್ನಾಟಕದ ಸಮಾಜದ ಎಲ್ಲಾ ವಿಭಾಗಗಳ ಕೋಮುವಾದೀಕರಣ ಮಾಡಲು ಸತತ ಪ್ರಯತ್ನ [illegible]



ಜೈಲಿನ ಭಯವೋ ಪ್ರಾಣ ಬೆದರಿಕೆಯೋ?

ಬಿಜೆಪಿ ದರ್ಬಾರ್

"ನನ್ನನ್ನು ಜೀವ ಸಹಿತ ಮುಗಿಸಲು ವಿರೋಧ ಪಕ್ಷಗಳು ಮಾಟ-ಮಂತ್ರ ಷಡ್ಯಂತ್ರ ರೂಪಿಸುತ್ತಿರುವುದರಿಂದ ನನಗೆ ಜೀವ ಬೆದರಿಕೆ ಇದೆ. ಮನೆಯಿಂದ ವಿಧಾನ ಸೌಧಕ್ಕೆ ಹೋದರೆ ಮನೆಗೆ ವಾಪಸ್ ಬರುತ್ತೇನೆಂಬ ಭರವಸೆ ನನ್ನಲ್ಲಿಲ್ಲ...." ಹೀಗಂತ ನಮ್ಮ ರಾಜ್ಯದ ಜನರ ಮುಂದೆ ಅಲವತ್ತುಕೊಂಡಿದ್ದಾರೆ ನಮ್ಮ ರಾಜ್ಯದ ಘನ ಮುಖ್ಯಮಂತ್ರಿಗಳು. ಯಾರಾದರೂ ಹಳ್ಳಿಗಾಡಿನ ಅನಕ್ಷರಸ್ಥರು, ಮುಗ್ಧ ಬಡವರು ಇಂಥ ಮಾತನ್ನಾಡಿದರೆ ಹೋಗಲಿ ಪಾಪ ತಿಳುವಳಿಕೆಯ ಕೊರತೆ ಎನ್ನಬಹುದಿತ್ತು. ಇದನ್ನು ಹೇಳಿದವರು ರಾಜ್ಯದ ಆರು ಕೋಟಿಗೂ ಮೀರಿರುವ ಜನರ ಬದುಕಿಗೆ ರಕ್ಷಣೆ ಕೊಡಬೇಕಾದ ಕರ್ತವ್ಯವನ್ನು ಹೊತ್ತು ಕೊಂಡಿರುವಂಥವರು. ಜನರಲ್ಲಿ ವೈಜ್ಞಾನಿಕ ಮನೋಭಾವವನ್ನು ಬೆಳೆಸುವ ಮತ್ತು ಮೂಢನಂಬಿಕೆಗಳನ್ನು ಹೋಗಲಾಡಿಸುವ ಸಂವಿಧಾನ ಬದ್ಧವಾದ ಕರ್ತವ್ಯವನ್ನು ತಮ್ಮ ತಲೆಯ ಮೇಲೆ ಹೊತ್ತುಕೊಂಡಿರುವವರು.

ನಿಜಕ್ಕೂ ಯಡಿಯೂರಪ್ಪನವರು ಮಾಟ ಮಂತ್ರಗಳ ಭಯದಿಂದ ಹೆದರಿದ್ದಾರೆಯೇ ? ಖಂಡಿತ ಇರಲಾರದು. ಹತ್ತಾರು ಭ್ರಷ್ಟಾಚಾರದ ಹಗರಣಗಳು, ಸ್ವಜನ ಪಕ್ಷಪಾತ, ನಿರ್ಲಜ್ಜ ಅಕ್ರಮಗಳನ್ನು ನಡೆಸಿ ಅವುಗಳೆಲ್ಲವೂ ಈಗ ಬಂದು ಕೊರಳಿಗೆ ಉರುಳಾಗಿ ಸುತ್ತಿಕೊಂಡಿರುವಾಗ ಎಲ್ಲಿ ಮುಖ್ಯಮಂತ್ರಿ ಪದವಿಯೆಂಬ ಸಿಂಹಾಸನ ಕೈ ತಪ್ಪಿ ಹೋಗುತ್ತದೋ ಎಂಬ ಕನಲುವಿಕೆ ಅವರನ್ನು ಕಾಡುತ್ತಿದೆ. ಒಂದೊಮ್ಮೆ ಹಗರಣಗಳ ದೆಸೆಯಿಂದಾಗಿ ಜೈಲು ಪಾಲಾಗ ಬೇಕಾದ ಸಂದರ್ಭ ಬಂದರೆ ಏನು ಕತೆ ಎಂಬುದು ಯಡಿಯೂರಪ್ಪನವರ ನಿಜವಾದ ಚಿಂತೆಯಾಗಿದೆ. ಅಂತರಂಗದ ಮಾತುಗಳನ್ನು ಹಾಗೇ ನೇರವಾಗಿ ಹೊರಹಾಕಲು ಸಾಧ್ಯವೇ ? ಹಾಗಾಗಿ ಈ ಬಡಬಡಿಕೆ. ವಾಮ ಮಾರ್ಗದ ತಮ್ಮ ರಾಜಕಾರಣವನ್ನು ಮರೆಮಾಚಿಕೊಳ್ಳಲು, ಜನರಿಂದ ಅನುಕಂಪವನ್ನು ಗಳಿಸಲು ವಿರೋಧ ಪಕ್ಷಗಳ ಮೇಲೆ ವಾಮಾಚಾರದ ಆರೋಪ. ಇವೆಲ್ಲಾ ಆಟಗಳು ನಡೆಯುತ್ತವೆಯೇ ?

ಯಾವುದು ಕಿರುಕುಳ

ಮುಖ್ಯಮಂತ್ರಿಯಾಗಿ ತಾವು ನೆಮ್ಮದಿಯಾಗಿ ಕೆಲಸ ಮಾಡಲು ರಾಜ್ಯದ ವಿರೋಧ ಪಕ್ಷಗಳು ಬಿಡುತ್ತಿಲ್ಲ. ನಿರಂತರ ಕಿರುಕುಳ ನೀಡುತ್ತಿವೆ ಎಂದೂ ಕೂಡ ಯಡಿಯೂರಪ್ಪ ಈ ಸಂದರ್ಭದಲ್ಲಿ ಗೋಳಾಡಿದ್ದಾರೆ. ತಾವು ಅಧಿಕಾರದಲ್ಲಿದ್ದಾಗ ಹಲವು ಭ್ರಷ್ಟಾಚಾರಗಳನ್ನು ಮಾಡಿದವರು, ತಮ್ಮ ತಮ್ಮ ಕುಟುಂಬ ವರ್ಗ, ಬಂಧು ಬಾಂಧವರು, ಬೇಕಾದವರಿಗೆ ಏನೇನೋ ಅನುಕೂಲ ಮಾಡಿಕೊಂಡವರು ಈಗ ನಾನು ಅದೇ ಕೆಲಸ ಮಾಡಿದರೆ ಗದ್ದಲ ಮಾಡಿ ಖುರ್ಚಿಗೇ ಸಂಚಕಾರ ತರಲು ನೋಡುತ್ತಾರಲ್ಲಪ್ಪ..... ಎಂಬುದು ಯಡಿಯೂರಪ್ಪನವರ ಹಳಹಳಿಕೆಯಾಗಿದೆ. ಅದನ್ನು ಹಲವು ಸಾರಿ ಪರೋಕ್ಷವಾಗಿ ಅವರು ಹೇಳಿಯೂ ಇದ್ದಾರೆ.

ಇಲ್ಲಿ ಜನರು ಒಂದು ವಿಚಾರವನ್ನು ಮುಖ್ಯವಾಗಿ ಗಮನಿಸಬೇಕಾಗಿದೆ. ಆಡಳಿತ ಪಕ್ಷವು ನಡೆಸುವ ಹಗರಣ, ಅಕ್ರಮಗಳನ್ನು,ಭ್ರಷ್ಟಾಚಾರಗಳನ್ನು ನೋಡಿಕೊಂಡು ಸುಮ್ಮನಿರುವುದಕ್ಕಾ ಜನತೆ ವಿರೋಧ ಪಕ್ಷಗಳಿಗೆ ಮತ ನೀಡಿರುವುದು ? ತಾವು ದಶಕಗಳ ಕಾಲ ವಿರೋಧ ಪಕ್ಷದ ಮುಖಂಡರಾಗಿದ್ದಾಗ ಹೀಗೆ 'ಕಿರುಕುಳ ನೀಡಿಲ್ಲ' ಎಂದು ಯಡಿಯೂರಪ್ಪನವರು ಹೇಳುವುದಾದರೆ ಅದು ಆಗ ವಿರೋಧ ಪಕ್ಷದ ಮುಖಂಡರಾಗಿದ್ದ ಯಡಿಯೂರಪ್ಪ ರಾಜ್ಯದ ಜನತೆಯ ನಿರೀಕ್ಷೆಯಂತೆ ಕೆಲಸ ಮಾಡದೆ, ನಡೆದಿರುವ ಭ್ರಷ್ಟಾಚಾರ, ಸ್ವಜನಪಕ್ಷಪಾತಗಳಿಗೆ ಕಣ್ಣು ಮುಚ್ಚಿಕೊಳ್ಳುತ್ತಾ, ಹಾಗೂ ಅದರಲ್ಲೂ ತಮ್ಮ ಕಡೆಯವರಿಗೆ ಕೆಲವು ಪಾಲು ಕೊಡಿಸಲು ಪ್ರಯತ್ನಿಸುತ್ತಾ ಇದ್ದರು ಎಂದಾಗುತ್ತದೆ.

ಅಂದರೆ ಯಡಿಯೂರಪ್ಪನವರು ಈಗ ಮುಖ್ಯಮಂತ್ರಿಯಾಗಿ ಜನರ ನಿರೀಕ್ಷೆಯಂತೆ ಕೆಲಸ ಮಡುವಲ್ಲಿಯೂ ವಿಫಲರಾಗಿದ್ದಾರೆ. ಮಾತ್ರವಲ್ಲ ಹಿಂದೆ ಪ್ರತಿಪಕ್ಷ ಮುಖಂಡರಾಗಿಯೂ ವಿಫಲರಾಗಿದ್ದಾರೆ ಎಂಬುದು ಈಗ ಸಾಬೀತಾಗುತ್ತಿದೆ. ಅಲ್ಲವೇ ?

ಹೇಳುವುದು ಒಂದು ಮಾಡುವುದು.....

ಯಡಿಯೂರಪ್ಪನವರ ಕತೆಗಳಲ್ಲಿ "ಹೇಳುವುದು ಒಂದು, ಮಾಡುವುದು ಒಂದು" ಎಂಬುದಕ್ಕೆ ಬೇಕಾದಷ್ಟು ಉದಾಹರಣೆಗಳು ಸಿಗುತ್ತವೆ. ಇಲ್ಲಿ ಅಂತಹ ಒಂದು ಸಣ್ಣ ಕತೆ ಇದೆ. ಕತೆ ಕೇಳಿ ಕಾರಣ ನೀವೇ ಊಹಿಸಿ.

ತುಮಕೂರಿನಲ್ಲಿ ಸಿದ್ದಗಂಗಾ ಮಠವಿದೆ. ಮಠದ ಹಿರಿಯ ಸ್ವಾಮೀಜಿಯವರಾದ ಡಾ। ಶಿವಕುಮಾರ ಸ್ವಾಮಿಯವರಿಗೆ ನೂರು ವರ್ಷ ದಾಟಿದೆ. ಅವರ ಆರೋಗ್ಯದ ದೃಷ್ಟಿಯಿಂದ ಯಾರೂ ಅವರನ್ನು ಪಾದಪೂಜೆಗಾಗಲೀ ಅಥವಾ ಯಾವುದೇ ಸಮಾರಂಭ ಗಳಿಗಾಗಲೀ ಹೊರಗೆಲ್ಲೂ ಕರೆದೊಯ್ಯಬಾರದು ಎಂದು ಮುಖ್ಯಮಂ ಯಡಿಯೂರಪ್ಪ ಸುಮಾರು ಒಂದು ವರ್ಷದ ಹಿ ಒಂದು ಕಟ್ಟಪ್ಪಣೆ ಮಾಡಿದ್ದರಂತೆ. ವರ್ಷ ತುಂಬು ಮೊದಲೇ ಯಡಿಯೂರಪ್ಪನವರೇ ತಮ್ಮದೇ ಕಟ್ಟ ಮುರಿದಿದ್ದಾರೆ. ವಿಷಯ ಏನೆಂದರೆ ರಾಜ್ಯದ ಸುತ್ತೂ ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಹೊರಟ ಯಡಿಯೂರಪ್ಪನವರು ಹೆಲಿಕಾಪ್ಟರ್‌ನ ತುಮಕೂರಿಗೆ ಬಂದು ಡಾ। ಶಿವಕುಮಾ ಸ್ವಾಮೀಜಿಯವರನ್ನು ಕರೆದೊಯ್ದು ಮತ್ತೆ ಅಲ್ಲಿ ತಂದು ಬಿಟ್ಟು ಹೋಗಿದ್ದಾರೆ.

ಯಡಿಯೂರಪ್ಪನವರು ತಮ್ಮದೇ ಆದೇಶವ ತಾವೇ ಮುರಿದರು ಎಂಬುದು ಒಂದು ಪ್ರಶ್ನೆ ಮು ಯಾಕೆ ಮುರಿದರು ? ಎಂಬುದು ಮತ್ತೂ ಒಂ ಪ್ರಶ್ನೆ.

ಯಡಿಯೂರಪ್ಪ ಕುರ್ಚಿ ಅಲುಗಾಡು ಹೋದಂತೆ, ಕಂಪನದ ತೀವ್ರತೆ ಹೆಚ್ಚಾಗು ಹೋದಂತೆ ಅವರಿಗೆ ಸಮಾಜದ ಕುರಿತ ಚಿ ಕಾಳಜಿಯೂ ಹೆಚ್ಚುತ್ತಾ ಹೋಗುತ್ತದೆ. ಸಮಾಜ ಬೆಂಬಲದಿಂದಲೇ ತಾವು ಇಷ್ಟು ಮೇಲೇರಿದ್ದೆ ಎಂಬುದು ಅವರ ನಂಬಿಕೆ. ಹಾಗೂ ತಾವು ಏ ಮಾಡಿದರೂ ಸಮಾಜ ತಮ್ಮನ್ನು ಕಾಪಾಡುತ್ತದೆ ಎ ನಂಬಿಕೆ ಅವರದ್ದು. ಸಮಾಜ ಅವರನ್ನು ಕಾಪಾಡುತ್ತ ಅಂತ ಮುಂದೆ ಇತಿಹಾಸವೇ ಹೇಳಬೇಕು ಈ 'ಸಮಾಜ' ಅಂದರೆ ಏನು ಅಂತ ನೀ ಯಡಿಯೂರಪ್ಪನವರನ್ನು ಕೇಳಬೇಕು ಸ್ವಲ್ಪ ಮೆ ಪಿಸುದನಿಯಲ್ಲಿ ಕೇಳಿದರೆ ಹೇಳಿಯಾರು.

"ಸಾಮಾಜಿಕ ಭದ್ರತೆ ಮಹಿಳಾ ಕೂಲಿಕಾರರಿಗೆ ಸಿಗಲಿ

ಪುಟ 5 ರಿಂದ

ಹೆಣ್ಣು ಮಕ್ಕಳನ್ನು ಸೀರೆ ಬೇಡುವ ಭಿಕ್ಷುಕರನ್ನಾಗಿಸಿದ್ದಾರೆ ಯಡಿಯೂರಪ್ಪ

-ಕೆ.ನೀಲಾ

ಮನೆಯ ಒಳಗೂ ದುಡಿದು, ಮನೆಯ ಹೊರಗೂ ದುಡಿದು, ಜೀವಕ್ಕೆ ಜನ್ಮ ನೀಡಿ ಪೋಷಿಸುವ ಜವಾಬ್ದಾರಿಯನ್ನು ಹೊರುವ ಮಹಿಳೆಯರನ್ನು, ಸಮಾಜಕ್ಕೆ ತಿನ್ನುವ ಅನ್ನ ನೀಡುವ ಮಹಿಳೆಯರನ್ನು ಬಿಜೆಪಿ ಸರ್ಕಾರ ಸೀರೆಗಾಗಿ ಸಾಲಿಗೆ ನಿಂತು ಬೇಡುವ ಭಿಕ್ಷುಕಿಯರನ್ನಾಗಿಸಿವೆ. ಕಳಪೆ ಸೀರೆಗಾಗಿ ಬಡ ಮಹಿಳೆಯರು ಅಲೆದಾಡುವ ಸ್ಥಿತಿಯನ್ನು ತರಲಾಗಿದೆ.

ದುಡಿಯುವ ಕೂಲಿಕಾರ ಮಹಿಳೆಯರಿಗೆ ಪುರುಷರಿಗೆ ಕೊಡುವಷ್ಟು ಕೂಲಿ ಕೊಡುವುದಿಲ್ಲ. ಕೂಲಿಕಾರರ ಹೆಣ್ಣು ಮಕ್ಕಳ ಮೇಲೆ ಅತ್ಯಾಚಾರ, ಲೈಂಗಿಕ ದೌರ್ಜನ್ಯ ನಡೆಯುತ್ತಿದೆ. ಇಂಥ ಮಹಿಳೆಯರಿಗೆ ರಕ್ಷಣೆ ಸಿಗುವ ಸ್ಥಿತಿ ಕೂಡ ನಮ್ಮಲ್ಲಿಲ್ಲ. ಇಂಥ ಸಮಸ್ಯೆಗಳ ವಿರುದ್ಧ ಮಹಿಳಾ ಕೂಲಿಕಾರರು ಸಂಘಟಿತರಾಗಿ ಹೋರಾಡಬೇಕೆಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಕೇಂದ್ರ ಸಮಿತಿ ಸದಸ್ಯರಾದ ಕೆ.ನೀಲಾ ಅವರು ಕರೆ ನೀಡಿದರು.

ಅಖಿಲ ಭಾರತ ಕೃಷಿ ಕೂಲಿಕಾರರ ಸಂಘಟನೆಯ ಅ.ಭಾ.ಅಧ್ಯಕ್ಷರಾದ ಪಿ.ರಾಮಯ್ಯ, ರಾಜ್ಯ ಉಪಾಧ್ಯಕ್ಷರಾದ ಜಿ.ಎನ್.ನಾಗರಾಜ್, ಮಾಜಿ ಶಾಸಕರಾದ ಜಿ.ವಿ.ಶ್ರೀರಾಮರೆಡ್ಡಿ ಅಂಗನವಾಡಿ ನೌಕರರ ಸಂಘಟನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ಸಮಾವೇಶದ ಸ್ವಾಗತ ಸಮಿತಿಯ ಅಧ್ಯಕ್ಷರಾದ ಎಸ್.ವರಲಕ್ಷ್ಮಿ ಮುಂತಾದವರು ಸಮಾರಂಭದಲ್ಲಿ ಮಾತನಾಡಿದರು.

ಆರಂಭದಲ್ಲಿ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘಟನೆಯ ರಾಜ್ಯ ಅಧ್ಯಕ್ಷರಾದ ನಿತ್ಯಾನಂದ ಸ್ವಾಮಿಯವರು ಸಂಘದ ಧ್ವಜಾರೋಹಣವನ್ನು ನೆರವೇರಿಸಿದರು. ರಾಜ್ಯ ಪ್ರಧಾನ ಕಾರ್ಯದರ್ಶಿ ಚಂದ್ರಪ್ಪ ಹೊಸ್ಕೇರಾ ಅವರು ವಿಷಯ ಪ್ರಸ್ತಾಪಿಸಿದರು.

ಬಹು ಸಂಸ್ಕೃತಿ

ಪುಟ 11 ರಿಂದ

ನಡೆದಿದ್ದರೂ, ಸಾಹಿತ್ಯ, ನಾಟಕ, ಸಿನಿಮಾ ಮುಂತಾದ ನಾಡಿನ (ಕೆಲವೇ ಅಪವಾದಗಳನ್ನು ಬಿಟ್ಟರೆ) ಸಾಂಸ್ಕೃತಿಕ ವಲಯ ಇನ್ನೂ ಜಾತ್ಯತೀತ ಮೌಲ್ಯಗಳನ್ನು ಉಳಿಸಿಕೊಂಡಿರುವುದು ಸಂತೋಷದ ಸಂಗತಿ. ಕೋಮುವಾದ ಮತ್ತು ಜಾಗತೀಕರಣದ ಸಾಂಸ್ಕೃತಿಕ ದಾಳಿಗಳ ವಿರುದ್ಧ ಸಾಕಷ್ಟು ಪ್ರತಿರೋಧ ಕಂಡು ಬಂದರೂ, ಅದು ಪ್ರಜಾಸತ್ತಾತ್ಮಕ ಜನಪರ ಸಾಮಾಜಿಕ ಬದಲಾವಣೆ-ಪರ ಹಾದಿಯಲ್ಲಿದೆ ಯೆಂದು ಹೇಳುವಂತಿಲ್ಲ... ಕೊಳ್ಳುಬಾಕತನ, ಮೌಢ್ಯ, ಗೊಡ್ಡು ಸಾಂಪ್ರದಾಯಿಕತೆ, ಪ್ರತಿಗಾಮಿ ಚಿಂತನೆಗಳನ್ನು ರಭಸವಾಗಿ ಬಿತ್ತುತ್ತಿರುವ ರೇಡಿಯೊ-ಟಿವಿ ಚಾನೆಲುಗಳ ಹೆಚ್ಚುತ್ತಿರುವ ಸಾಂಸ್ಕೃತಿಕ ಪ್ರಭಾವ ಒಂದು ಕಡೆ. ಇನ್ನೂ ಆರೋಗ್ಯಕರವಾಗಿರುವ ಸಾಹಿತ್ಯ, ನಾಟಕ, ಪ್ರಿಂಟ್ ಮಾಧ್ಯಮ ಎಲ್ಲಾ ಜನವಿಭಾಗಗಳನ್ನು ಮುಟ್ಟುವಲ್ಲಿ ವೈಫಲ್ಯತೆ ಮತ್ತು ಕುಗ್ಗುತ್ತಿರುವ ಸಾಂಸ್ಕೃತಿಕ ಪ್ರಭಾವ ಇನ್ನೊಂದು ಕಡೆ. ಇದು ಸಾಂಸ್ಕೃತಿಕ ವಲಯದಲ್ಲಿ ನಮ್ಮ ಮುಂದೆ ಇರುವ ತೀವ್ರ ಸವಾಲು......

- ರಾಜ್ಯ ಸಮ್ಮೇಳನದ ವರದಿಯಿಂದ

* * *

ಬಹುಸಂಸ್ಕೃತಿಯ ರಕ್ಷಣೆಗೆ

... ಬಹು ಸಂಸ್ಕೃತಿ ಭಾರತದ ಪರಿಕಲ್ಪನೆಯ ಮುಖ್ಯ ಭಾಗ. ಭಾರತದ ವಿವಿಧ ಜಾತಿ, ಪ್ರದೇಶ, ಜನಾಂಗ, ಭಾಷೆ, ಮತ-ಧರ್ಮಗಳಿಗೆ ತನ್ನದೇ ಆದ ಸಂಸ್ಕೃತಿ ಇದೆ. ಈ ಬಹು ಸಂಸ್ಕೃತಿಗಳ ಅನನ್ಯತೆ ಕಾಪಾಡುವುದು ದೇಶದ ಐಕ್ಯತೆ-ಸಮಗ್ರತೆ ಕಾಪಾಡುವ ನಮ್ಮೆಲ್ಲರ ಕರ್ತವ್ಯದ ಭಾಗ. 1980 ರ ದಶಕ ವರೆಗೂ ಪ್ರಾಯೋಗಿಕ ಜಾರಿಯಲ್ಲಿ ನ್ಯೂನ ಗಳಿದ್ದಾಗ್ಯೂ, ಇದು ಕನಿಷ್ಟ ಸಾರ್ವತ್ರಿಕ ಸಹಮತ ಆಶಯವಾಗಿತ್ತು - ಸಂಘ ಪರಿವಾರದ ಏಕ-ಧರ್ಮ ಏಕ-ಭಾಷೆ ಆಧಾರಿತ ಸಂಸ್ಕೃತಿಯ ಅಪವಾದ ಬಿಟ್ಟ 1990ರ ದಶಕದಿಂದ ಬಹುಸಂಸ್ಕೃತಿಯ ಪರಿಕಲ್ಪನೆ ಮೇಲೆ ನೇರ ದಾಳಿ ಆರಂಭವಾಗಿದೆ. ಬಾ ಮಸೀದಿಯನ್ನು ಉರುಳಿಸುವದರಿಂದ ಆರಂಭವಾ ಗುಜರಾತ್ ನರಮೇಧ, ಒರಿಸ್ಸಾದ ಕಂದಮಲ್ ನ ಕ್ರಿಶ್ಚಿಯನ್ನರ ಮೇಲೆ ಸಾಮೂಹಿಕ ದಾಳಿಗಳ ಮೂ ಇದು ಸತತವಾಗಿ ವ್ಯಾಪಕವಾಗಿ ನಡೆದಿದೆ.

ಕರ್ನಾಟಕದಲ್ಲಿ ಬಿಜೆಪಿ ಸರ್ಕಾರದ ಪಾಲ್ಗೊಳ್ಳುವ ಸ್ಥಿತಿ ಬಂದಾಗ್ಗಿಂದ ನಮ್ಮ ರಾಜ್ಯದಲ್ಲಿ ಬಹುಸಂಸ್ಕೃತಿಯ ಮೇಲೆ ದಾಳಿ ತೀವ್ರವಾ ನಡೆದಿದೆ....ಬ್ರಾಹ್ಮಣ ಮಠಗಳಿಗೆ ದೇವಸ್ಥಾನ ಹಸ್ತಾಂತರ, ಜಾನುವಾರು ಹತ್ಯೆ ನಿಷೇಧ ಮಸೂ ಶಾಲಾ ಮಕ್ಕಳಿಗೆ ಭಗವದ್ಗೀತೆ ಕಾರ್ಯಕ್ರಮ, ಮ ಸ್ಮೃತಿ ಭೋಧನೆಯ ಸಲಹೆ, ಉರ್ದು ಅಕಾಡೆಮಿ ಸದಸ್ಯರ ವಜಾ -ಇತ್ಯಾದಿ ಕ್ರಮಗಳು ಏಕ ಸಂಸ್ಕೃತಿ ಹೇರಿಕೆಯ ಅಜೆಂಡಾದ ಭಾಗ. ಬಿಜೆಪಿ ಸರ್ಕಾ ಮುಂದುವರೆದರೆ ಇನ್ನಷ್ಟು ಇಂತಹ ಯೋಜನೆ ಹುಟ್ಟಿಕೊಳ್ಳಲಿವೆ. ಜಾರಿಗೆ ಬರಲಿವೆ... ಕರ್ನಾಟ ಬಹು ಸಂಸ್ಕೃತಿಯ ರಕ್ಷಣೆಗೆ ಮತ್ತು ಏಕ ಸಂಸ್ಕೃತಿ ಹೇರಿಕೆಯ ಯೋಜನೆಗಳ ಜಾರಿಗೆ ತೀವ್ರ ಪ್ರತಿರೋ ಒಡ್ಡಲು, ರಾಜ್ಯದ ಪ್ರಜ್ಞಾವಂತ ಬುದ್ಧಿಜೀವಿಗಳ ಸಾಹಿತಿಗಳು ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳಿಗೆ ಸಮ್ಮೇಳನ ಕರೆ ನೀಡುತ್ತದೆ.

- ಸಮ್ಮೇಳನ ಅಂಗೀಕರಿಸಿದ ನಿರ್ಣಯದ ಭಾ

ಜನಶಕ್ತಿ
ಕನ್ನಡ ವಾರಪತ್ರಿಕೆ

ಹಗರಣಗಳ ಸರಮಾಲೆ : ಈಗ ಬಂಧನ ಸರಣಿ !

ವಲಿ ಯುಪಿಎ-2 ದೂರಸಂಪರ್ಕ ಮಂತ್ರಿಗಳು ತರಂಗಾಂತರ ಹಂಚಿಕೆಯಲ್ಲಿ ಸಿಎಜಿ ಹೇಳಿದಂತೆ ಕಾರದ ಬೊಕ್ಕಸಕ್ಕೆ ನಷ್ಟವೇನೂ ಆಗಿಲ್ಲ ಎಂದು ಳಿರುವ ಎರಡು ವಾರದೊಳಗೆ ಮಾಜಿ ರಸಂಪರ್ಕ ಮಂತ್ರಿಗಳನ್ನು ಕ್ರಿಮಿನಲ್ ಪಿತೂರಿ ತ್ತು ಭ್ರಷ್ಟಾಚಾರದ ಆಪಾದನೆಯ ಮೇಲೆ ಧಿಸಲಾಗಿದೆ. ಜತೆಗೆ ಅವರ ವೈಯಕ್ತಿಕ ರ್ಯದರ್ಶಿ ಆರ್.ಕೆ.ಚಂದೋಲಿಯ ಮತ್ತು ಆಗ ರಸಂಪರ್ಕ ಕಾರ್ಯದರ್ಶಿಯಾಗಿದ್ದ ಸಿದ್ಧಾರ್ಥ ಹುರರವರನ್ನು ಕೂಡ ಬಂಧಿಸಲಾಗಿದೆ. ಸಿಬಿಐ ರಡು ತಿಂಗಳ ಹಿಂದೆ ರಾಜೀನಾಮೆ ನೀಡಿದ್ದ ಆಗಿನ ರಸಂಪರ್ಕ ಮಂತ್ರಿಗಳನ್ನು ರಾಜೀನಾಮೆಯ ತರ ನಾಲ್ಕು ಬಾರಿ ಕರೆಸಿಕೊಂಡು ವಿಚಾರಣೆ ಸಿದ ನಂತರ ಈಗ ಬಂಧಿಸಲಾಗಿದೆ.

ಕಾನೂನು ತನ್ನ ಕೆಲಸ ಮಾಡುತ್ತಿದೆ ಎಂದು ಂಗ್ರೆಸ್ ವಕ್ತಾರರು ಪ್ರತಿಕ್ರಿಯಿಸಿದ್ದಾರೆ. ಸಿಬಿಐ ಕ್ಟೋಬರ್ 2009ರಲ್ಲೇ ದೂರಸಂಪರ್ಕ ಇಲಾಖೆಯ ನಾಮಧೇಯ ಅಧಿಕಾರಿಗಳ ಮೇಲೆ ಮೊಕದ್ದಮೆ ಕಿತ್ತು. ಆದರೆ 'ಕಾನೂನು ಕೆಲಸ ಾಡ'ಲಾರಂಭಿಸಿದ್ದು ಸರಿಯಾಗಿ ಒಂದು ವರ್ಷದ ತರ ಸುಪ್ರಿಂ ಕೋರ್ಟ್ ಸಿಬಿಐನ್ನು ತರಾಟೆಗೆ ೆದುಕೊಂಡ ನಂತರವೇ, ಆಗಿನ ದೂರಸಂಪರ್ಕ ಂತ್ರಿಗಳ ವಿಚಾರಣೆ ಆರಂಭಿಸಿದ್ದು ಅವರು ಜೀನಾಮೆ ಕೊಡಬೇಕಾಗಿ ಬಂದ ನಂತರವೇ ಎಂಬುದನ್ನು ಗಮನಿಸಬೇಕು. ಫೆಬ್ರುವರಿ 10ರೊಳಗೆ ತನಿಖೆಯ ವರದಿ ಸಲ್ಲಿಸಬೇಕು ಎಂದು ಸುಪ್ರಿಂಕೋರ್ಟ್ ಸಿಬಿಐ ಗೆ ಮತ್ತು ಜಾರಿ ನಿರ್ದೇಶನಾಲಯಕ್ಕೆ ಹೇಳಿತ್ತು. ಕಾನೂನಿಗೆ ತನ್ನ ಕೆಲಸ ಮಾಡಲು ಇಷ್ಟು ಸಮಯ ಏಕೆ ಬೇಕಾಯಿತು ಎಂದು ಕಾಂಗ್ರೆಸ್ ವಕ್ತಾರರು ಹೇಗೆ ತಾನೇ ಹೇಳಿಯಾರು!.

ಇದಕ್ಕೆ ಎರಡು ದಿನಗಳ ಮೊದಲು ಯುಪಿಎ ಸರಕಾರ ನೇಮಿಸಿದ ಶಿವರಾಜ್ ಪಾಟೀಲ್ ಆಯೋಗ ತನ್ನ ವರದಿಯನ್ನು ದೂರ ಸಂಪರ್ಕ ಮಂತ್ರಿಗಳಿಗೆ ಸಲ್ಲಿಸಿದೆ. ಈ 150 ಪುಟಗಳ ವರದಿಯಲ್ಲಿ 2001ರಿಂದ 2009ರ ನಡುವೆ ತರಂಗಾಂತರ ನೀಡಿಕೆಯಲ್ಲಿ ಆಗಿರುವ ಲೋಪಗಳ ಬಗ್ಗೆ, ಅವನ್ನು ಮಾಡಿದ ಅಧಿಕಾರಿಗಳ ಬಗ್ಗೆ ವಿವರಗಳಿವೆಯಂತೆ. ಹಿಂದಿನ ದೂರಸಂಪರ್ಕ ಮಂತ್ರಿಯ ಬಗ್ಗೆ ಕೇಳಿದಾಗ ಅವರು ಟಿಪ್ಪಣಿ ಮಾಡಲು ನಿರಾಕರಿಸಿದರು. ಅದು ಕ್ರಿಮಿನಲ್ ಅಪರಾಧದ ಪ್ರಶ್ನೆ, ಅದನ್ನು ಸಿಬಿಐ ತನಿಖೆ ಮಾಡುತ್ತಿದೆ ಎಂದಿದ್ದರು.

ಸುಪ್ರಿಂ ಕೋರ್ಟಿನಲ್ಲಿ ಈ ಕುರಿತ ಮುಂದುವರೆದ ವಿಚಾರಣೆಯಲ್ಲಿ ಸರ್ವೋಚ್ಚ ನ್ಯಾಯಾಲಯ 2ಜಿ ತರಂಗಾಂತರ ಲೈಸೆನ್ಸ್‌ಗಳನ್ನು ರದ್ದು ಮಾಡುವುದಾದರೆ ಅದಕ್ಕೆ ಕೇವಲ ಸಿಎಜಿ ವರದಿಯಷ್ಟೇ ಕಾರಣವಾಗುವುದಿಲ್ಲ, ಸರಕಾರ ಈಗ ಈ ವಿಷಯದಲ್ಲಿ ಏನು ಮಾಡುವುದಿದ್ದರೂ ಅದು ನ್ಯಾಯಾಲಯದ ಮುಂದಿರುವ ಅರ್ಜಿಗಳ ಫಲಿತಾಂಶವನ್ನು ಅವಲಂಬಿಸಿರ ಬೇಕಾಗಿದೆ ಎಂದಿದೆ.

★

ಕಲ್ಮಾಡಿಯದ್ದು ಮುಂದಿನ ಸರದಿ?

ಈ ಬಂಧನ ಸರಣಿಯಲ್ಲಿ ಕಾಮನ್ವೆಲ್ತ್ ಕ್ರೀಡಾಕೂಟದ ಮುಖ್ಯಸ್ಥರ ಸ್ಥಾನದಿಂದ ಬರ್ಖಾಸ್ತ್ ಆಗಿರುವ ಸುರೇಶ್ ಕಲ್ಮಾಡಿಯವರದ್ದು ಮುಂದಿನ ಸರದಿ ಎಂದು ಹೇಳಲಾಗುತ್ತಿದೆ. ಸಿಬಿಐ ಈಗಾಗಲೇ ಇವರ ವಿಚಾರಣೆ ನಡೆಸಿದ್ದು ಯುಪಿಎ-2 ಸರಕಾರದ ಮೂರು ಮಹಾಹಗರಣಗಳಲ್ಲಿ ಇದು ನಂತರದ ಸ್ಥಾನದಲ್ಲಿದೆ. ತನ್ನ ಮೇಲಿರುವ 'ಕಳಂಕವನ್ನು ತೊಳೆದುಕೊಳ್ಳುವ' ತರಾತುರಿಯಲ್ಲಿ ಕಾಂಗ್ರೆಸ್ ಇದೆಯಂತೆ. ಈ ನಡುವೆ ಈ ಹಗರಣದ ತನಿಖೆ ನಡೆಸಲು ನೇಮಿಸಿದ ಶುಂಗ್ಲು ಸಮಿತಿಯ ಪ್ರಕಾರ ಈ ಹಗರಣದ ಮೊತ್ತ 28000 ಕೋಟಿ ರೂ.ಗಳು. ಇದನ್ನು ಮೂರೇ ತಿಂಗಳಲ್ಲಿ ತನಿಖೆ ಮಾಡುವುದು ಹೇಗೆ ಎಂದು ಪ್ರಶ್ನಿಸಿರುವ ಶುಂಗ್ಲು ಅವರು ಸರಕಾರಕ್ಕೆ ಮಧ್ಯಂತರ ವರದಿ ಲ್ಲಿಸಿದ್ದು ಸಮಿತಿಯ ಕಾರ್ಯಾವಧಿಯನ್ನು ವಿಸ್ತರಿಸಲು ಕೇಳಿದ್ದಾರೆ. ಅದನ್ನೀಗ ಮಾರ್ಚ್ 31ರ ವರೆಗೆ ವಿಸ್ತರಿಸಲಾಗಿದೆ.

★

ಆದರ್ಶ ಹಗರಣ: ಮಾಜಿ ಮುಖ್ಯ ಮಂತ್ರಿಯ ಮೇಲೆ ಎಫ್‌ಐಆರ್

ಸಿಬಿಐ ಆದರ್ಶ ಹೌಸಿಂಗ್ ಹಗರಣದಲ್ಲಿಯೂ ಚುರುಕಾಗಿರುವಂತೆ ಕಾಣುತ್ತದೆ. ರಾಜೀನಾಮೆ ಕೊಟ್ಟ ಯುಪಿಎಯ ಎರಡು ಪಕ್ಷಗಳ ಸಮ್ಮಿಶ್ರ ಸರಕಾರದ ಮುಖ್ಯಮಂತ್ರಿ, ನಿವೃತ್ತ ಸೇನಾಧಿಕಾರಿಗಳು ಸೇರಿದಂತೆ 13 ಮಂದಿಯ ಮೇಲೆ ಎಫ್‌ಐಆರ್ ಹಾಕಿದೆ. ಅದರ ಮರುದಿನವೇ ಮಹಾರಾಷ್ಟ್ರ ಮತ್ತು ಬಿಹಾರದಲ್ಲಿ ಒಬ್ಬ ಕಾಂಗ್ರೆಸ್ ಮುಖಂಡರು, ಒಬ್ಬ ನಿವೃತ್ತ ಸೇನಾಧಿಕಾರಿ ಹಾಗೂ ಮತ್ತೊಬ್ಬರ ನಿವಾಸಗಳ ಮೇಲೆ ಸಿಬಿಐ ದಾಳಿ ನಡೆದಿದೆ.

ಮಾಜಿ ಕಾಂಗ್ರೆಸ್ ಮುಖ್ಯಮಂತ್ರಿಯಲ್ಲದೆ ಎಫ್‌ಐಆರ್‌ನಲ್ಲಿ ಇರುವ ಇತರ ಘಟಾನುಘಟಿಗಳ ಹೆಸರುಗಳು ಹೀಗಿವೆ: ನಿವೃತ್ತ ಲೆ|ಜ|ಪಿ.ಕೆ.ರಾಮಪಾಲ್, ಮೇಜರ್ ಜನರಲ್‌ಗಳಾದ ಆರ್.ಕುಮಾರ್ ಮತ್ತು ಟಿ.ಕೆ.ಕೌಲ್, ನಗರಾಭಿವೃದ್ಧಿ ವಿಭಾಗದ ಆಗಿನ ಪ್ರಿನ್ಸಿಪಲ್ ಸೆಕ್ರೆಟರಿ ರಮಾನಂದ ತಿವಾರಿ, ಆಗಿನ ಮುಖ್ಯಮಂತ್ರಿಗಳ ಪ್ರಮುಖ ಕಾರ್ಯದರ್ಶಿ ಸುಭಾಷ್ ಲಾಲ ಮತ್ತು ನಿವೃತ್ತ ಬ್ರಿಗೇಡಿಯರ್ ಆರ್ ಸಿ ಶರ್ಮ.

★

ಸಿವಿಸಿ ನೇಮಕ: ಅಟಾರ್ನಿ ಜನರಲ್ ಹೇಳುವುದೊಂದು, ಗ್ರಹಮಂತ್ರಿಗಳು ಹೇಳುವುದಿನ್ನೊಂದು

ಮುಖ್ಯ ವಿಚಕ್ಷಣಾ ಆಯುಕ್ತ(ಸಿವಿಸಿ)ರಾಗಿ ಪಿ.ಜೆ.ಥಾಮಸ್ ರವರ ನೇಮಕದ ಬಗ್ಗೆ ವಿಚಾರಣೆ ನಡೆಸುತ್ತಿರುವ ಸುಪ್ರಿಂ ಕೋರ್ಟ್ ಸಿವಿಸಿ ಯ ಆಯ್ಕೆ ಮಾಡುವ ಮೊದಲು ಪೂರ್ಣ ಮಾಹಿತಿಗಳನ್ನು ಆಯ್ಕೆ ಸಮಿತಿಯ ಮುಂದೆ ಸಲ್ಲಿಸಲಾಗಿತ್ತೇ ಎಂದು ನೇರವಾಗಿ ಕೇಳಿದಾಗ ಯುಪಿಎ-2 ಸರಕಾರದ ಪರವಾಗಿ ಅಟಾರ್ನಿ-ಜನರಲ್ ವಾಹನ್ವಾತಿಯವರ ಉತ್ತರ 'ಇಲ್ಲ' ಎಂಬುದು. ಆದರೆ ಗ್ರಹಮಂತ್ರಿಗಳು ನೀಡಿರುವ ಹೇಳಿಕೆಯ ಪ್ರಕಾರ ಪಿ.ಜೆ.ಥಾಮಸ್ ರವರ ಮೇಲಿರುವ ಆಪಾದನೆ ಪಟ್ಟಿಯನ್ನು ಆಯ್ಕೆ ಸಮಿತಿ ಚರ್ಚಿಸಿದೆ.

ಯುಪಿಎ -2 ರ ನೇತೃತ್ವದಲ್ಲಿರುವ ಕಾಂಗ್ರೆಸ್ ಈ ವಿಷಯದಲ್ಲಂತೂ ಭಾರೀ ಪೇಚಿಗೆ ಸಿಕ್ಕಿಕೊಂಡಂತಿದೆ. ಥಾಮಸ್ ಅವರನ್ನು ರಾಜೀನಾಮೆ ಕೊಡುವಂತೆ ಕೇಳಲಾಗಿದ್ದು ಆದಕ್ಕೆ ಥಾಮಸ್ ನಿರಾಕರಿಸಿದ್ದಾರೆ ಎಂದು ಮಾಧ್ಯಮಗಳಲ್ಲಿ ವರದಿಯಾಗಿದೆ. ಒಮ್ಮೆ ನೇಮಕವಾದ ಮೇಲೆ ಸಿವಿಸಿ ಯನ್ನು ತೆಗೆದು ಹಾಕುವಂತಿಲ್ಲ. ಅವರ ಮೇಲೆ 'ಮಹಾ ಅಭಿಯೋಗ' ದ ನಂತರವೇ ತೆಗೆದು ಹಾಕಲು ಸಾಧ್ಯ. ಆದರೆ ಥಾಮಸ್ ಮೇಲೆ ಆಪಾದನೆ ಸಿವಿಸಿ ಯ ಕರ್ತವ್ಯ ನಿರ್ವಹಣೆಯಲ್ಲಲ್ಲ, ಅದರ ಮೊದಲಿನ ಕೆಲಸದಲ್ಲಿ. ಈ ನೇಮಕ ಮಾಡಿದ್ದು ಕಾಂಗ್ರೆಸ್ ಅಲ್ಲ, ಸರಕಾರ ಮಾಡಿದ್ದು, ಹೀಗಿರುವಾಗ ತಾವೇಕೆ ಆದಕ್ಕೆ ಪ್ರತಿಕ್ರಿಯಿಸಬೇಕು ಎಂಬುದು ಒಬ್ಬ ಕಾಂಗ್ರೆಸ್ ವಕ್ತಾರರ ಉತ್ತರವಾದರೆ, ಇನ್ನೊಬ್ಬ ವಕ್ತಾರರು 'ಪ್ರತಿದಿನ ಕೋರ್ಟಿನಲ್ಲಿ ಏನಾಯ್ತು ಎಂಬ ವೀಕ್ಷಕ ವಿವರಣೆ ಸರಕಾರಕ್ಕೂ ಒಳ್ಳೆಯದಲ್ಲ, ನ್ಯಾಯಾಂಗಕ್ಕೂ ಒಳ್ಳೆಯದಲ್ಲ' ಎಂದರು; ಮತ್ತೊಬ್ಬ ವಕ್ತಾರರು ಇದು 'ಸರಕಾರ ಮತ್ತು ನ್ಯಾಯಾಂಗದ ನಡುವಿನ ಸಂವಾದ' ಎಂದರು!



ವಿದ್ಯಾರ್ಥಿಗಳಿಗೆ ಕಾಲ್ಪಟ್ಟಿ: ಉಚ್ಚ 'ಸಾಮರಿಕ ಸಂಬಂಧ'ಗಳ ಫಲ!

ಅಮೆರಿಕಾದ ಕ್ಯಾಲಿಫೋರ್ನಿಯದ ಟ್ರೈವ್ಯಾಲಿ ಶ್ವವಿದ್ಯಾಲಯ ಎಂಬ ಖಾಸಗಿ .ವಿ.ಯೊಂದರಿಂದ ಮೋಸ ಹೋದ ಾರತೀಯ ವಿದ್ಯಾರ್ಥಿಗಳಿಗೆ ನ್ಯಾಯ ಒದಗಿಸುವ ದಲು ಅಮೆರಿಕಾದ ನ್ಯಾಯ ವ್ಯವಸ್ಥೆ ಆ ದ್ಯಾರ್ಥಿಗಳೇ ಅಪರಾಧಿಗಳೆನ್ನುವಂತೆ ಅವರ ಾಲಿಗೆ ರೇಡಿಯೋ ತರಂಗ ಸೂಸುವ ಾಲ್ಪಟ್ಟಿಗಳನ್ನು ಹಾಕಿದೆ, ಅವರು ಎಲ್ಲಿ ೋದರೂ ಗುರುತಿಸಲು ಸಾಧ್ಯವಾಗುವಂತೆ. ಈ ಬಗ್ಗೆ ಆಕ್ರೋಶ ವ್ಯಕ್ತವಾದಾಗ 'ಇದರಲ್ಲಿ ಶೇಷವೇನಿದೆ, ಕಸ್ಟಡಿಯಲ್ಲಿ ಇರುವ ಬದಲು ್ವತಂತ್ರರಾಗಿ ತಿರುಗಲು ಬಿಟ್ಟಿದ್ದೇವಲ್ಲ' ಎಂದು ಾರತದಲ್ಲಿ ಅಮೆರಿಕಾದ ರಾಯಭಾರಿ ಕಚೇರಿಯ ಅಧಿಕಾರಿಯೊಬ್ಬನ ಭಂಡತನದ ಹೇಳಿಕೆ ಾರತೀಯರ ಆಕ್ರೋಶವನ್ನು ಇನ್ನೂ ಹೆಚ್ಚಿಸಿದೆ.

ಹೀಗೆ ಕಾಲ್ಪಟ್ಟಿ ಹಾಕುತ್ತಿರುವಾಗಲೇ ಅಮೆರಿಕಾದ ಅಧ್ಯಕ್ಷರು ತಮ್ಮ ದೇಶ ಾರತದೊಂದಿಗೆ ಒಂದು 'ನಿಜವಾಗಿಯೂ ಾಗತಿಕ ಸಾಮರಿಕ ಪಾಲುದಾರಿಕೆ'ಯನ್ನು ಕಟ್ಟಲು ದ್ಧವಾಗಿದೆ ಎಂದು ಭಾರತದ ರಾಷ್ಟ್ರೀಯ ಭದ್ರತಾ ಲಹೆಗಾರ ಶಿವಶಂಕರ ಮೆನನ್ ರವರಿಗೆ ೇಳುತ್ತಿದ್ದರು!

ಮಧ್ಯಪ್ರಾಚ್ಯದಲ್ಲಿ

ಪುಟ 9ರಿಂದ

ಸಹಜ ಭಯದ ನಡುವೆಯೂ

ಹಲವು ತಲೆಮಾರುಗಳಿಂದ ಅರಬ್ ಜನಗಳು ದೀರ್ಘಕಾಲದ ತ್ಯಾಗ-ಬಲಿದಾನ, ಹೋರಾಟಗಳ ಹೊರತಾಗಿಯೂ ಮತ್ತೆ-ಮತ್ತೆ ವಿಶ್ವಾಸಘಾತಗಳನ್ನು ಹಲವು ಬಾರಿ ಅನುಭವಿಸಿದ್ದಾರೆ. ಇದಕ್ಕೆ ಕಾರಣವಾದ ಅಂಶಗಳು ಹಲವು. ಅವುಗಳಲ್ಲಿ ಅವರಿಗೆ ನೇತೃತ್ವ ನೀಡಿದವರ ಸಮಯಸಾಧಕತನ ಮತ್ತು ತಮ್ಮ ದೇಶಗಳಲ್ಲಿ ಅವರು ಒಂದು ತೀವ್ರಗಾಮಿ ಸ್ಥಿತ್ಯಂತರ ಸಾಧಿಸದಂತೆ ಸಾಮ್ರಾಜ್ಯಶಾಹಿಯ ಮಸಲಾವಣೆಗಳೂ ಸೇರಿವೆ. ಈ ಬಾರಿಯ ಜನತೆಯ ಉತ್ಕ್ರಾಂತಿಗಳು ಕೂಡ ಕೊನೆಗೆ ಇದೇ ಹಾದಿ ಹಿಡಿಯಬಹುದು ಎಂಬ ಸಹಜ ಭಯ ಇದ್ದೇ ಇದೆ.

ಈ ಜನತಾ ಉತ್ಕ್ರಾಂತಿ ಒಂದು ಹೊಸ ಮಾದರಿಯ ಸರ್ವಾಧಿಕಾರಶಾಹಿ ಇಸ್ಲಾಮಿಕ್ ಆಳ್ವಿಕೆಯತ್ತ ಜಾರದಂತೆ ನೋಡಿಕೊಳ್ಳುವ ಒಂದು ದಾರಿಯನ್ನು ಟ್ಯುನೀಸಿಯಾದ ಒಂದು ಪ್ರಗತಿಪರ ಪಕ್ಷ 'ಎತ್ತಾಜ್ದಿದ್' ಮುಂದಿಟ್ಟಿದೆ. ಈಗ ಟ್ಯುನೀಸಿಯಾದ ಹೊಸ ಸರಕಾರದಲ್ಲಿ ಪ್ರಾತಿನಿಧ್ಯ ಪಡೆದಿರುವ ಈ ಪಕ್ಷ ?ನಾವು ಕ್ರಾಂತಿಯನ್ನು ರಕ್ಷಿಸಬೇಕು, ಆದರೆ ನಮ್ಮ ಮಹಿಳಾ ಹಕ್ಕುಗಳ ಮತ್ತು ಧರ್ಮನಿರಪೇಕ್ಷತೆಯ ಗಳಿಕೆಗಳನ್ನು ಕೂಡ ರಕ್ಷಿಸಿಕೊಳ್ಳಬೇಕು? ಎಂದಿದೆ.

ಒಂದು ಹೊಸ ಸಮತ್ವದ ಸಮಾಜವನ್ನು ಕಟ್ಟಲು ಲಿಂಗ ಸಮಾನತೆ ಮತ್ತು ಧರ್ಮನಿರಪೇಕ್ಷತೆಯನ್ನು ಎತ್ತಿಹಿಡಿಯುವ ಪ್ರಜಾಪ್ರಭುತ್ವ ಮಾತ್ರವೇ ಗಟ್ಟಿ ಬುನಾದಿಯಾಗಲು ಸಾಧ್ಯ. ಅಮೆರಿಕಾ-ಪರ ಸರ್ವಾಧಿಕಾರಿ ಆಳ್ವಿಕೆಗಳನ್ನು ಕೂರಿಸುವ ಸಾಮ್ರಾಜ್ಯಶಾಹಿ ಕಣ್ಣೋಟ ಯಾವುದೇ ನೈಜ ಪ್ರಜಾಸತ್ತಾತ್ಮಕ ವಿರೋಧವನ್ನು ಹತ್ತಿಕ್ಕಿ ಮೂಲಭೂತವಾದಿ ಇಸ್ಲಾಮಿಕ್ ಆಳ್ವಿಕೆಗಳಿಗೆ ಹಾದಿ ಮಾಡಿಕೊಟ್ಟಿದೆ. ಇಂತಹ ಸಾಮ್ರಾಜ್ಯಶಾಹಿ ಕಣ್ಣೋಟವನ್ನು ಇಂತಹ ಒಂದು ಪ್ರಜಾಪ್ರಭುತ್ವವಾದಿ ವ್ಯವಸ್ಥೆಯನ್ನು ಸ್ಥಾಪಿಸುವ ಮೂಲಕ ಮಾತ್ರವೇ ವಿಫಲಗೊಳಿಸಲು ಸಾಧ್ಯ. ಅಮೆರಿಕಾ ಇರಾನಿನಲ್ಲಿ ಮೊಸಾದೆಘ್‌ರನ್ನು ಉರುಳಿಸಿ ಶಾಹನನ್ನು ಪ್ರತಿಷ್ಠಾಪಿಸಿ, ಅಂತಿಮವಾಗಿ ಇಸ್ಲಾಮಿಕ್ ಕ್ರಾಂತಿಗೆ ಹಾದಿ ಮಾಡಿಕೊಟ್ಟಿರುವುದರ ನೆನಪು ಈಗಲೂ ಮಧ್ಯಪ್ರಾಚ್ಯದಮೇಲೆ ಕರಿನೆರಳಿನಂತೆ ಆವರಿಸಿಕೊಂಡಿದೆ.

ಅರಬ್ ಜಗತ್ತಿನ ಜನಗಳು ತಮ್ಮ ಪ್ರದೇಶದಲ್ಲಿ ಒಂದು ಹೊಸ ಇತಿಹಾಸವನ್ನು ನಿರ್ಮಿಸುವ ತಮ್ಮ ಪ್ರಯತ್ನಗಳಲ್ಲಿ ಸರ್ವ ಯಶಸ್ಸನ್ನು ಗಳಿಸುವಂತಾಗಲಿ ಎಂದು ನಾವು ಹಾರೈಸುತ್ತೇವೆ.

ಪುಟ್ಟಣ್ಣ ಕಣಗಾಲ್ ಥಿಯೇಟರ್ ಪುನರಾರಂಭಿಸಲು ಡಿವೈಎಫ್ಐ ಸಹಿ ಸಂಗ್ರಹ ಚಳುವಳಿ

ಕನ್ನಡ ಚಿತ್ರರಂಗ ಕಂಡ ಹೆಸರಾಂತ ನಿರ್ದೇಶಕ ಪುಟ್ಟಣ್ಣ ಕಣಗಾಲ್ ಥಿಯೇಟರ್ ನವೀಕರಣದ ಹೆಸರಲ್ಲಿ ಮುಚ್ಚಿ 5 ವರ್ಷಗಳೇ ಕಳೆದಿವೆ. ಆದರೂ ಚಿತ್ರಮಂದಿರ ತೆರೆಕಂಡಿಲ್ಲ. ಕಲಾತ್ಮಕ ಮತ್ತು ಸದಭಿರುಚಿಯ ಚಿತ್ರಗಳ ಪ್ರದರ್ಶನಕ್ಕೆ ಹೆಸರಾಗಿದ್ದ ಚಿತ್ರಮಂದಿರ ಇಂದು ಅವಕಾಶ ಕಂಡಿದೆ.

ಬೆಂಗಳೂರಿನ ಜಯನಗರದ ಹೃದಯ ಭಾಗದಲ್ಲಿರುವ ಪುಟ್ಟಣ್ಣ ಥಿಯೇಟರ್ ಅತ್ಯಂತ ಜನನಿಬಿಡ ಪ್ರದೇಶ. ಪ್ರಮುಖ ವಾಣಿಜ್ಯ ಕೇಂದ್ರ ಅಷ್ಟು ಮಾತ್ರವಲ್ಲದೇ ಹಳೇ ಬೆಂಗಳೂರಿಗರ ಭಾವನಾತ್ಮಕ ಸಂಬಂಧದ ಕೊಂಡಿಯೂ ಹೌದು. ಇಂಥ ಥಿಯೇಟರ್ ಇದ್ದಕ್ಕಿದ್ದಂತೆ ಬಾಗಿಲು ಮುಚ್ಚಿದ್ದು ಆಶ್ಚರ್ಯ ಮತ್ತು ಬೇಸರ ತರಿಸಿತ್ತು. ಬಿ.ಬಿ.ಎಂಪಿ. ಅಧೀನದಲ್ಲಿರುವ ಥಿಯೇಟರ್ ಸರಿಯಾದ ನಿರ್ವಹಣೆಯ ಕೊರತೆಯ ಕಾರಣದಿಂದಾಗಿ ಮುಚ್ಚಿದ ಸ್ಥಿತಿಗೆ ಬಂದಿದ್ದು ದುರದೃಷ್ಟಕರ. ಈ ಸಂಬಂಧ ಬಿ.ಬಿ.ಎಂ.ಪಿ. ಹೇಳಿಕೆ ನೀಡಿ "ನವೀಕರಣ ಮಾಡಲು ತಾತ್ಕಾಲಿಕವಾಗಿ ಮುಚ್ಚಲಾಗಿದ್ದು, ನವೀಕರಣದ ನಂತರ ಪ್ರದರ್ಶನಕ್ಕೆ ಸಿದ್ಧಪಡಿಸಲಾಗುವುದೆಂಬ ಸ್ಪಷ್ಟೀಕರಣ ನೀಡಲಾಗಿತ್ತಾದರೂ ಅದೊಂದು ಹುಸಿ ಹೇಳಿಕೆ ಎಂಬುದು ಸ್ಪಷ್ಟವಾಗಿತ್ತು.



ಪುಟ್ಟಣ್ಣ ಕಣಗಾಲ್ ಹೆಸರಲ್ಲಿ ಪ್ರಶಸ್ತಿ ನೀಡುವ ಸರ್ಕಾರ, ಅವರ ಹೆಸರಿನ ಥಿಯೇಟರ್ ಪಾಳುಬಿದ್ದ ಕೊಂಪೆಯಾಗಿರುವುದು ಕಣ್ಮುಂದೆ ಕಾಣುತ್ತಿದ್ದರೂ ಸರ್ಕಾರ ನಿರ್ಲಕ್ಷ ಮುಂದುವರಿದಿದೆ, ಇಂದು ಈ ಥಿಯೇಟರ್ ಕುಡುಕರ, ಜೂಜುಕೋರರ ಅಡ್ಡೆಯಾಗಿ ಪರಿವರ್ತಿತವಾಗಿದೆ. ಇದು ಪುಟ್ಟಣ್ಣ ಕಣಗಾಲ್ ಅವರಿಗೆ ಮಾಡುವ ಅವಮಾನ.

ಥಿಯೇಟರ್ ಪುನರಾರಂಭಿಸು ವುದರಿಂದ ಹಲವು ಅನುಕೂಲಗಳಿವೆ. ಬೆಂಗಳೂರಿನಲ್ಲಿ ವಾಣಿಜ್ಯ ವ್ಯವಹಾರಗಳು ಬದಲಾಗುತ್ತಿದ್ದು ಸಿನಿಮಾ ಥಿಯೇಟರ್‌ಗಳ ಸ್ವರೂಪಗಳು ಬದಲಾಗುತ್ತಿವೆ. ಪಿ.ವಿ.ಆರ್, ಐನೋಕ್ಸ್ ನಂತಹ ಮಲ್ಟಿಪ್ಲೆಕ್ಸ್‌ಗಳು ಎಲ್ಲೆಂದರಲ್ಲಿ ತಲೆ ಎತ್ತಿವೆ. ಇವುಗಳಲ್ಲಿ ಆರಂಭದ ದರಗಳೇ 150 ರಿಂದ 250 ರೂ.ಗಳಿವೆ. ಹೀಗಾಗಿ ಸಾಮಾನ್ಯ ಜನ ದುಬಾರಿ ದರಗಳನ್ನು ತೆತ್ತು ಸಿನಿಮಾ ನೋಡಲಾಗದ ಸ್ಥಿತಿಯಿದೆ. ಕಡಿಮೆ ಬಡ್ಜೆಟ್‌ನ ಸದಭಿರುಚಿಯ, ಕಲಾತ್ಮಕ ಚಿತ್ರಗಳಿಗೆ ಚಿತ್ರಮಂದಿರಗಳೇ ಸಿಗಲಾರದ ಸ್ಥಿತಿ ಇನ್ನೊಂದೆಡೆ. ಹಾಗೆಯೇ ಪುಟ್ಟಣ್ಣನವರ ಹೆಸರನ್ನು ಉಳಿಸುವುದು ಪ್ರಮುಖವಾದ ಅಂಶವೂ ಕೂಡ ಇದರಲ್ಲಿದೆ.

ಈ ಹಿನ್ನೆಲೆಯಲ್ಲಿ ಪುಟ್ಟಣ್ಣ ಥಿಯೇಟರ್ ಪುನರಾರಂಭಿಸಬೇಕೆಂದು ಒತ್ತಾಯಿಸಿ ಡಿವೈಎಫ್ಐ

ಲಿಂಗರಾಜು

ನೇತೃತ್ವದಲ್ಲಿ ಸಹಿಸಂಗ್ರಹ ಚಳುವ ಹಮ್ಮಿಕೊಳ್ಳಲಾಗಿತ್ತು. ನಿರ್ದೇಶಕ ಹಾಗೂ ಬರಹಗಾ ನಾಡೋಜ ಡಾ.ಬರಗೂರು ರಾಮಚಂದ್ರಪ್ಪ, ಖ್ಯಾ ನಟಿ ತಾರಾ, ನಿರ್ದೇಶಕ ವಿಶ್ವನಾಥ್, ಸಮುದಾಯ ವೆಂಕಟೇಶ್ ಕಿರುತೆರೆ ನಟ ಮಂಜು ಮುಂತಾದವ ಸಹಿ ಮಾಡುವುದರ ಮೂಲಕ ಸಹಿಸಂಗ್ರಹ ಚಳುವ ಚಾಲನೆ ನೀಡಿ ಬಿ.ಬಿ.ಎಂ.ಪಿ. ಮತ್ತು ಸರ್ಕಾ ತಕ್ಷಣವೇ ಗಮನಹರಿಸಿ ಥಿಯೇಟರ್ ಪುನರಾರಂಭ ಮುಂದಾಗಬೇಕೆಂದು ಆಗ್ರಹಿಸಿದರು. ಇದ ಸಂದರ್ಭದಲ್ಲಿ ಡಿವೈಎಫ್ಐ ಈ ಕಾರ್ಯವ ಶ್ಲಾಘಿಸಿದರು. ಸಹಿಸಂಗ್ರಹಕ್ಕೆ ಜನತೆಯಿಂದ ವ್ಯಾ ಸ್ಪಂದನ, ಬೆಂಬಲ ದೊರೆತಿದೆ. ಈ ಕಾರ್ಯದ ಎಸ್ಎಫ್ಐ, ಸಮುದಾಯ, ಜನವಾ ಸಿಐಟಿಯು, ಎ.ಆರ್.ಡಿ.ಯು. ಸಂಘಟನೆಗ ಕೈಜೋಡಿಸಿದ್ದವು. ಈ ಸಂದರ್ಭದಲ್ಲಿ ಡಿವೈಎಫ್ ರಾಜ್ಯ ಕಾರ್ಯದರ್ಶಿ ಬಿ.ರಾಜಶೇಖರಮೂರ್ತಿ ಎಸ್ಎಫ್ಐ ರಾಜ್ಯ ಅಧ್ ಹೆಚ್.ಆರ್.ನವೀನ್‌ಕುಮಾರ್, ಜನವಾದಿ ಶ್ರೀಮತಿ, ಸಿಐಟಿಯುನ ಮಂಜುನಾಥ ಎ.ಆರ್.ಡಿ.ಯು. ನ ಶ್ರೀನಿವಾಸಮೂರ್ತಿ ಡಿವೈಎಫ್ಐ ಜಿಲ್ಲಾಧ್ಯಕ್ಷ ಪಿ.ನಾಗರಾಜು ಕಾರ್ಯದರ್ಶಿ ಲಿಂಗರಾಜು, ಉಪಾಧ್ಯಕ್ಷ ಅನಂತ ಎಸ್ಎಫ್ಐ ಮುಖಂಡ ಪ್ರಸಾದ್ ಮುಂತಾದವ ಭಾಗವಹಿಸಿದ್ದರು.

.....ಸಂಘ ಪರಿವಾರದ ಶೃತಿ

ಪುಟ 3 ರಿಂದ

ದಾವಣಗೆರೆಯಲ್ಲಿ ಅಲ್ಲಿನ ಕ್ರೈಸ್ತ ಪ್ರಾರ್ಥನಾ ಮಂದಿರದ ಮೇಲೆ ನಡೆಸಿದ ಆಕ್ರಮಣಗಳು, ಆಡಳಿತದ ನೇರ ಹಸ್ತಕ್ಷೇಪವನ್ನು ಆಯೋಗ ಸಮರ್ಥಿಸಿರುವುದು ಕ್ರಿಶ್ಚಿಯನ್ ಸಂಸ್ಥೆಗಳು ನಡೆಸುತ್ತಿರುವ ಮತಾಂತರವೇ ಇದಕ್ಕೆಲ್ಲಾ ಕಾರಣವೆಂದೂ ಮತಧರ್ಮದ ಬಗ್ಗೆ ಸಾಹಿತ್ಯ ಹಂಚಿಕೆ, ಪ್ರಸಾರವನ್ನೇ ಅಪರಾಧವೆಂದು ಪರಿಗಣಿಸಿರುವುದು ಸಂಘಪರಿವಾರದ ವಾದದಂತಿದೆ. ಅಂತಿಮವಾಗಿ ಮತಾಂತರ ನಿಷೇಧದತ್ತ ಕಾನೂನು ಬಿಗಿಗೊಳಿಸುವ, ರೂಪಿಸುವ ಸಲಹೆ ನೀಡಿದ್ದ ಸಂವಿಧಾನದ ವಿರೋಧಿ ಕೃತ್ಯಗಳನ್ನೆಸಗಲು ಸಂಘ ಪರಿವಾರಕ್ಕೆ ಮುಕ್ತ ಅವಕಾಶ ಕಲ್ಪಿಸುವುದು. ಆದ್ದರಿಂದಲೇ ಈ ವರದಿಯನ್ನೇ ನೆಪವಾಗಿರಿಸಿ ಬಿಜೆಪಿಯ ಸರಕಾರ ಮತಾಂತರ ನಿಷೇಧ ಕಾಯ್ದೆಯನ್ನು ತರಲು ಹುನ್ನಾರ ನಡೆಸಿದಂತಿದೆ.

ಈ ವರದಿಯು ಪೂರ್ವಗ್ರಹ ಪೀಡಿತ ವರದಿ ಜನರನ್ನು ಹಾದಿ ತಪ್ಪಿಸುವ ಅಪಾಯಕಾರಿ ಪರಿಣಾಮ ಬೀರಲಿದೆ. ಇಂತಹ ಧಾಳಿಗಳನ್ನು ನಡೆಸಿ ಬಚಾವಾಗಬಹುದೆಂಬ ಧೈರ್ಯ ತುಂಬಿ ಪ್ರೋತ್ಸಾಹಿಸುತ್ತದೆ. ಸಂವಿಧಾನದ ಮೂಲಭೂತ ಹಕ್ಕುಗಳಿಗೆ ಶಾಂತಿ, ಸೌಹಾರ್ದ ಬದುಕಿಗೆ ಧಕ್ಕೆ ತರುವ ವರದಿಯನ್ನು ಹಾಗೂ ಅದರ ಶಿಫಾರಸುಗಳನ್ನು ಸರ್ಕಾರ ಒಪ್ಪಲೇಬಾರದು, ಅದನ್ನು ತಿರಸ್ಕರಿಸಲೇಬೇಕು.

ಆದರೆ ಬಿಜೆಪಿ ಅಧಿಕಾರಕ್ಕೆ ಬಂದ ಲಾಗಾಯ್ತಿನಿಂದಲೂ ತನ್ನ ಅಪಾರ ಪಾತಕದ ಕೃತ್ಯಗಳನ್ನು ಮುಚ್ಚುಹಾಕಿಕೊಳ್ಳಲು ಸೂಕ್ತ ತನಿಖಾ ಸಂಸ್ಥೆಗಳ ಬದಲು 'ನ್ಯಾಯಾಂಗ ತನಿಖೆ'ಯೆಂಬ ಹೊಸ ರಾಗ ಹಿಡಿದಿದೆ. ಹಿಂದೆ ಬೀಜ, ಗೊಬ್ಬರಕ್ಕಾಗಿ ಹಾವೇರಿಯಲ್ಲಿ ಚಳುವಳಿ ನಡೆಸಿದ ರೈತರ ಮೇಲೆ ಗೋಲಿಬಾರ್ ನಡೆಸಿ ರೈತರನ್ನು ಕೊಂದ ಘಟನೆಯ ಬಗ್ಗೆ ಸರ್ಕಾರ ನೇಮಿಸಿದ್ದ ಆಯೋಗವು ಗುಂಡೇಟಿಗೆ ಬಲಿಯಾದವರು ರೈತರೇ ಅಲ್ಲವೆಂದು ಅವಮಾನ ಮಾಡಿತ್ತು. ಅದನ್ನೇ ಸರ್ಕಾರ ಪುನರುಚ್ಚರಿಸಿತು. ನ್ಯಾ.ಸೋಮಶೇಖರ ಆಯೋಗದ ವರದಿಯೂ ಅಂತಹುದೇ ಕೆಲಸ ಮಾಡಿದೆ. ಹೀಗಾಗಿ ತನ್ನನ್ನು ರಕ್ಷಿಸಿಕೊಳ್ಳಲು ಅನುವಾಗುವಂತೆ ಒತ್ತಡ ಹೇರಿ ಶಿಫಾರಸು ತರಿಸುವುದು 'ನ್ಯಾಯಾಂಗದ' ಘನತೆಯನ್ನೇ ಬಿಜೆಪಿಯು ಮಣ್ಣುಪಾಲು ಮಾಡುತ್ತಿದೆ. ಇದರಿಂದಾಗಿ ನ್ಯಾಯಾಂಗ ತನಿಖೆ ಎಂಬುದು ಅರ್ಥಹೀನವಾಗಿಸಿಬಿಟ್ಟಿದೆ. ಹೀಗಾಗಿ ಲೋಕಾಯುಕ್ತ ರ ತನಿಖೆಯನ್ನು ದುರ್ಬಲಗೊಳಿಸಲು ಭೂ ಹಗರಣಗಳ ಬಗ್ಗೆ ತನಿಖೆಗೆ ನೇಮಿಸಿರುವ ನ್ಯಾ.ಪದ್ಮರಾಜ್ ರವರ ನೇತೃತ್ವದ ಆಯೋಗದಿಂದ ತನಿಖೆಯಾಗಿ ಮುಂಬರುವ ವರದಿಯ ಬಗ್ಗೆ ಸಾರ್ವಜನಿಕರಲ್ಲಿ ಅನುಮಾನ ವ್ಯಕ್ತ ಗೊಳ್ಳುವುದು ನಿರಾಧಾರವೇನಲ್ಲ. ಆದ್ದರಿಂದ ನ್ಯಾ.ಸೋಮಶೇಖರ ಆಯೋಗದ ವರದಿಯನ್ನು ತಿರಸ್ಕರಿಸಿ ಹೊಸ ಕ್ರಮಗಳನ್ನು ಕೈಗೊಳ್ಳಬೇಕು.

"ಸರ್ಕಾರದ ವಿರುದ್ಧವೇ ಆರೋಪ ಮಾಡುವ ಇಂತಹ ಆಯೋಗಗಳ ವರದಿ ಒಪ್ಪಲಾಗದು. ಇದಕ್ಕೆ ನೀಡುವ ಹಣಕಾಸನ್ನು ಆಯೋಗವನ್ನು ರದ್ದುಗೊಳಿಸಬೇಕಾಗುತ್ತದೆ."

ಬಿ.ಎಸ್.ಯಡಿಯೂರಪ್ಪ, ಮಧ್ಯಂತರ ವರದಿಗೆ ಪ್ರತಿಕ್ರಿಯಿಸುತ್ತಾ

ಆದಿವಾಸಿಗಳನ್ನು ಬೀದಿಗೆ ತಳ್ಳಿದ ಬಿ.ಜೆ.ಪಿ. ಸರ್ಕಾರ

ಪುಟ 4 ರಿಂದ

ಬಿ.ಜೆ.ಪಿ. ಕಾರ್ಯಕರ್ತರು ಮುಖಂಡರು ಅಲ್ಲಿಗೆ ತೆರಳಿ ರಾಜಕೀಯಕ್ಕಿಳಿದರು. ವಿಧಾನ ಪರಿಷತ್ ಸದಸ್ಯ ಗಣೇಶ್ ಕಾರ್ಣಿಕ್ ಬಂದು ಹೋದರು. ಪ್ರತಿ ಕುಟುಂಬಕ್ಕೆ ತಲಾ 1,000 ರೂಪಾಯಿಗಳನ್ನು ಉಸ್ತುವಾರಿ ಸಚಿವರು, ಭೂಮಾಲಕರ ನಾಯಕ ಹಾಗೂ ಬಿಲ್ಡರ್ ಕೃಷ್ಣ ಪಾಲೇಮಾರ್ ನೀಡಿ ಕೈ ತೊಳೆದುಕೊಂಡರು. ಆದರೆ ಕಾಂಗ್ರೆಸ್ಸಿಗರಿಗೆ ಇನ್ನು ನಿದ್ದೆನೇ ಬಿಟ್ಟಿಲ್ಲ. ಕ್ಷೇತ್ರದ ಶಾಸಕ ವಸಂತ ಬಂಗೇರರಂತೂ ನಾಪತ್ತೆ. ಬಿ.ಜೆ.ಪಿ. ಗರ ಆರೋಪಕ್ಕೆ ಪುಷ್ಠಿ ನೀಡುವಂತಿದೆ ಕಾಂಗ್ರೆಸ್ ಶಾಸಕರ ನಡತೆ.

ಸಿಪಿಐ(ಎಂ)ನ ಮಧ್ಯಪ್ರವೇಶ ಹೋರಾಟಕ್ಕೆ ನಿರ್ಧಾರ :

ಘಟನೆಯ ತಕ್ಷಣ ಆದಿವಾಸಿ ಕುಟುಂಬಗಳನ್ನು ಸಂಪರ್ಕಿಸಿದ ಸಿಪಿಐ(ಎಂ) ನಾಯಕರು ಧೈರ್ಯ ತುಂಬಿದರು. ಗಾಯಾಳುಗಳನ್ನು ಸಿಪಿಐ(ಎಂ) ನಾಯಕ ಹರಿದಾಸ್, ಎಸ್ಎಫ್ಐ ಜಿಲ್ಲಾಧ್ಯಕ್ಷ ಸುಜೀತ್, ದಲಿತ ಹಕ್ಕುಗಳ ಹೋರಾಟ ಸಮಿತಿಯ ಶೇಖರ. ಎಲ್. ಭೇಟಿ ಮಾಡಿ ಅದೇ ದಿನ ಜಿಲ್ಲಾಧಿಕಾರಿಗಳಿಗೆ, ಸಹಾಯಕ ಆಯುಕ್ತರಿಗೆ ಮನವಿ ನೀಡಿ ಒಕ್ಕಲೆಬ್ಬಿಸಿ ಘಟನೆಯನ್ನು ಖಂಡಿಸಿ, ಅವರು ವಾಸ್ತವ್ಯ ಸರ್ಕಾರಿ ಭೂಮಿಯನ್ನು ನೀಡಿ ಹಕ್ಕುಪತ್ರ ನೀಡಬೇ ಮನೆ ನಿರ್ಮಿಸಿಕೊಡಬೇಕು, ಮೃಗೀಯವಾ ವರ್ತಿಸಿದ ಕಂದಾಯ ಅಧಿಕಾರಿಗಳ ಅಮಾನತುಗೊಳಿಸಲು ಒತ್ತಾಯಿಸ ಲಾಯಿತ ಜೊತೆಗೆ ಸ್ಥಳಕ್ಕೆ ಭೇಟಿ ನೀಡಿ ಧೈರ್ಯ ತುಂಬಿದರು ಘಟನೆಯ ಮರುದಿನವೇ ದಲಿತ ಹಕ್ಕುಗಳ ಹೋರಾ ಸಮಿತಿ ತುರ್ತು ಸಭೆ ಸೇರಿ ಫೆಬ್ರವರಿ 14 ರಂ ಘಟನೆಯನ್ನು ಖಂಡಿಸಿ ತಹಶೀಲ್ದಾರ್ ಕಛೇ ಚಲೋಗೆ ತೀರ್ಮಾನಿಸಲಾಯಿತು. ಮಾತ್ರವಲ್ಲ ದಲಿತ ಸಂಘರ್ಷ ಸಮಿತಿ, ಕರ್ನಾಟಕ ಪ್ರಾಂತ ಸಂಘ, ಮಲೆಕುಡಿಯರ ಸಂಘದ ಜೊತೆಗೂ ಜನವರಿ 31 ರಂದು ಜಂಟಿ ಹೋರಾಟ ತೀರ್ಮಾನಿಸಲಾಯಿತು. ಒಟ್ಟಿನಲ್ಲಿ ಆದಿವಾ ಸಮುದಾಯಕ್ಕೆ ಧೈರ್ಯ ತುಂಬಿ ಹೋರಾಟ ಇಳಿಸುವಲ್ಲಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ಕೆಲಸ ಹೆಚ್ಚು.

ಶೇ.ನೀ.ಲ

ಜನಶಕ್ತಿ ಓದುಗರ ಸಮಾವೇಶಗಳು

ಪುಟ 6 ರಿಂದ

ಪಿ.ವಿಶ್ವನಾಥ ರೈ, ಮುಖಂಡರಾದ ದೋಗುಸುವರ್ಣ, ವಾದಿರಾಜ ಬುದ್ಯ, ರಮೇಶ್ ಮೆಂಡನ್, ವಿಠ್ಠಲ ಪೂಜಾರಿ, ವಿದ್ಯಾರಾಜ್, ಕೃಷ್ಣಾನಂದ ಮತ್ತಿತರರು ಭಾಗವಹಿಸಿದ್ದರು.

★

ಮಂಗಳೂರಿನಲ್ಲಿ ಮೆಸ್ಕಾಂ ಗುತ್ತಿಗೆ ಕಾರ್ಮಿಕರ ಪ್ರತಿಭಟನೆ :

ಹಲವಾರು ವರ್ಷಗಳಿಂದ ಮೆಸ್ಕಾಂ ಸಂಸ್ಥೆಯಲ್ಲಿ ಗುತ್ತಿಗೆ ಕಾರ್ಮಿಕರಾಗಿ ದುಡಿಯುತ್ತಿರುವ ಎಲ್ಲರನ್ನೂ ಮೆಸ್ಕಾಂ ನೌಕರರೆಂದು ಪರಿಗಣಿಸಿ ಖಾಯಂ ಮಾಡಬೇಕೆಂದು ಒತ್ತಾಯಿಸಿ ಜನವರಿ 31 ರಂದು ಮೆಸ್ಕಾಂ ನಾನ್ ಪರ್ಮನೆಂಟ್ ನೌಕರರ ಸಂಘ ಸಿಐಟಿಯು ನೇತೃತ್ವದಲ್ಲಿ ನೂರಾರು ಕಾರ್ಮಿಕರು ಮಂಗಳೂರಿನ ಮೆಸ್ಕಾಂ ಪ್ರಧಾನ ಕಚೇರಿಯೆದುರು ಪ್ರತಿಭಟನಾ ಪ್ರದರ್ಶನ ನಡೆಸಿದರು.

ಸಿಐಟಿಯು ದಕ್ಷಿಣ ಕನ್ನಡ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವಸಂತ ಆಚಾರಿ, ಗುತ್ತಿಗೆ ಕಾರ್ಮಿಕರಿಗೆ ಕಾನೂನು ರೀತಿ ನೀಡಬೇಕಾದ ವೇತನ, ಎಂಪ್ಲಾಯ್‌ಮೆಂಟ್ ಕಾರ್ಡು, ಪಿ.ಎಫ್ ಸ್ಲಿಪ್, ಬೋನಸ್, ಕನಿಷ್ಠ ವೇತನ, ವಾರದ ರಜೆ ಮೊದಲಾದ ಸವಲತ್ತು ನೀಡದೆ ಸಂಸ್ಥೆ ವಂಚಿಸುತ್ತಿದೆ; ರಾಜ್ಯಕ್ಕೆ ಬೆಳಕು ನೀಡುವ ನೌಕರರ ಬದುಕು ಮಾತ್ರ ಕತ್ತಲಾಗಿದೆ; ಸರ್ಕಾರ ಈ ಕೂಡಲೇ ಕಾರ್ಮಿಕರನ್ನು ಖಾಯಂಗೊಳಿಸಿ ಬದುಕಿಗೆ ಭದ್ರತೆ ಒದಗಿಸಬೇಕು ಎಂದು ರಾಜ್ಯ ಸರಕಾರವನ್ನು ಒತ್ತಾಯಿಸಿದರು.



ಮೆಸ್ಕಾಂ ಗುತ್ತಿಗೆ ನೌಕರರ ಸಂಘದ ಗೌರವಾಧ್ಯಕ್ಷ ಬಿ.ಎಂ.ಭಟ್, ಅಧ್ಯಕ್ಷ ಶಿವಕುಮಾರ್, ಕಾರ್ಯದರ್ಶಿ ಮಹೇಶ್, ಸಿಐಟಿಯು ಕಾರ್ಮಿಕ ಸಂಘಟನೆಗಳ ಮುಖಂಡರಾದ ಸುನಿಲ್‌ಕುಮಾರ್ ಬಜಾಲ್, ಜಯರಾಂ ಮಯ್ಯ ಪ್ರತಿಭಟನೆಯ ನೇತೃತ್ವ ವಹಿಸಿದ್ದರು. ಬಳಿಕ ನಿಯೋಗವಾಗಿ ತೆರಳಿ ಮೆಸ್ಕಾಂನ ವ್ಯವಸ್ಥಾಪಕ ನಿರ್ದೇಶಕರಿಗೆ ಮನವಿಯನ್ನು ಅರ್ಪಿಸಿ, ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಲಾಯಿತು.

★

ಬೆಳ್ತಂಗಡಿ, ಬಂಟ್ವಾಳ, ಕುಂದಾಪುರಗಳಲ್ಲಿ ಅಂಗನವಾಡಿ ನೌಕರರ ಪ್ರತಿಭಟನೆ

ವಿವಿಧ ಬೇಡಿಕೆಗಳನ್ನು ಮುಂದಿಟ್ಟು ಸಿಐಟಿಯು ಬೆಂಬಲಿತ ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘದ ಕರೆಯ ಮೇರೆಗೆ ಫೆಬ್ರವರಿ 2 ರಂದು ರಾಜ್ಯಾದ್ಯಂತ ನಡೆದ ಪ್ರತಿಭಟನೆಯು ಬೆಳ್ತಂಗಡಿ, ಬಂಟ್ವಾಳ, ಕುಂದಾಪುರ ತಾಲ್ಲೂಕುಗಳಲ್ಲಿಯೂ ಯಶಸ್ವಿಯಾಗಿ ನಡೆಯಿತು.

ಬೆಳ್ತಂಗಡಿಯಲ್ಲಿ ಮೂರು ಮಾರ್ಗದಿಂದ ಮೆರವಣಿಗೆಯಲ್ಲಿ ಹೊರಟ ಪ್ರತಿಭಟನಾಕಾರರು ಸಿಡಿಪಿಒ ಕಚೇರಿ ಮುಂದೆ ಪ್ರತಿಭಟನೆ ನಡೆಸಿದರು. ಪ್ರತಿಭಟನಾಕಾರರನ್ನುದ್ದೇಶಿಸಿ ಸಿಐಟಿಯು ಜಿಲ್ಲಾ ಮುಖಂಡ ಬಿ.ಎಂ.ಭಟ್ ಮಾತನಾಡಿದರು. ಅಂಗನವಾಡಿ ನೌಕರರ ಸಂಘದ ಮುಖಂಡರಾದ ಸುಮತಿ, ದಮಯಂತಿ, ಎಮ್ಮಿ ಫರ್ನಾಂಡೀಸ್, ಕಾರ್ಮಿಕ ಮುಖಂಡರಾದ ಶಿವಕುಮಾರ್, ಜಯರಾಂ ಮಯ್ಯ, ಶೇಖರ.ಎಲ್, ನೆಬಿಸಾ, ಈಶ್ವರಿ ವಸಂತ ನಡ ಮೊದಲಾದವರು ಪ್ರತಿಭಟನೆಯನ್ನು ಸಂಘಟಿಸಿದ್ದರು.

ಬಂಟ್ವಾಳ ಸಿ.ಡಿ.ಪಿ.ಒ ಕಚೇರಿ ಎದುರು ನಡೆದ ಪ್ರತಿಭಟನೆಯಲ್ಲಿ ಸಿಐಟಿಯು ದಕ್ಷಿಣ ಕನ್ನಡ ಜಿಲ್ಲಾ ಸಮಿತಿ ಪ್ರಧಾನ ಕಾರ್ಯದರ್ಶಿ ವಸಂತ ಆಚಾರಿ, ಅಂಗನವಾಡಿ ನೌಕರರ ಜಿಲ್ಲಾ ಸಂಘಟನೆಯ ಅಧ್ಯಕ್ಷೆ ರವಿಕಲಾ, ಕಾರ್ಯದರ್ಶಿ ಸುಕನ್ಯಾ, ರಾಜೀವಿ ಪೈ, ಲಕ್ಷ್ಮಿ ಭವಾನಿ ಮಿತ್ತೂರು, ಲಲಿತ ಮಾಣಿ, ಕಾರ್ಮಿಕ ಮುಖಂಡರಾದ ರಾಮಣ್ಣ.ಐ, ಸಂಜೀವ ಬಂಗೇರ, ವಾಸುಗಟ್ಟಿ ಮೊದಲಾದವರು ಭಾಗವಹಿಸಿದ್ದರು.

ಕುಂದಾಪುರದಲ್ಲಿ ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘ (ಸಿಐಟಿಯು), ಅಂಗನವಾಡಿ ನೌಕರರಿಗೆ ಸ್ವಾವಲಂಬನಾ ನ್ಯಾಷನಲ್ ಪೆನ್ಷನ್ ಸಿಸ್ಟಮ್ ಪ್ರಕಾರ ಪೆನ್ಷನ್ ಜಾರಿ ಮಾಡಲು ರಾಜ್ಯ ಸರ್ಕಾರ ಕೈಗೊಂಡಿರುವ ಕ್ರಮವನ್ನು ವಿರೋಧಿಸಿ ಜಿಲ್ಲಾಧಿಕಾರಿ ಮೂಲಕ ಮುಖ್ಯಮಂತ್ರಿಗೆ ಮನವಿ ಅರ್ಪಿಸಲಾಯಿತು.

○

ಮುಖ್ಯಮಂತ್ರಿ ಬೆದರಿಕೆ

ಪುಟ 3 ರಿಂದ

ಮಾನ, ಅನುಕಂಪವನ್ನು ಜನರ ನಡುವಿನಿಂದ ಮತ್ತೆ ಗಳಿಸಬಹುದೆಂಬ ಅವರ ಲೆಕ್ಕಾಚಾರ ಅತ್ಯಂತ ಕೀಳುಮಟ್ಟದ ರಾಜಕಾರಣವಾಗಿದೆ. ಹಗರಣಗಳ ರಾಶಿಯಿಂದ ತಪ್ಪಿಸಿಕೊಳ್ಳಲಾಗದೇ ದಾಖಲೆ ಸಹಿತ ಪ್ರಸಂಗಗಳು, ವಿರೋಧ ಪಕ್ಷಗಳ ಟೀಕಾಧಾಳಿ, ಇವರನ್ನು ಟೊಂಕಕಟ್ಟಿ ಬೆಂಬಲಿಸುತ್ತಿರುವ ಹೈಕಮಾಂಡ್‌ನ ಮಾನವೂ ಮೂರುಕಾಸಿಗೂ ಹೋಗದಂತಾಗಿರುವುದರಿಂದ ಉಂಟಾಗಿರುವ ಒಳ ಒತ್ತಡಗಳು, ಬಿಜೆಪಿಯೊಳಗೆ ಗುದ್ದಾಟ, ಇಂತಹ ಸನ್ನಿವೇಶಗಳು ಯಡಿಯೂರಪ್ಪನವರು ಮಾನಸಿಕ ಸಮತೋಲನ ಕಳೆದುಕೊಂಡು ಬಡಬಡಿಸುವಂತೆ ಮಾಡಿವೆ. ಅವರಿಗೆ ಅವರ ಅಧಿಕಾರದ ಕುರ್ಚಿಗೆ ಬೆದರಿಕೆ ಏನಿದ್ದರೂ ಬಿಜೆಪಿಯೊಳಗಿನಿಂದಲೇ. ಮಾಧ್ಯಮಗಳ ಒಂದು ವರದಿಯಂತೆ ಯಡಿಯೂರಪ್ಪ, ಅನಂತ್‌ಕುಮಾರ್ ನಡುವೆ ಮುಖಾಮುಖಿ ಬಯ್ದಾಟ, ಮುಖದ ಮೇಲೆ ಗುದ್ದುಗಳು ಚಚ್ಚಾಟಗಳೇ ನಡೆದಿವೆಯಂತೆ.

ಕೇಂದ್ರದಲ್ಲಿ ಯುಪಿಎ ಸರ್ಕಾರದ ಭ್ರಷ್ಟಾಚಾರದ ವಿರುದ್ಧ ಹೋರಾಡುವುದಾಗಿ ಹೇಳುತ್ತಿರುವ ಬಿಜೆಪಿ ತನ್ನದೇ ಸರಕಾರದಲ್ಲಿ ಮುಖ್ಯಮಂತ್ರಿಯಾದಿಯಾಗಿ ನಡೆಸಿದ ಬ್ರಹ್ಮಾಂಡ ಭ್ರಷ್ಟಾಚಾರಗಳನ್ನು ಸಮರ್ಥಿಸಿಕೊಳ್ಳಲಾಗದೇ ತತ್ತರಿಸುತ್ತಾ ರಾಜಕೀಯ ನೈತಿಕ ದಿವಾಳಿತನದಲ್ಲಿದೆ. ಹೀಗಾಗಿ ಮುಖ್ಯಮಂತ್ರಿಯನ್ನು ಮುಂದಿನ ಸಂಸತ್ತು ಅಧಿವೇಶನದ ಒಳಗೆ (9ರೊಳಗೆ) ಬದಲಿಸಬೇಕೆಂಬ ಚಿಂತನೆ ಸುಳಿದಾಡುತ್ತಿರುವ ವರದಿಗಳಿವೆ. ಹೀಗಾಗಿ ಪದವಿ ಕಳೆದುಕೊಳ್ಳಲಿರುವ ಭೀತಿ ಯಡಿಯೂರಪ್ಪನವರಿಗೆ ಕಾಡುತ್ತಿದೆ. ಅವರು ಐದು ವರ್ಷ ನಾನೇ ಮುಖ್ಯಮಂತ್ರಿ, ನನ್ನನ್ನು ಯಾರೂ ಅಲುಗಾಡಿಸಲಾಗದು ಎಂದು ಪದೇ ಪದೇ ಹೇಳುತ್ತಿರುವಲ್ಲಿ, ಸುತ್ತೂರು, ತುಮಕೂರು ಮಠಾಧೀಶರೊಂದಿಗೆ ಸಮಾಲೋಚಿಸುತ್ತಿರುವಲ್ಲಿ ಅದರ ಛಾಯೆ ಕಾಣುತ್ತದೆ.

ರಾಜ್ಯದ ಬಿಜೆಪಿಯ ಘನ ರಾಜಕಾರಣ, ಸರ್ಕಾರದ ಆಡಳಿತದಲ್ಲಿ ಈಗ 'ಅಭಿವೃದ್ದಿ' ಮಾಯ! ಏನಿದ್ದರೂ ಹಗರಣಗಳು, ಅವುಗಳ ಸಮರ್ಥನೆ, ಸೃಷ್ಟಿಗೊಳ್ಳುವ ಜೀವ ಬೆದರಿಕೆಗಳು ಎಲ್ಲಿಂದ ಎಲ್ಲಿಗೆ ಬಂದು ತಲುಪಿದೆ ಬಿಜೆಪಿ? ಎಲ್ಲವನ್ನೂ ಬಿಡಿಸಿ ಹೇಳುವುದು ಸಾಧ್ಯವಿಲ್ಲ ಎಂದು ಮುಖ್ಯಮಂತ್ರಿಗಳು ಹೇಳುತ್ತಿದ್ದಾರೆ. ಇದು ಬೆದರಿಕೆಯ ಪರಿಣಾಮವೇ? ಅಥವಾ ಜತನದಿಂದ ಬಚ್ಚಿಡಲಾಗುವ ಹಗರಣಗಳೇ?

★

ಕಾಂಗ್ರೆಸ್ ರ್‍ಯಾಲಿ

ಅಂತೂ ಕಾಂಗ್ರೆಸ್ ರಾಜಧಾನಿಯಲ್ಲಿ ಬಿಜೆಪಿ ಸರಕಾರದ ವಿರುದ್ಧ ಪ್ರಾದೇಶಿಕ ರ್‍ಯಾಲಿಯೊಂದನ್ನು ಸಂಘಟಿಸಿದೆ. ಈ ಸರ್ಕಾರದ ಉದ್ಘಾಟನೆ ತನ್ನ ಗುರಿಯೆಂದು 'ಎನ್‌ಕೌಂಟರ್ (ಮಾತಿನ) ಎಚ್ಚರಿಕೆ ನೀಡಿದಷ್ಟು ಹೀಗೆಯೇ ರಾಜ್ಯದ ಹಲವೆಡೆಗಳಲ್ಲಿಯೂ ರ್‍ಯಾಲಿಗಳು ನಡೆಯಲಿವೆ.

ಮನಸ್ಸನ್ನು ಇಷ್ಟು ದೊಡ್ಡದನ್ನಾಗಿಸಿಕೊಂಡ ಕಾಂಗ್ರೆಸ್ ನಡೆ ನಿಜಕ್ಕೂ ವಿಶೇಷ! ಯಾಕೆಂದರೆ ಇಷ್ಟೆಲ್ಲಾ ಬಿಜೆಪಿ ಸರಕಾರದ ಹಗರಣ, ಭ್ರಷ್ಟಾಚಾರ, ಆಡಳಿತದ ವೈಫಲ್ಯ ಏನೆಲ್ಲಾ ನಡೆದರೂ ಕಾಂಗ್ರೆಸ್ ನಾಯಕರು ಬಳ್ಳಾರಿ ಪಾದಯಾತ್ರೆ ಬಳಿಕ ಕಛೇರಿ ಬಿಟ್ಟು ಅಲುಗಾಡಿರಲಿಲ್ಲ. ಕುಳಿತಲ್ಲಿಂದಲೇ ಮಂತ್ರ ಊದುತ್ತಿದ್ದರು. ಮಾಧ್ಯಮಗಳ ಮುಂದೆಯೇ ಹೋಗೆ ಏಳಿಸುತ್ತಿದ್ದರು. ಈಗ ಕಛೇರಿಯಿಂದ ಒಂದಿಷ್ಟು ದೂರದಲ್ಲಿರುವ ಜಕ್ಕರಾಯನಕೆರೆಯಂಗಳಕ್ಕೆ ಕಾಲಿಟ್ಟಿದ್ದಾರೆ. ಅವರಿರುವಲ್ಲಿಗೆ ಜನರನ್ನು ಕರೆಸಿಕೊಂಡಿದ್ದಾರೆ. ಅದರಲ್ಲಿ ಜನ ಭಾಗವಹಿಸಿದ ಉತ್ಸಾಹ ಸರಕಾರದ ವಿರುದ್ಧದ ಮನೋಭಾವಕ್ಕೆ ಸಾಕ್ಷಿಯಾಗುವಂತಿತ್ತು ಎಂಬುದನ್ನು ಗಮನಿಸಬೇಕು.

ಒಂದು ಮುಖ್ಯ ಸಂಗತಿಯೆಂದರೆ ಬಿಜೆಪಿಯ ಭ್ರಷ್ಟಾಚಾರ ಹಗರಣಗಳ ಬಗ್ಗೆ ಮಾತನಾಡಿದ ಕಾಂಗ್ರೆಸ್ 2 ಜಿ ಸ್ಪೆಕ್ಟ್ರಂ ಆದರ್ಶ ಅಪಾರ್ಟ್‌ಮೆಂಟ್, ಕಾಮನ್ ವೆಲ್ತ್ ಗೇಮ್ಸ್‌ಗಳಲ್ಲಿನ ಬೃಹತ್ ಕಾರ್ಪೋರೇಟ್ ಭ್ರಷ್ಟಾಚಾರಗಳ ವಿಪರೀತ ಕೊಳಕು ಮೈಯೆಲ್ಲಾ ಕೊಳಕು ಮೆತ್ತಿಕೊಂಡಿದೆ. ಅದಕ್ಕೆ ನೈತಿಕತೆಯಾದರೂ ಎಲ್ಲಿದೆ? ಬಿಜೆಪಿ ಕಾಂಗ್ರೆಸ್ ಪಕ್ಷಗಳು ಭ್ರಷ್ಟಾಚಾರವನ್ನು ಒಂದು ಮೌಲ್ಯವನ್ನಾಗಿ ಅಳವಡಿಸಿಕೊಂಡಿವೆ. ಸಾರ್ವಜನಿಕ ಒತ್ತಡ ಹೆಚ್ಚಿದಾಗ ತಂತ್ರಕ್ಕಾಗಿ ಒಂದಿಷ್ಟು ಕ್ರಮ ಕೈಗೊಂಡಂತೆ ನಾಟಕವಾಡುತ್ತವೆ. ಒಂದು ಮನಸ್ಸಿನ, ಒಂದೇ ಹಾದಿಯ ಕಾರ್ಯಾಚರಣೆಗಳು ಅವರೊಳಗೆ ರಾಜಿ, ಹೊಂದಾಣಿಕೆ ತಂದಿವೆ.

ಈ ರ್‍ಯಾಲಿಯೇನೋ ಬಿಜೆಪಿಯಿಂದ ರಾಜ್ಯವನ್ನು ವಿಮೋಚನೆ ಮಾಡುವುದಾಗಿ ಕರೆ ನೀಡಿತು. ಆದರೆ ಹಗರಣಗಳ ಬಗ್ಗೆ ಪ್ರಸ್ತಾಪ ಬಿಟ್ಟರೆ ಜನರ ಜೀವನದ ಜ್ವಲಂತ ಪ್ರಶ್ನೆಗಳಾದ ಬೆಲೆ ಏರಿಕೆ ಉದ್ಯೋಗ, ರೇಷನ್, ನೆರೆ ಪರಿಹಾರ, ವಿದ್ಯುತ್ ಪೆಟ್ರೋಲ್ ದರ ಹೆಚ್ಚಳದ ಬಗ್ಗೆ ನೆನಪೇ ಇಲ್ಲದಂತೆ.... ಪ್ರಶ್ನೆ ಪ್ರಸ್ತಾಪವೂ ಆಗಲಿಲ್ಲ.

ಈ ಅನಿಷ್ಟಗಳಿಗೆ ಕಾರಣವಾದವರು, ಅದರ ಬಗ್ಗೆ ಮಾತನಾಡಿಯಾರೇ?

JANASHAKTHI KANNADA VARA PATRIKE FEB. 13, 2011 Price : Rs. 5/- RNI No. KARKAN /2006/17926 Posted on every Satuarday Postal Reg. No. RNP/KA/BGS/2078/2009-12
Posted at MBC Bangalore GPO

'ಒಲವೇ ಮಂದಾರ ' ತಾಜಾತನದ ಅನುಭವ



ಒಲವೇ ಮಂದಾರ, ಬಹುತೇಕ ಹೊಸಬರಿಂದ ಕೂಡಿದ ಈ ಚಿತ್ರ ಈಗ ಸಾಕಷ್ಟು ಸುದ್ದಿ ಮಾಡಿದೆ. ಕಾರಣ ಅದರ ತಾಜಾತನದಿಂದ. ಪ್ರೀತಿ-ಪ್ರೇಮದ ಕಥೆಗಳು ಈಗಾಗಲೇ ಅದೆಷ್ಟು ಬಂದು ಹೋಗಿವೆಯೋ. ಇದು ಕೂಡಾ ಒಂದು ಅಮರ ಪ್ರೇಮದ ಕಥೆಯೇ. ಆದರೆ ಗಲ್ಲಾಪೆಟ್ಟಿಗೆಯನ್ನು ತುಂಬುವ ಸಿದ್ದಸೂತ್ರದ ಕಥೆಯಲ್ಲ ಇದು. ಪ್ರೀತಿಯ ಬಗ್ಗೆ ನೈಜ ಕಾಳಜಿಯುಳ್ಳ ವಿಭಿನ್ನ ಚಿತ್ರ. ರಂಗ ಭೂಮಿಯಲ್ಲಿ ತೊಡಗಿಕೊಂಡಿರುವ ಜಯತೀರ್ಥರ ನಿರ್ದೇಶನದ ಮೊದಲ ಚಿತ್ರ ಇದು.

ತನ್ನನ್ನು ಮೆಚ್ಚಿದ ಹುಡುಗಿಯನ್ನು ಕಾಣಲು ಕರ್ನಾಟಕದಿಂದ ಅಸ್ಸಾಂವರೆಗೂ ಓಡೋಡುತ್ತಲೇ ಸಾಗುವ ಯುವಕನ ಕಥೆ ಇದು. ಹೀಗೆ ಎಲ್ಲಾದರೂ ಉಂಟೇ ಎಂದು ಭಾವಿಸುವಾಗಲೇ ತಮ್ಮ ಪ್ರೀತಿಗಾಗಿ ಇದಕ್ಕೂ ಮೀರಿದ ಸಾಧನಗೈದ ಅಮರ ಪ್ರೇಮಿಗಳ ಪರಿಚಯವನ್ನು ಮಾಡಿಸುತ್ತಾರೆ ನಿರ್ದೇಶಕ ಜಯತೀರ್ಥ.

ನಾಯಕ ಶ್ರೀಕಿ (ಶ್ರೀಕಾಂತ) ಆಗರ್ಭ ಶ್ರೀಮಂತರ ಮಗ, ಕೊಯಮತ್ತೂರಿನಲ್ಲಿ ಡ್ಯಾನ್ಸ್ ಸ್ಪರ್ಧೆಯೊಂದರಲ್ಲಿ ಅಸ್ಸಾಂನ ಹುಡುಗಿ ಪ್ರೀತಿ (ಆಕಾಂಕ್ಷ)ಯನ್ನು ಭೇಟಿಯಾಗುತ್ತಾನೆ. ಅವಳ ಸೌಂದರ್ಯ, ಮುಗ್ಧತೆ ಕಂಡು ಮೆಚ್ಚಿ, ಒಲವನ್ನು ವ್ಯಕ್ತಪಡಿಸುತ್ತಾನೆ. ಆಕೆಯೂ ಆತನನ್ನು ಮೆಚ್ಚುತ್ತಾಳೆ. ಇವನದೋ ಹುಡುಗಾಟದ ಪ್ರೀತಿ. ಆಕೆ ಮನಃಪೂರ್ವಕವಾಗಿಯೇ ಪ್ರೀತಿಸುತ್ತಾಳೆ ಮತ್ತು ಅಸ್ಸಾಂ ಗೆ ಬಂದು ತನ್ನನ್ನು ಮದುವೆಯಾಗುವಂತೆ ಹೇಳುತ್ತಾಳೆ. ನಾಯಕ 'ಕರ್ನಾಟಕದಿಂದ ಓಡೋಡುತ್ತಲೇ ಬಂದು ನಿನ್ನ ಭೇಟಿಯಾಗುವುದಾಗಿ' ಭಾಷೆ ನೀಡುತ್ತಾನೆ. ಅದನ್ನೇನು ಅವನು ಗಂಭೀರವಾಗಿ ಪರಿಗಣಿಸುವುದಿಲ್ಲ. ಆದರೆ ಸ್ನೇಹಿತ ಈತನ ಹುಡುಗಾಟಿಕೆಯನ್ನು ಕಂಡು ಛೀಮಾರಿ ಹಾಕುತ್ತಾನೆ, ನಂಬಿಕೆಗೆ ದ್ರೋಹ ಬಗೆಯಬೇಡವೆಂದು ತಿಳಿಹೇಳುತ್ತಾನೆ.



ನಾಯಕಿ ಅಸ್ಸಾಂಗೆ ಹಿಂದಿರುಗುತ್ತಾಳೆ. ಈತನೂ ಬೆಂಗಳೂರಿಗೆ ಹಿಂದಿರುಗುವ ಸಂದರ್ಭದಲ್ಲಿ ಚಾಮರಾಜನಗರದ ಬಳಿ ರೈಲಿನಿಂದ ಇಳಿದು, ಅಲ್ಲಿ ಫೋಟೋ ತೆಗೆಯುವ ಜ್ಞಾನದಲ್ಲಿ ರೈಲು ತಪ್ಪಿಸಿಕೊಳ್ಳುತ್ತಾನೆ. ನಡೆಯುತ್ತಲೇ ಬರುವಾಗ, ಚಪ್ಪಲಿ ಹೊಲಿದು ಜೀವನ ಸಾಗಿಸುವ ರತ್ನ (ರಂಗಾಯಣ ರಘು) ತನ್ನ ಹೆಂಡತಿ ನಂಜಿಯ ಬಹುದಿನದ, ಕಾಶಿಯನ್ನು ನೋಡುವ ಆಸೆಯನ್ನು ಈಡೇರಿಸಲು ಹೊರಟಿರುತ್ತಾನೆ. ಆಕೆಯೋ ಮೂಗಿ, ಕಾಲಲ್ಲಿ ಸ್ವಾದೀನವಿಲ್ಲ. ಆಕೆಯನ್ನು ಚಕ್ಕಡಿ ಗಾಡಿಯಲ್ಲಿ ಕೂರಿಸಿಕೊಂಡು ಅದನ್ನೆಳೆಯುತ್ತಾ ನಡೆದೇ ಹೊರಟಿರುತ್ತಾನೆ. ಅವರಿಬ್ಬರ ಪ್ರೀತಿ, ಆತ್ಮವಿಶ್ವಾಸವನ್ನು ಕಂಡು ಬೆರಗಾಗುವ ನಾಯಕ, ತನ್ನನ್ನು ಮೆಚ್ಚಿದ ಹುಡುಗಿಯ ನಂಬಿಕೆಗೆ ದ್ರೋಹ ಬಗೆಯಬಾರಧೆಂದು ಅಲ್ಲಿಂದಲೇ ಅಸ್ಸಾಂಗೆ ಕಾಲ್ನಡಿಗೆಯಲ್ಲಿ ಹೊರಡುತ್ತಾನೆ.

ಜೇಬಿನಲ್ಲಿ ನಯಾ ಪೈಸೆ ಇಲ್ಲದೆ ದಾರಿಯಲ್ಲಿ ಸಣ್ಣಪುಟ್ಟ ಚಾಕರಿ ಮಾಡುತ್ತಾ, ಹೊಟ್ಟೆಗೆ ಕೂಳು ಹೊಂಚಿಕೊಳ್ಳುತ್ತಾ ಸಾಗುವ ನಾಯಕ ಹೊಸ ಜೀವನ ದರ್ಶನವನ್ನು ಕಾಣುತ್ತಾನೆ. ಬದುಕಿಗಾಗಿ, ಎರಡು ಹೊತ್ತಿನ ಕೂಳಿಗಾಗಿ ದುಡಿಯುವ ರೈತ, ದರೋಡೆಕೋರ, ಕಳ್ಳ, ಸೂಳೆಗಾರಿಕೆ - ಅವರ ಮಾನವೀಯತೆ ಎಲ್ಲವನ್ನೂ ಕಾಣುತ್ತಾನೆ. ತಮಿಳುನಾಡು, ಆಂಧ್ರಪ್ರದೇಶ, ಒರಿಸ್ಸಾ, ಬಿಹಾರ, ಪ.ಬಂಗಾಳಗಳ ಮೂಲಕ ಅಸ್ಸಾಂನತ್ತ ಸಾಗುತ್ತಾನೆ ನಾಯಕ. ದುಡಿಯುವ ಜನಗಳಿಗೆ ಗಡಿ-ಭಾಷೆಗಳ ಹಂಗಿಲ್ಲವೆಂದು ಸೂಚ್ಯವಾಗಿ ಹೇಳುತ್ತಲೇ ಆ ರಾಜ್ಯಗಳ ಭಾಷೆ, ಪರಿಸರ, ಜನರನ್ನು ಪರಿಚಯಿಸುವ ನಿರ್ದೇಶಕರು ಆ ಮೂಲಕ ಭಾಷಾ ಸಾಮರಸ್ಯ, ಅಂತರರಾಜ್ಯ ಸೌಹಾರ್ದತೆಯ ಆಶಯವನ್ನು ಬಿಂಬಿಸಿರುವುದು ಗಮನಾರ್ಹ.

ದಶರಥ ಮಾಂಜಿ ! ಬಿಹಾರದ ಈ ಬಡ ರೈತ ತನ್ನ ಪತ್ನಿಯ ಸಾವಿಗೆ ಕಾರಣವಾದ ದೊಡ್ಡ ಬೆಟ್ಟವನ್ನು ಸತತ 22 ವರ್ಷಗಳವರೆಗೂ ಕಡಿದು, ತನ್ನ ಗ್ರಾಮದ ಜನರಿಗೆ ನಗರಕ್ಕೆ ಹೋಗಲು ದಾರಿ ಮಾಡಿಕೊಟ್ಟ ನೈಜ ಘಟನೆಯ ಚಿತ್ರಣವನ್ನು ಚಿತ್ರದಲ್ಲಿ ಅಳವಡಿಸಿರುವುದು ನೋಡುಗರನ್ನು ತೀವ್ರವಾಗಿ ಮನಸೆಳೆಯುತ್ತದೆ. ದಶರಥ ಮಾಂಜಿಯ ಸ್ಮಾರಕ, ಅವನು ಕಡಿದ ಬೆಟ್ಟದ ಚಿತ್ರಣ ಮನಮಿಡಿಯುತ್ತದೆ.

ಅಂತಿಮವಾಗಿ ನಾಯಕ ಶ್ರೀಕಿ ಅಸ್ಸಾಂ ತಲುಪಿ ತನ್ನ ಹುಡುಗಿ ಪ್ರೀತಿಯನ್ನು ಸೇರುವುದರೊಂದಿಗೆ ಚಿತ್ರಮುಗಿಯುತ್ತದೆ. ಮಾಮೂಲಿ ಪ್ರೇಮಕಥೆಯಾದರೂ ಅದರ ಹೊಸತನ, ತಾಜಾತನ ಮತ್ತು ಹೊಸ ಮುಖಗಳಿಂದ ನೋಡುಗನ ಮನಸ್ಸು ಮುದಗೊಳ್ಳುತ್ತದೆ. ನಿರ್ಮಾಪಕ ಗೋವಿಂದ ರಾಜು ತಮ್ಮ ಮಗನನ್ನೇ ನಾಯಕನನ್ನಾಗಿಸಿ ಒಂದು ಸದಭಿರುಚಿಯ ಚಿತ್ರವನ್ನು ಕನ್ನಡಕ್ಕೆ ನೀಡಿದ್ದಾರೆ. ನಾಯಕ ಶ್ರೀಕಾಂತ ಮೊದಲ ಚಿತ್ರದಲ್ಲೇ ಭರವಸೆ ಮೂಡಿಸಿದ್ದಾರೆ. ನಾಯಕಿ ಆಕಾಂಕ್ಷ(ಮುಂಬಯಿ) ತನ್ನ ಕಣ್ಣಂಚಿನಲ್ಲೇ ಭಾವನೆಗಳನ್ನು ವ್ಯಕ್ತಪಡಿಸಿರುವ ರೀತಿ ನಿಜಕ್ಕೂ ಸುಂದರ. ಇದೆಲ್ಲಕ್ಕೂ ಪೂರಕವಾಗಿ ಛಾಯಾಗ್ರಾಹಕ ರವಿಕುಮಾರ್ ಕೂಡಾ ತಮ್ಮ ಮೊದಲ ಪ್ರಯತ್ನದಲ್ಲಿಯೇ ಮನಸೂರೆಗೊಳ್ಳುತ್ತಾರೆ. ನಾಯಕನ ಹಿಂದೆಯೇ ಓಡುವ ಅವರ ಕ್ಯಾಮರ ವಿಭಿನ್ನ ಅನುಭವ ನೀಡುತ್ತದೆ. ದೇವಾರ ಸಂಗೀತದ ಎರಡು ಹಾಡುಗಳು ಮಧುರವಾಗಿವೆ.

ಎಲ್ಲರೂ ಹೊಸಬರೇ, ಎಲ್ಲರಿಗೂ ಇದು ಮೊದಲನೇ ಪ್ರಯತ್ನವಾದ್ದರಿಂದ ಕೆಲವು ಕೊರತೆಗಳು ಇರಬಹುದು. ಮೊದಲ ಕೆಲವು ನಿಮಿಷಗಳು ಮತ್ತು ಕೆಲವೆಡೆ ಚಿತ್ರ ವೇಗ ಕಳೆದುಕೊಳ್ಳುತ್ತದೆ. ಆದರೂ ಸದಭಿರುಚಿಯಿಂದ ಕೂಡಿದ; ಹೊಸತನ್ನು, ಅತ್ಯುತ್ತಮವಾದುದನ್ನೇ ನೀಡಬೇಕೆಂಬ ಅವರೆಲ್ಲರ ತುಡಿತ ಚಿತ್ರದ ಪ್ರತಿ ಫ್ರೇಮಿನಲ್ಲೂ ಕಾಣುತ್ತದೆ. ಚಿತ್ರ ಯಶಸ್ವಿಯಾದಲ್ಲಿ ಕನ್ನಡಕ್ಕೆ ಒಬ್ಬ ಒಳ್ಳೆಯ ನಿರ್ದೇಶಕ, ಒಬ್ಬ ನಾಯಕ, ಅತ್ಯುತ್ತಮ ಛಾಯಾಗ್ರಾಹಕ ಮತ್ತು ನಿರ್ಮಾಪಕ ಸಿಕ್ಕಂತಾಗಿ, ಇವರಿಂದ ಒಳ್ಳೆಯ ಚಿತ್ರಗಳ ಕನಸನ್ನು ಕನ್ನಡ ಪ್ರೇಕ್ಷಕ ಕಾಣಬಹುದು.

ಉದ್ಯೋಗ ಖಾತ್ರಿ : 150 ರೂ ಗೆ ಕೂಲಿ ಹೆಚ್ಚಿಸಿ, ಶಾಸನಾತ್ಮಕ ತುಟ್ಟಿಭತ್ಯೆ ಜೋಡಿಸಿ

ಬೆಂಗಳೂರಿನಲ್ಲಿ ಜನವರಿ 31, 2011 ರಂದು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ, ಪ್ರಾಂತ ರೈತ ಸಂಘ, ಜನವಾದಿ ಮಹಿಳಾ ಸಂಘಟನೆ, ಸಿಐಟಿಯು, ಡಿವೈಎಫ್ಐ ಸಂಘಟನೆಗಳ ನೇತೃತ್ವದಲ್ಲಿ ಉದ್ಯೋಗ ಖಾತ್ರಿಯ ಯೋಜನೆಯ ಸಮರ್ಪಕ ಜಾರಿ, ಕೂಲಿ ಹೆಚ್ಚಳ ಹಾಗೂ ಶಾಸನಾತ್ಮಕ ತುಟ್ಟಿ ಭತ್ಯೆ ಜೋಡಣೆಗಾಗಿ ನಡೆದ ರಾಜ್ಯಮಟ್ಟದ ರ್‍ಯಾಲಿಯ ಚಿತ್ರ





JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027
Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana,12,18th Cross, S.R.Nagar, BANGALORE - 560 027 Karnataka (State) and Published at BANGALORE
No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor: S.Y.GURUSHANTH